₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 08.05.2026 ಸಂಪುಟ: 11 ಸಂಚಿಕೆ: 112 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವಾಸವೇ ವಿಶ್ವ

ಸೂರ್ಯ-ದೇವಿಶಾಗೆ ಹೆಣ್ಣು ಮಗು

ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್, ಪತ್ನಿ ದೇವಿಶಾ ಶೆಟ್ಟಿಗೆ ಗುರುವಾರ ಹೆಣ್ಣು ಮಗು ಜನಿಸಿದೆ. ಇದು ದಂಪತಿಗೆ ಮೊದಲ ಮಗುವಿನ ಸಂಭ್ರಮ. ಚಿತ್ರವನ್ನು ಸೂರ್ಯಕುಮಾರ್ ಸಾಮಾಜಿಕ ತಾಣದಲ್ಲಿ ಪ್ರಕಟಿಸಿ ಸಂಭ್ರಮಿಸಿದೆ.



ಸಮಾಚಾರ ಸಣ್ಣದಲ್ಲ

ಕಲಾದಗಿ ಪದವಿ ಕಾಲೇಜಿಗೆ ಪ್ರವೇಶ

ಕಲಾದಗಿ: ಗ್ರಾಮದ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಹಾವಿದ್ಯಾಲಯದಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಬಿ.ಎ. ಪದವಿಯ ಪ್ರಥಮ ವರ್ಷದ ಪ್ರವೇಶಾತಿ ಆರಂಭವಾಗಿದೆ. ನುರಿತ ಪ್ರಾಧ್ಯಾಪಕರಿಂದ ಗುಣಮಟ್ಟದ ಬೋಧನೆ ಹಾಗೂ ಸಾರಿಗೆ ವ್ಯವಸ್ಥೆ, ಕ್ರೀಡೆ, ರೆಡ್ ಕ್ರಾಸ್, ಮತ್ತು ಸ್ಕೌಟ್ ಮತ್ತು ಗೈಡ್, ಜೊತೆಗೆ ವೈವಿಧ್ಯಮಯವಾದ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸಹಭಾಗಿತ್ವ ಮತ್ತು ಕೌಶಲ ವೃದ್ಧಿಗೆ ಅವಕಾಶವಿದೆ. ಪ್ರವೇಶ ಪಡೆಯಲು ಕೊನೆಯ ಮೇ 30 ರ ಒಳಗೆ ಪ್ರವೇಶಾತಿ ಪಡೆಯಲು ಕಾಲೇಜಿನ ಪ್ರಾಂಶುಪಾಲ ಪ್ರೊ. ಎಚ್. ಬಿ. ಮಹಾಂತೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಹೇಮರೆಡ್ಡಿ ಮಲ್ಲಮ್ಮಾಂಬೆ ಜಾತ್ರೆ

ಕಲಾದಗಿ: ಸಮೀಪದ ಖಜ್ಜಿಡೋಣಿ ಗ್ರಾಮದ ಹೇಮರೆಡ್ಡಿ ಮಲ್ಲಮ್ಮಾಂಬೆ ಜಾತ್ರಾ ಮಹೋತ್ಸವ ಮೇ 8 ರಿಂದ 10ರವರೆಗೆ ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯಲಿದೆ. ಮೇ 8 ರಂದು ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ಜರುಗಲಿವೆ. ಬಳಿಕ ಕಳಸದ ಮೆರವಣಿಗೆ, ಕಳಸಾರೋಹಣ ಕಾರ್ಯಕ್ರಮ ನಡೆಯಲಿದೆ. ಮೇ 9 ರಂದು ಬೆಳಗ್ಗೆ ದೇವಸ್ಥಾನದಲ್ಲಿ ಮೃತ್ಯುಂಜಯ ಹೋಮ ನಡೆಯಲಿದೆ. ರಾತ್ರಿ 9:00ಗೆ ಜಾನಪದ ಗಾನ ಗಾರುಡಿಗ ಗುರುರಾಜ್ ಹೊಸಕೋಟಿ ಅವರಿಂದ ಜಾನಪದ ರಸ ಸಂಜೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಸಿದ್ದಪ್ಪ ಬಿರಾದಾರ ಪಾಲ್ಗೊಳ್ಳಲಿದ್ದಾರೆ. ಜಾತ್ರಾ ಮಹೋತ್ಸವದ ನೇತೃತ್ವವನ್ನು ಖಜ್ಜಿಡೋಣಿ ಶಿವಾನಂದ ಮಹಾಸ್ವಾಮಿ ನೇತೃತ್ವದಲ್ಲಿ ನಡೆಯಲಿದೆ ಎಂದು ಜಾತ್ರಾ ಸಂಘಟಕರು ತಿಳಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ಸಾಮೂಹಿಕ ವಿವಾಹ | ಶಾಸಕ ಜಗದೀಶ ಗುಡಗುಂಟಿ

ಸರಳ ವಿವಾಹ ಆರ್ಥಿಕ ಹೊರೆಗೆ ಬ್ರೇಕ್

ಜಮಖಂಡಿ: ದುಂದುವೆಚ್ಚದ ಮದುವೆಗಳು ಬಡವರಿಗೆ ಆರ್ಥಿಕ ಹೊರೆಯಾಗುತ್ತಿರುವ ಈ ಕಾಲದಲ್ಲಿ, ಸಾಮೂಹಿಕ ವಿವಾಹಗಳು ಬಡ ಕುಟುಂಬಗಳ ಆರ್ಥಿಕ ಪ್ರಗತಿಗೆ ಪೂರಕವಾಗಿವೆ ಎಂದು ಶಾಸಕ ನಾಡೋಜ ಜಗದೀಶ ಗುಡಗುಂಟಿ ಹೇಳಿದರು.

ನಗರದ ಬಸವ ಭವನದಲ್ಲಿ ಮಂಗಳವಾರ ಬೋಧಿಸತ್ವ ಗೌತಮಬುದ್ಧ ನಗರ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಆಯೋಜಿಸಿದ್ದ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂಘಟನೆಯವರು ಸಾಮೂಹಿಕ ವಿವಾಹದ ಮೂಲಕ ಬಡವರಿಗೆ ನೆರವಾಗುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಸಂಘದ ಅಧ್ಯಕ್ಷ ಪರಶುರಾಮ ಕಾಂಬಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿ ವರ್ಷ ಇದೇ ದಿನದಂದು ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನೇರ್ಲಿಯ ಜ್ಞಾನ ಜ್ಯೋತಿ ಬಂತೇಜಿ, ಬಾಗಲಕೋಟೆಯ ಧಮ್ಮಪಾಲ ಬಂತೇಜಿ 12 ಜೋಡಿಗಳಿಗೆ ವಿವಾಹ ಕಾರ್ಯಕ್ರಮ ನೆರವೇರಿಸಿದರು. ಮರೇಗುದ್ದಿಯ ವಿಜಯ ಮಹಾಂತೇಶ್ವರ ಸ್ವಾಮೀಜಿ, ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭುಜಿ ಬೆನ್ನಾಳೆ ಮಹಾರಾಜರು ಸಾನ್ನಿಧ್ಯ ವಹಿಸಿದ್ದರು.

ನಗರದ ಬಸವ ಭವನದಲ್ಲಿ ಮಂಗಳವಾರ ಬೋಧಿಸತ್ವ ಗೌತಮಬುದ್ಧ ನಗರ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಶ್ರಯದಲ್ಲಿ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಿತು.

ಸಾಮೂಹಿಕ ವಿವಾಹದಲ್ಲಿ ಮದುವೆಯಾಗುವುದರಿಂದ ಘನತೆಗೆ ಯಾವುದೇ ಕುಂದುಂಟಾಗುವುದಿಲ್ಲ. ವಿವಾಹಕ್ಕೆ ವ್ಯಯಿಸುವ ಹಣವನ್ನು ದಂಪತಿಗಳು ತಮ್ಮ ಆರ್ಥಿಕ ಏಳಿಗೆಗೆ ಬಳಸಿಕೊಳ್ಳಬೇಕು ಮತ್ತು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು.
ಸುಶೀಲಕುಮಾರ ಬೆಳಗಲಿ, ಜಿಪಂ ಮಾಜಿ ಉಪಾಧ್ಯಕ್ಷ

ಮುಖಂಡರಾದ ಏಗಪ್ಪ ಸವದಿ, ಎ.ಪಿ. ಕುಲಕರ್ಣಿ, ರವಿ ಯಡಹಳ್ಳಿ, ಡಾ. ಎ.ಆರ್. ಬೆಳಗಲಿ, ಶಶಿಕಾಂತ ದೊಡ್ಡಮನಿ, ಅಶೋಕ ನಾರಾಯಣಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುತ್ತಣ್ಣ ಹಿಪ್ಪರಗಿ, ಅಲ್ತಾಫ ಸಗರ, ನಾಗಪ್ಪ ಸನದಿ, ರವಿ ಬಬಲೇಶ್ವರ, ಬಸವರಾಜ ಹಳ್ಳದಮನಿ, ಅಬ್ದುಲ ಜಮಾದಾರ, ಯಾಸೀನ ಲೋದಿ, ರವಿ ಕಾಂಬಳೆ ಇತರರು ಇದ್ದರು. ಬಸವರಾಜ ದೊಡ್ಡಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಬಕವಿ- ಬನಹಟ್ಟಿ ಯಲ್ಲಟ್ಟಿಯ ಕೊಣ್ಣೂರ ಶಿಕ್ಷಣ ಸಮೂಹದ ಸಂಸ್ಥಾಪಕ ಪ್ರೊ. ಬಿ. ಕೆ. ಕೊಣ್ಣೂರರನ್ನು ಗುರುವಾರ ಬೆಂಗಳೂರಿನ ಸರ್‌ಎಂ.ವಿ. ಆಡಿಟೋರಿಯಂನಲ್ಲಿ ರಾಜುಪಾಲ ಥಾವರಚಂದ ಅವರಿಂದ ಮಹಾತ್ಮಾಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಸ್ವೀಕರಿಸಿದರು.

ಬದಾಮಿಯವರ ಕೃತಿಗೆ ದತ್ತಿ ಪ್ರಶಸ್ತಿ

ರಬಕವಿ-ಬನಹಟ್ಟಿ: ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕವು ಬಾಗಲಕೋಟೆ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ ಬೀಳಗಿ ದತ್ತಿ ಪ್ರಶಸ್ತಿಗೆ ರಾಮಪುರದ ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರು, ಹಿರಿಯ ಸಾಹಿತಿಗಳಾದ ಎಂ.ಎಸ್. ಬದಾಮಿ ಅವರ 'ಬದುಕು ಮತ್ತು ಬೆವರು' ಕೃತಿಯನ್ನು ಆಯ್ಕೆ ಮಾಡಿದೆ. ಬದಾಮಿಯವರು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ 46ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.



ವಿವಿಧ ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಕರು, ಮಾರ್ಗದರ್ಶಕರೂ ಆಗಿದ್ದಾರೆ. ಸಾಹಿತಿಗಳಾದ ಎಂ.ಎಸ್. ಬದಾಮಿಯವರಿಗೆ ಹಿರಿಯ ಸಾಹಿತಿಗಳಾದ ಸಿದ್ದರಾಜ ಪೂಜಾರಿ, ಮಲ್ಲಿಕಾರ್ಜುನ ಹುಲಗಬಾಳಿ, ಶಿವಾನಂದ ದಾಶ್ಯಾಳ, ಮೃತ್ಯುಂಜಯ ರಾಮದುರ್ಗ, ಶಿವಾನಂದ ಬಾಗಲಕೋಟಮಠ, ಕಸಾಪ ತಾಲೂಕಾಧ್ಯಕ್ಷ ಮ.ಕೃ. ಮೇಗಾಡಿ, ಚಿದಾನಂದ ಸೊಲ್ಲಾಪೂರ, ಚಂದ್ರಪ್ರಭ ಬಾಗಲಕೋಟ, ಮಲ್ಲಿಕಾರ್ಜುನ ಜವಳಗಿ, ಉದ್ಯಮಿ ಬಸವರಾಜ ದಲಾಲ, ಶಿವಜಾತ ಉಮದಿ, ಸೋಮಶೇಖರ್‌ಕೊಟ್ರಶೆಟ್ಟಿ, ದಾನಪ್ಪ ಆಸಂಗಿ ಇದ್ದರು.

ಇಂದು ದೇವಾಂಗ ಜಾಗೃತಿ ಸಮಾವೇಶ

ಬಾದಾಮಿ: ಸಮೀಪದ ಬನಶಂಕರಿಯಲ್ಲಿ ಇಂದು ಮತ್ತು ನಾಳೆ ಅಖಿಲ ಭಾರತ ದೇವಾಂಗ- ನೇಕಾರ ಜಾಗೃತಿ ಸಮಾವೇಶ-2026, ಶ್ರೀ ದಯಾನಂದ ಪುರಿ ಮಹಾಸ್ವಾಮಿಜಿಯವರ 36 ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭ ಜರುಗಲಿದೆ. ಇದಕ್ಕಾಗಿ ಭರದ ಸಿದ್ಧತೆ ನಡೆದಿದ್ದು, ಬನಶಂಕರಿ ಹತ್ತಿರದ ಭವ್ಯ ಜಾಗದಲ್ಲಿ 240★420 ಫೀಟ್ ಭವ್ಯ ಪೆಂಡಾಲ್ ಹಾಕಲಾಗಿದೆ. ಸುಮಾರು 60 ರಿಂದ 70 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ಭಾಗವಹಿಸಿದ ಎಲ್ಲರಿಗೂ ಉಪಹಾರ, ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಅಖಿಲ ಭಾರತ ದೇವಾಂಗ - ನೇಕಾರ ಜಾಗೃತಿ ಸಮಾವೇಶದ ಸಮಿತಿಯ ಅಧ್ಯಕ್ಷ ರವೀಂದ್ರ ಕಲಬುರ್ಗಿ ಮಾಹಿತಿ ನೀಡಿದರು.

ಕಾರ್ಯಕ್ರಮದ ಸಿದ್ದತೆಗಳನ್ನು ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಸಮಾಜದ ಸಂಘಟನೆ, ಜಾಗೃತಿ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಎಲ್ಲ ರಂಗಗಳಲ್ಲಿ ಸಮಾಜ ಬಾಂಧವರು ಸಂಘಟಿತರಾಗಬೇಕಿದೆ ಎಂದು ತಿಳಿಸಿದರು. ಇಂದು ಶುಕ್ರವಾರ ಬೆಳಗ್ಗೆ 5 ಗಂಟೆಗೆ ಶ್ರೀ ಬನಶಂಕರಿದೇವಿಗೆ ಅಭಿಷೇಕ, 6 ಗಂಟೆಗೆ ಸಣ್ಣಕ್ಕಿ ಬಾಗೂರು ಶ್ರೀ ಬನಶಂಕರಿದೇವಿ ಉತ್ಸವ ಮೂರ್ತಿಯ ಆಹ್ವಾನದೊಂದಿಗೆ ಶ್ರೀಚೌಡೇಶ್ವರಿ ದೇವಿಯ ಕತ್ತಿ ಹಬ್ಬದ ಉದ್ಘಾಟನೆಯನ್ನು ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಭೀಮಸೇನ ಚಿಮ್ಮನಕಟ್ಟಿ ನೆರವೇರಿಸುವರು. ಮಧ್ಯಾಹ್ನ 12 ಗಂಟೆಗೆ ವೇದಿಕೆ ಕಾರ್ಯಕ್ರಮಗಳು ಆರಂಭವಾಗಲಿದ್ದು, ದಯಾನಂದ ಪುರಿ ಶ್ರೀಗಳು, ಬಸವರಾಜ ಪಟ್ಟದಾರ್ಯ ಶ್ರೀಗಳು ಸೇರಿದಂತೆ ಆರು ಜನ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಸಮಾರಂಭವನ್ನು ಕೇಂದ್ರದ ಗ್ರಾಹಕ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸುವರು.

ಈ ಸಂದರ್ಭದಲ್ಲಿ ಹಂಪಿ ಹೇಮಕೂಟದ ದಯಾನಂದ ಪುರಿ ಮಹಾಸ್ವಾಮಿಗಳು, ಮುಖಂಡರಾದ ಸಿ.ಎಲ್.ಧನಪಾಲ್, ಟಿ.ರಾಜೇಶ, ಎಚ್.ಪರಮೇಶ್ವರಪ್ಪ, ಕೆ.ಸಿ.ತಿಮ್ಮಶೆಟ್ಟಿ, ಸಂಕಣ್ಣ ಕರಡಿಗುಡ್ಡ, ಟಿ.ಆರ್.ಉಮಾಪತಿ, ಚುಡಾಮನಿ ಕೇಶವಮೂರ್ತಿ,ಕುಮಾರ ಶೇಬಿನಕಟ್ಟಿ, ಮಹೇಶ ಶೇಬಿನಕಟ್ಟಿ, ಗವಿರಂಗಯ್ಯ, ಶ್ರೀಧರ ದೇವಾಂಗ, ಸತೀಶ ಸಪ್ಪರದ, ಭಾರತಿ ರಮೇಶ, ಉಮೇಶ ಕಂದಗಲ್, ದಿನೇಶ ಗಿಡ್ನಂದಿ, ಆರ್.ಜೆ. ರಾಮದುರ್ಗ,ರವಿ ಬಳಿಗೇರ, ಬಸವರಾಜ ಕುದರಿ, ಸತೀಶ ಸಪ್ಪರದ, ಹೇಮಾದ್ರೆಪ್ಪ ಕೊಪ್ಪಳ, ಬಸವರಾಜ ವಡ್ಡೊಡಗಿ, ಟಿ.ಎಂ.ಜಲೇಂದ್ರ, ನಾಗಪ್ಪ ಭಾವಿಕಟ್ಟಿ ಇದ್ದರು.

MAG FINSERV
Loans for Better Living

ಮ್ಯಾಗ್ ಫಿನ್‌ಸರ್ವ್ ಕಂಪನಿ ಲಿಮಿಟೆಡ್.

" ಮ್ಯಾಗ್ ಹೌಸ್ " ಲಕ್ಷ್ಮಿ ನಗರ ಫಲ್ಟನ್ ಲಲಿತ್ ಮೋಹನ್ ಬಜಾರ್ ಹಿಂದೆ .

ಹರಾಜು ಸೂಚನೆ

ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಿದ್ದರೂ ಸಹ ಮ್ಯಾಗ್ ಫೈನಾನ್ಸ್ ಕಂಪನಿ ಲಿಮಿಟೆಡ್ "ಮ್ಯಾಗ") ತಮ್ಮ ಸಾಲಗಳನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಪಾವತಿಸದ ಬಾಕಿ ಇರುವ ಚಿನ್ನದ ಆಭರಣಗಳ ಹರಾಜನ್ನು ನಡೆಸುತ್ತಿದೆ ಎಂದು ಸಂಬಂಧಪಟ್ಟ ಎಲ್ಲಾ ಸಾಲಗಾರರು ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವಿಟ್ಟ ಚಿನ್ನದ ಆಭರಣಗಳ ಸಾರ್ವಜನಿಕ ಹರಾಜನ್ನು 22.05.2026 ರಂದು ಮಧ್ಯಾಹ್ನ 2:00 ಗಂಟೆಗೆ "ಮ್ಯಾಗ್ ಹೌಸ್" ಲಲಿತ್ ಮೋಹನ್ ಬಜಾರ್ ಲಕ್ಷ್ಮಿ ನಗರ ಫಲ್ಟನ್ – 415523 ನಲ್ಲಿ ನಡೆಸಲಾಗುತ್ತಿದೆ. ಬಿಡ್ದಾರರನ್ನು 22 ಮೇ 2026 ರಂದು ಬೆಳಿಗ್ಗೆ 09.00 ರಿಂದ ಮಧ್ಯಾಹ್ನ 12.00 ರವರೆಗೆ ಚಿನ್ನದ ಆಭರಣಗಳನ್ನು ಪರಿಶೀಲಿಸಲು ಮತ್ತು ಬಿಡ್ ಮಾಡಲು ನಿಮ್ಮನ್ನು ಆಹ್ವಾನಿಸಲಾಗಿದೆ. ಸ್ಥಳ ಅಥವಾ ದಿನಾಂಕದಲ್ಲಿನ ಯಾವುದೇ ಬದಲಾವಣೆಯನ್ನು ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ಉಲ್ಲೇಖಿಸಲಾದ ದಿನಾಂಕದಂದು ಹರಾಜು ನಡೆಸಲು ಸಾಧ್ಯವಾಗದಿದ್ದರೆ ಅಥವಾ ಅದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ 'ಮ್ಯಾಗ್' ಮುಂದಿನ ಯಾವುದೇ ದಿನಾಂಕದಂದು ಅದೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಹರಾಜನ್ನು ನಡೆಸುವ ಅಥವಾ ನಂತರ ಹರಾಜನ್ನು ನಡೆಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಗ್ರಾಹಕರ ಮರಣದ ಸಂದರ್ಭದಲ್ಲಿ ಹರಾಜಿಗೆ ಸಂಬಂಧಿಸಿದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ನಾಮನಿರ್ದೇಶಿತ ವ್ಯಕ್ತಿ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯಿಸುತ್ತವೆ.

ಚಿಕ್ಕೋಡಿ ಮಂಜು ಕೆಂಪಣ್ಣ ಅಲುರೆ (00492619843801), ಗಿರಿಶ್ ಘಟ್ಟಿ (00492619796201), ಭಾರತಿ ಅಭಯ್ ಕುಡಲೆ (00492612295606), (00492612257005), ಮಾರುತಿ ರಾಮಪ್ಪ ಹುಲ್ಯಗೋಳ್ (00492619959103), ವಂದನಾ ಅಶೋಕ್ ವಡವಡೆ (00492619454801), (00492614785703), (00492614839503), (00492610204705), (00492616444303), (00492609066305), ಸಾಗರ್ ಕಲ್ಲಪ್ಪ ಹೆಳವಿ (00492604768007), ದಸ್ತಗೀರ್ ಸಲಾವುದ್ದೀನ್ ಬೆಪಾರಿ (00492611755805), ಅಶ್ವಿನಿ ಅಶೋಕ್ ಧಾಕೆ (00492620201301), ಚಂಪಾಬಾಯಿ ಸದಾಶಿವ ಧಮನ್ನವರ್ (00492615516404), ಚಂದಾನಿ ಕುಮಾರ್ ಯಡಗುಡೆ (00492612371004), ಸೂರಜ್ ರವಿ ತೆರದೇಲೆ (00492616295303), ಶ್ರುತಿ ಯಡಗುಡೆ (00492611449904), ಅಜಿತ್ ಲಕ್ಷ್ಮಣ್ ಲೋಕರೆ (00492611396104), ಮೋಹನ್ ಭಾಸ್ಕರ್ ಬೆಳಕುಡೆ (00492619662201), ಆಯಿಷಾ ಅಬಿಜೀತ್ ಘಟ್ಟಿ (00492606232105), (00492612380903), (00492613325104) , ಮುಬಾರಕ್ ನಸರಲಿ ಭಗವಾನ್ (00492614462304), ಸುರೇಶ್ ದುಂಡಪ್ಪ ಹುಲ್ಲೆನ್ನವರ್ (00492613420704), ಬಸವರಾಜ್ ಆತ್ಮರಂ ಲೋಕಣ್ಣವರ (00492614063203), ಸುನಿಲ್ ರಾಮಪ್ಪ ಅಮ್ಮಿನ್ಭಾವಿ (00492619715201), ರೂಪಾ ಅಶೋಕ್ ಮಾಡಿಗ್ (00492619434701), ಗೌರವ್ವ ರಾಜು ಕಲ್ಲೆ (00492613023804), ನೀಲವ್ವ ರಮೇಶ್ ಕಾಂಬ್ಳೆ (00492603471005) , (00492603918805), (00492611245903), ಕುಮಾರ್ ಕಾಶಪ್ಪ ಕೊರವಿ (00492619083401), (00492618299903), ಸನತ್ಕುಮಾರ್ ಚಂದ್ರಕಾಂತ್ ಕುರಡೆ (00492612814803), ಅಸ್ಲಾಂ ಗೈಬಿಸಾಬ್ ಪಟ್ಟಂಕುಡೆ (00492619449801), ಆರತಿ ಮಹಾಂತೇಶ್ ಕಂಬಳೆ (00492610902903), (00492619797801), ನಿತಿನ್ ಡೇವಿಡ್ ಅವಳೆ (00492612775706), ಅಂಜನಾ ರಾಮಚಂದ್ರ ಗಂಗಾಯಗೋಳ್ (00492615639203), ಶಿವರಾಜ್ ದಿಲೀಪ್ ಕಾಂಬ್ಳೆ (00492606315406), ಗೀತಾ ಮಲ್ಲಪ್ಪ ಕಾಂಬ್ಳೆ (00492615316503), ಮಾರುತಿ ಸತ್ಯಪ್ಪ ಕರೋಲಿ (00492619910201), ಇಮ್ತಿಯಾಜ್ ಅಕ್ಬರ್ ಮೊಗಲ್ (00492618935701) , ಅನುಸಯ ಕುಮಾರ್ ಅಶೋಡೆ (00492606059205), (00492615097903), ಸುನಿತಾ ಅಶೋಕ್ ಮಾಲಿ (00492612160804) , ವಿಜಯಲಕ್ಷ್ಮಿ ಪ್ರಭಾಕರ್ ಕರನೂರೆ (00492616508503), ಸ್ವಪ್ನ ರಾಜೇಂದ್ರ ದಾನಣ್ಣವರ್ (00492612992603), ಮನೋಹರ್ ಅಣ್ಣಪ್ಪ ಘಟ್ಟಿ (00492619895701), ಭಾರತಿ ಶಿವಾನಂದ ಗಡಿವಡ್ಡರ (00492620305301), ತಯವ್ವ ಸದಾಶಿವ್ ಮದಾರ್ (00492619299601), ಭಾರತಿ ಸುಖದೇವ್ ಮಂಜ್ರೇಕರ್ (00492619831801), ಸವಿತಾ ಅತೀಶ್ ಅಪ್ಪಾಜಿಗೋಲ್ (00492614528504), ಭರತ್ ಮಹಾದೇವ್ ಅಕ್ಕೋಲೆ (00492620031901), ಸುನೀಲ್ ಗಣಪತಿ ಶಿಂಧೆ (00492619180001) , ಅಜಿತ್ ಕೆಂಪಣ್ಣ ಮದಾರ್ (00492619381701), ರಕೀಫಾ ಆಯುಬ್ ಕಾಜಿ (00492612979304), (00492619370501), ಪರವ್ವ ಸದಾಶಿವ್ ಪೂಜಾರಿ (00492619968701), ಜೈಬುನ್ನಿಸಾ ರಸೂಲ್ ತಶೀಲ್ದಾರ್ (00492612893004), ಮಂಜುನಾಥ ಸುಭಾಷ್ ಸನದಿ (00492619356901), ಮುಜೀಬ್ ಅಬ್ದುಲ್ಮಜೀದ್ ಬೇಪಾರಿ (00492614750103), ಮುಖೇಶ್ ಅನಿಲ್ ಕುರಾನೆ (00492610634303), ಸಿದ್ದಾರೂಡ ಮಾರುತಿ ಸನದಿ (00492616683202), ರಾಕೇಶ್ ಅಶೋಕ್ ಕದಮ್ (00492619545204) , ಮುರಾರಿ ಮಾಯಪ್ಪ ಧನಜೆರ್ (00492619225801), ಜಯ ಸುನಿಲ್ ಪವಾರ್ (00492613197803), ಬಸವರಾಜ ಕುರಾನೆ (00492619360601), ಫಿರೋಜ್ ರಶೀದ್ ರಾಮಜನ್ (00492611504504), ಫಟಿಗೆಪ್ಪ ಪಾವಡಿ ಹಲಜೋಳೆ (00492619625901), ಇರಣ್ಣ ಯಂಕಪ್ಪ ಒಂಟೆ (00492620147601), ಶಿವರಾಯ್ ಮಾರುತಿ ಕಾಂಬ್ಳೆ (00492614826203) , ದುಂಡವ್ವ ಮಲ್ಲಪ್ಪ ಘರಬುಡೆ (00492612356304), (00492612338005), ಮಯೂರ್ ಪರೇಶ್ ಕುಂಬಾರ್ (00492614541003), ಮಿನಾಕ್ಷಿ ಶಿಡ್ಲಪ್ಪ ಖೋಕಟೆ (00492612676404), ಪ್ರವೀಣ್ ದುರ್ಗಪ್ಪ ವಡ್ಡರ್ (00492612756403) , ಚೇತನ್ ಮದುಕರ್ ಕಲಿಶಿಂಗೆ (00492612899604), ಶಾಂತಾ ರಮೇಶ್ ಭಿನಾಯಕ್ (00492613114503), ಆನಂದ್ ಬಲಯ್ಯ ಹಿರೇಮಠ (00492613266403), ಸುರೇಖಾ ಅನ್ನಾಸೊ ಕಾಂಬ್ಳೆ (00492613545503), ಸುನಿಲ್ ಶಂಕರ್ ಅವಂದಕರ್ (00492619204601), ಸತ್ಯೆವ್ವ ಮಹಾದೇವ್ ಮಾಡಿಗ್ (00492614897004), ಸವಿತಾ ಜ್ಯೋತಿರಾಮ್ ತುಕನ್ (00492615747703), ಸಫುರಾ ಇರ್ಶಾದುಸ್ಸೈನ್ ನದಾಫ್ (00492615244603), ವಿಶ್ವನಾಥ ಮಾರುತಿ ಕುರಲೆ (00492618837003), ಅಸ್ಮಾ ಅಬ್ದುಲ್ಖಾದರ್ ಬೇಪಾರಿ (00492619505601), ಸಂತೋಷ್ ಸದಾಶಿವ್ ದೇವರುಶಿ (00492615884403), ಕಲ್ಲೇಶ್ ಭರಾಮಪ್ಪ ಪಟ್ಟದ (00492616312004), ತೋಹಿದ್ ಇನ್ನ ಬಾಗವಾನ್ (00492617518804) , ಯಲ್ಲವ್ವ ಮಾರುತಿ ಗೌರಗೋಳ್ (00492617843003), ರಾಜು ದತ್ತು ಮಾಲಿ (00492618896303), ಶಿವಲೀಲ ಚನ್ನಪ್ಪ ಕೋಟಿವಾಲೆ (00492618949201), ಮಲ್ಲಿಕಾರ್ಜುನ್ ಮಾರುತಿ ಮಗದುಮ್ (00492618996201), ಸಂಗೀತಾ ಶ್ರೀಶೈಲ್ ಕಡಪುರೆ (00492619549301), (00492619544302), ಹಲಪ್ಪ ಅಪ್ಪಯ್ಯ ಧನಜೆರ್ (00492619058201), ಬಸವರಾಜ್ ಮಲ್ಲಪ್ಪ ವಠಾರೆ (00492619076801), ರಾಹುಲ್ ಬಸವಣ್ಣಿ ಕೊರವಿ (00492619186801), ರಾಜು ಬಸವಂತ್ ಬಡಿಗೇರ್ (00492619201501), ಮಾರುತಿ ನಿಂಗಪ್ಪ ಬಡಿಗೇರ್ (00492619752101), ಲಕ್ಷ್ಮಿ ಚಿದಾನಂದ್ ತಲಾವಾರ್ (00492619339501) , ಮಹೇಶ್ ವಿಟ್ಟಲ್ ಕೊಟ್ರೆ (00492619351201), ಭಾಗ್ಯ ವೀರಕುಮಾರ್ ಮುಖರೆ (00492619647804), ಸವಿತಾ ಮಲ್ಲಿಕಾರ್ಜುನ್ ವಾಡರ್ (00492619653602), ಮಿನಾಕ್ಷಿ ಮನೋಹರ್ ಕಾಂಬ್ಳೆ (00492619840101), ಸಿದ್ರಾಮ್ ಲಕ್ಷ್ಮಣ್ ಕಾಂಬ್ಳೆ (00492619872601), ಮಿನಾಕ್ಷಿ ಶಿವಪ್ಪ ಮಜಲಟ್ಟಿ (00492619881601), ಸುರೇಖಾ ಚಿಂತಾಮಣಿ ತುಳಸಿಕಟ್ಟೆ (00492620083101), ಚಿದಾನಂದ ಕಲ್ಲಪ್ಪ ಸತ್ವಾರ್ (00492619894801), ಅರುಣ್ ರಾಜರಾಮ್ ಕದಮ್ (00492619909101), ಶಬಾನಾ ರಿಯಾಜ್ ಜಮದಾರ್ (00492619911701), ಪೂರ್ಣಿಮಾ ಸಂಜೀವ ದೇವರುಶಿ (00492620202301), ರಾಹುಲ್ ಭಾಸ್ಕರ್ ಬಲನಾಯಕ್ (00492620219501), ರಿಜ್ವಾನ ತನ್ವೀರ್ ಜರಿ (00492620229701) , ಕಲ್ಲಪ್ಪ ಮಲ್ಲಪ್ಪ ಯಡಗುಡೆ (00492620234601), ರಾಘವೇಂದ್ರ ಅಶೋಕ್ ಶಿಂಗೆ (00492620296501), **ಗೋಕಾಕ್** ಭಾರತಿ ಭೀಮಾಶಿ ಭಜಂತ್ರಿ (01672610877103), ಅಂಜುಮ್ ನಾಶೀರ್ ಬೋಜಗರ್ (01672616904403), ಧನಶ್ರೀ ವೆಂಕಟೇಶ್ ಬಾವಡೇಕರ್ (01672613090903), ಮಮತಾಜ್ ಶಬ್ಬೀರ್ ಸನದಿ (01672609657503), (01672609658006), (01672610452303) , ಪರವೀನ್ ಆಸಿಫ್ ಬೋಜಗರ್ (01672614704502), ಪೂಜಾ ಮಂಜುನಾಥ ಮಾಂಗ್ (01672620014101), ಕವಿತಾ ಸತಪ್ಪ ಸತಪ್ಪಗೋಳ್ (01672620050701), ಐಶ್ವರ್ಯ ಸಚಿನ್ ಮರ್ಧಿ (01672616961003), (01672617380803), ಹಮೀರಹಮದ್ ಮುಲ್ಲಾ (01672612022302), (01672605492002), ಅಬ್ದುಲ್ಮಜೀದ್ ನಜೀರಹ್ಮದ್ ಪೀರಜಾದೆ (01672613270103) , (01672620262501), (01672612623405), (01672613093705), ಅಫ್ರಬ್ಬಿ ಮಹಮ್ಮದ್ ರಫೀಕ್ ಚವಾಣ್ (01672615923102), ರಾಜೀಯ ಬೋಜಗರ್ (01672620120401), ಆನಂದ್ ಮನೋಹರ್ ಬರಿಮಾನಿ (01672618948601) , (01672619038801), (01672619168101), (01672612218803), (01672619480601), (01672619538301), (01672619588301), (01672619687001), (01672619742101), (01672619755201), (01672619756101), (01672619756501), (01672619757001), (01672619762001), (01672619850001), (01672619883901), (01672619898501), (01672619898701), (01672619920301), (01672620039501), (01672620040501), (01672620057501), (01672620057601), (01672620063901), (01672620064001), (01672620064601), (01672614468903), (01672620064701), (01672620136201), (01672620163701), (01672620199401), (01672620309201), ಯಾಸ್ಮಿನ್ ಇಮಾಮ್ಸಾಬ್ ಬಾಲೆಕುಂದ್ರಿ (01672610972502), ಅಲ್ತಾಫ್ ಅಸ್ಕರಾಲಿ ದೇಸಾಯಿ (01672611515302) , (01672610352804), (01672611717602), ಕಿರಣ್ ಪತ್ತಾರ್ (01672620325901), ನೂರ್ಜಹಾನ್ ಗಜಬರ್ಸಾಬ್ ಬಾಗವಾನ್ (01672614465402), (01672613533002), ಕಣ್ಣಪ್ಪ ಶಂಕರೆಪ್ಪ ಸೊಗಲಿ (01672616350603), ಸುರೇಶ್ ಮಹಾದೇವ್ ಹರಿಜನ್ (01672619281101), ನಾಗಪ್ಪ ಅಪ್ಪಾಯ ಕರಿಹೋಳಿ (01672613581203), ಬಾಸುರಾಜ್ ಕಲ್ಲಪ್ಪ ಮುತ್ತೆಪ್ಪಗೋಳ್ (01672614089502), ರೇಣುಕಾ ಶ್ರೀಕಾಂತ್ ಕೋಲಿ (01672615290302), ಮಹಾಬೂಬ್ ಸುಬಾನಿ ಇಮಾಮ್ಸಾಬ್ ಸನದಿ (01672619475901), ರವಿರಾಜ್ ದುರ್ಗಪ್ಪ ಸತಾಶಿಂಧೆ (01672620322201), ಯಲ್ವ ಇರಪ್ಪ ಗೌಡರ್ (01672618980501) , ಅಜಿತ್ ನಾಗಪ್ಪ ಘಾಸ್ತಿ (01672616916303), ಲಕ್ಷ್ಮಣ ಲಕ್ಕಪ್ಪ ದುಗನವರ್ (01672619840501), ಸತ್ಯವಾನ್ ಉತ್ತಮ್ರಾವ್ ಸುತಾರ್ (01672619648701), (01672619981501), (01672620203701), ವಿಟ್ಟಲ್ ರಾಮಪ್ಪ ತಳವಾರ್ (01672618570503), ವಸಂತ್ ಬೋರಗೌಡ್ (01672618152301), ಆಯಿಷಾ ಭಗವಾನ್ (01672619070601), ಸಂಜೀವ್ ವಿಟ್ಟಲ್ ಗೊಂಡಾಲಿ (01672619128401), ರೂಪಾ ಸುರೇಶ್ ಗೋಕಾನ್ವಿ (01672619337401), (01672619351301), ಅಡಿವೆಪ್ಪ ಬಸಲಿಂಗಪ್ಪ ಅಂಕಲಗಿ (01672619638501), ಕೆಂಚವ್ವ ಪುಂಡಲಿಕ್ ಕಲ್ಲೋಳಿ (01672619700501), ಪವಡೆಪ್ಪ ರಣಪ್ಪಗೋಳ್ (01672620078201), ವಿಟ್ಟಲ್ ಜಕ್ಕಪ್ಪ ಹರಿಜನ್ (01672620114101), ಬಸವರಾಜ ಹೊಸಮನಿ (01672620212701), ಶಿವಪ್ಪ ಬಸಪ್ಪ ಮಯಗೇರಿ (01672620294401), ವಿಟ್ಟಲ್ ನಾಗಪ್ಪ ಬಡಿಗೇರ್ (01672620383202), **ನಿಪಾನಿ** ರವಿಶಂಕರ್ ಗಡಿವಡ್ಡರ (00372614321302), ಸಂದೀಪ್ ದಶರಥ್ ಘಟೇಕರಿ (00372614527802), ಮಹೇಶ್ ಮಾರುತಿ ಪಾಟೀಲ್ (00372618179802) , ಜಯದೇವ್ ಓಂಪ್ರಕಾಶ್ ವೈಷ್ಣವ್ (00372620124301), (00372617889202), ಭಿಕಾಜಿ ಲಕ್ಷ್ಮಣ್ ಭೋಸಲೆ (00372619355001), ಲೋಹರ್ ಉರ್ಮಿಳಾ ನಾಮದೇವ (00372615788902), ಅಪ್ಪಾಸೋ ಶಿವಪ್ಪ ಮೋಹಿತೆ (00372611282002), ಇಂದುಮತಿ ರಾಶಿಕಪುರ ದರಬಾರೆ (00372611857402), ಮಿಥುನ್ ಚಂದ್ರಕಾಂತ್ ಪೌವಾರ್ (00372610542802), (00372610541102), ಅರ್ಜುನ್ ರಾಜು ಸಕತ್ (00372613954002), (00372615413602), (00372615412902), (00372613205302), (00372615209302), (00372614197602), (00372613627202), ನಾಗೇಶ್ ಶಂಕರವಾ ಹೆಗಡೆ (00372619765601), ತ್ರಿವೇಣಿ ಮಿಲ್ಡಂದ್ ಕ್ಯಾಂಬಳೆ (00372615263803), ಖಾಲಿದ್ ಹುಮಾಯುನ್ ನಲ್ಬಂದ್ (00372614590902), (00372614588502), (00372614590402), (00372614589902), ಸುಜಾತ ಸಂಜಯ್ ಕಟ್ಟಿಮನಿ (00372619054601), ಅನಿತಾ ವಿಕಾಸ್ ಕಾಂಬ್ಳೆ (00372620204301), (00372615171702), ತನಾಜಿ ರಾಮಚಂದ್ರ ದಾವರಿ (00372615902102), ರುಕ್ಸಾನ ಕುಟಬುದ್ದೀನ್ ಜಮಾದಾರ (00372615285203), (00372616294802), ಸಾನಿಕಾ ಪಾಂಡೆ (00372614287302), (00372614286902), ವಿಜಯ್ ಓಂಪ್ರಕಾಶ್ ವೈಷ್ಣವ್ (00372614402802), (00372619008002), (00372612206303), (00372614790702), (00372614245602), ಸುಧಾ ಉದಯ್ ಶಿಂಧೆ (00372617181002), (00372617531002), ಸಂದೀಪ್ ಹಣಮಂತ್ ಗಡಿವಡ್ಡರ (00372617118802), ಫಿರೋಜ್ ಅಮೀನ್ ಕಲಾವಂತ್ (00372618294301), ವರ್ಷಾ ಮೈಕಲ್ ಐವಾಲೆ (00372620277901), ಸೋನಾಲಿ ಯೋಗೇಶ್ ಆವಾಲೆ (00372619759601), (00372620611101), ನಂದಕುಮಾರ್ ಬಾಬು ಕಾಂಬ್ಳೆ (00372614136402), ಪಾಕೀಜಾ ರಸೂಲ್ ರಸೂಲ್ ಮುಲ್ಲಾನಿ (00372616283702), (00372614541102), ಫಯಾಜ್ ಬಾದ್ಶಾ ಮುಜಾವರ್ (00372619489201) , ಅಮರ್ ಗಣೇಶ್ ಗಡಿವಡ್ಡರ (00372620319301), ಸಂತೋಷ್ ಭೀಕುಲಾಲ್ ಮೇಸ್ತ್ರಿ (00372618928801), (00372619075701), (00372620064101), (00372620144701), ಕಿರಣ್ ದಿನಕರ್ ಜಿರಾಜೆ (00372612460602), ನರೇಂದ್ರ ಬಚು ವಾಘೇಲಾ (00372620058001), ಸಾಗರ್ ಮಹಾದೇವ್ ಗಾಯಕಾವದ್ (00372615026702), ಸೂರಜ್ ಆನಂದ್ ವಡ್ಡಾರ್ (00372615595302), ಸರಿತಾ ರಮೇಶ್ ಕಾಂಬ್ಳೆ (00372614560202), (00372619929401), (00372619940301), ರಾಜೇಶ್ ಅಣ್ಣಪ್ಪ ಕಾಂಬ್ಳೆ (00372613509602), ಪ್ರಕಾಶ್ ದಶರಥ್ ಕಾಂಬ್ಳೆ (00372619778001) , ಅಂಜುಮ್ ಮಹಮದ್ ಜಮಾಲ್ (00372614131702), ಸುಮಿತ್ ಮಹಾದೇವ್ ವಡಕರ್ (00372614259703), ವಿನಾಯಕ್ ಸದಾಶಿವ್ ಟಿಪ್ಪೆ (00372619969101), ಭೀಮ ಅನ್ನಪ್ಪ ಫೇಸ್ಟ್ (00372615906002), ಉಮೇಶ್ ನಂದಕುಮಾರ್ ಮಾನೆ (00372619862301), ಸಂತೋಷ್ ತುಕಾರಾಮ್ ಸುತಾರ್ (00372616533302), ಸನ್ನಿ ಸಂಜಯ್ ಚೌಗುಲೆ (00372618078502) , ಸೂರಜ್ ಸುರೇಶ್ ಗವಲಿ (00372619699101), ಸಂದೀಪ್ ಸಂಜಯ್ ಚೌಗಲೆ (00372619118701), (00372618527802), ಅಮಿತ್ ಕಿಸಾನ್ ವಡ್ಡಾರ್ (00372619050901), ಪ್ರಣಿಲ್ ಪಾಟೀಲ್ ಪ್ರಶಾಂತ್ (00372619098001), ಫಿರೋಜ್ ಅಕ್ತರ್ ನದಾಫ್ (00372619177301), ಸಾಗರ್ ದಾದಾಸೋ ನಾಯಕ್ (00372619302901), ಸತೀಶ್ ಯಶ್ವಂತ್ ಕಾಂಬ್ಳೆ (00372620200901) , ಪ್ರವೀಣ್ ವಿಲಾಸ್ ಟಿಪುಕಡೆ (00372619550401), ಇರ್ಫಾನ್ ಜಹಾಂಗೀರ್ ಪಠಾಣ್ (00372619595301), ನಸ್ರಿನ್ ಆಯುಬ್ಖಾನ್ ಮೋಮಿನ್ (00372619950701), ವಿನಾಯಕ್ ಬಾಬು ಹೇರಾಲೆ (00372620092901), ಯಶವಂತ ಮನೋಹರ್ ಸುತಾರ್ (00372620210901), ಸಂಗೀತಾ ಸಂತೋಷ್ ಸುತಾರ್ (00372620128701), ಸುರೇಶ್ ಜ್ಯೋತಿಬಾ ನಿಕಂ (00372620206701) , ರಾಜೇಂದ್ರ ವಸಂತ್ ಖೋಟ್ (00372620226501), ಸರಲಬಾಯಿ ಸಾಂಭಾಜಿ ಕಾಂಬ್ಳೆ (00372620315401), ಭಾರತಿ ಭೀಮಪ್ಪ ತಳವಾರ್ (00372620317501), **ಸಂಕೇಶ್ವರ** ಸ್ವಪ್ನಲಿ ಬಸವಾನಿ ಸನದಿ (01032619970201), (01032619971401), ಅಮುಲ್ ಅನಿಲ್‌ಬಾಬು ಮನವದ್ದರ್ (01032609494805), ಆದಿಲ್ ಅಲ್ಲನ್ (01032620276901), ಸಂತೋಷ ಶಿವಪ್ಪ ಚನಬಸನವರ (01032619126203), (01032619335903), ಮಲಪ್ಪ ತ್ಪಣ್ಣ ದಳವಾಯಿ (01032612512003), ಆನಂದ್ ಮಲ್ಲಪ್ಪ ಯಶವಂತ್ (01032615289303), ಭಾಗ್ಯಶ್ರೀ ದತ್ತು ಬಾಗಡಿ (01032615385605), ದತ್ತು ಅಪ್ಪಯ್ಯ ಬಾಗಡಿ (01032620274201), ಚಂದ್ರಕಾಂತ್ ಯಮನೇಶ್ ಪೊವಾರ್ (01032620007301), ರಾಮಪ್ಪ ಶೆಟ್ಟಪ್ಪ ಸನಪ್ಪಗೋಳ್ (01032615884405), ಸುದರ್ಶನ್ ಗುರುನಾಥ್ ಚಿಗಾರಿ (01032616826705), ಹನುಮಂತ ರಾಜು ಕ್ಯಾಮನಾಕೋಲ್ (01032619622401), ಸತ್ಯವ್ವ ಬಾಲು ಸನದಿ (01032619899601), (01032619900101), ಅಣ್ಣಾಸಾಬ್ ಮಾರುತಿ ಹಿರೇಕೋಡಿ (01032620007501), ಲಕ್ಷ್ಮಿ ಮಲ್ಲಪ್ಪ ಪಾಟೀಲ್ (01032620046901), **ಬೆಳಗಾವಿ** ಯೋಗೇಶ್ ಬಬನ್‌ರಾವ್ ಪೋಟದಾರ್ (00502618072801), (00502619757501), (00502618584903), ರಾಜಶ್ರೀ ಭಾರತ್ ಕದಮ್ (00502612593004) , ಪ್ರಕಾಶ್ ಶಶಿಕಾಂತ್ ನೇಸರಿಕರ್ (00502617127003), ಬಸಪ್ಪ ರಾಮಪ್ಪ ಮುನೆನ್ನಿ (00502619305401), (00502619562901) , ಶಾರದಾ ರಾಜು ಮೇನಸ್ (00502614527303), ಅಮಿತ್ ಬಸವನಾಥ್ ಪಾಟೀಲ್ (00502609709803), ನಂದಿನಿ ಪ್ರಮೋದ್ ಜಾಧವ್ (00502619356201), ಪ್ರಣೀತ ಚಂದ್ರಕಾಂತ್ ಪಾಟೀಲ್ (00502612605704), ಜಯಶ್ರೀ ಹನಮಂತ್ ಲೋಹರ್ (00502619863601), ನಿಶಾ ಶಂಕರ್ ಲೋಂಡೆ (00502613870503), ಡಿಮೋಪಾಲ್ ದಾದು ಚೌಗಲೆ (00502619089603) , ಪ್ರಭಾವತಿ ಹೇಮಂತ್ ದೇವರಮಣಿ (00502614606603), ನಂದಿನಿ ಪ್ರಮೋದ್ ಜಾಧವ್ (00502619614801), ರವಿ ಮಹಾದೇವ್ ಸಲುಂಖೆ (00502615887703), ಸುನಿಲ್ ಮಾರುತಿ ಕಾಂಬ್ಳೆ (00502605279605), ಸಾದಿಕ್ ಅಬ್ದುಲ್ ರಶೀದ್ ಧಾರವಾಡಕರ್ (00502610363207), (00502620181501), ರೋಹನ್ ಪ್ರಕಾಶ್ ನೇಸರಿಕರ್ (00502615936603), ಲಕ್ಷ್ಮಿ ಮಲ್ಲಪ್ಪ ಮೋದಿ (00502619482001), ಚೈತನ್ಯ ವಿಜಯ್ ಕಿರಾಜಿ (00502610894903), ರಫೀಕ್ ಶೌಕತ್ ಹುಜಾದರ್ (00502620117601) , ಹರೀಶ್ ರವಿ ಮೋದಗೇಕರ್ (00502620268201), ರಾಧಿಕಾ ವಿಟ್ಟಲ್ ಮೇಳಿನಮಣಿ (00502612314104), ಕಾವ್ಯ ದೀಪಕ್ ದೀಪಕ್ ಬಿರ್ಜೆ (00502613196304), ಕರಣ್ ನಿರ್ಮಲ್ ಲೋಂಡೆ (00502613871204), (00502617303104), ಕಲ್ಲಪ್ಪ ಶಿವರಾಮ್ ತಲವಾರ್ (00502615968103), ಜುಬೇದಾ ಖಾಜಾಸ್ ಸಯ್ಯದ್ (00502619685801), ಜೈತುನಬಿ ಮೈಬೂಬ ನದಾಫ್ (00502616648703), ಸವಿತಾ ಭಾರತ್ ತಲಾವಾರ್ (00502617140603), ಸುಹೇಲ್ ಜನ್ಮೋಹಮದ್ ಜಮದಾರ್ (00502617519703), ಜೋತಿಬಾ ಗಜಾನನ್ ಪಾಲೇಕರ್ (00502619944201), ವೆಂಕಟೇಶ್ ಅವ್ವಣ್ಣ ಹುಚ್ಚಣ್ಣವರ್ (00502619575301), ಪ್ರಭಾಕರ್ ಬಾಬಾಜಿ ದೇಸಾಯಿ (00502620192101), ಚಿನ್ಮಯ್ ಮುರುಗೇಂದ್ರ ಅಂಗಡಿ (00502620316201), ರಾಮಚಂದ್ರ ಲಕ್ಷ್ಮಣ್ ಲಂಬುಗೋಳ್ (00502620230701), **ಹುಬ್ಬಳ್ಳಿ** ಸಾದಿಕ್ ಹುಸೇನ್ (01972620221501), ಉಮೇಶ್ ಸವದತ್ತಿ (01972620249501).

ಹರಾಜು "ಇರುವಂತೆಯೇ" ಮತ್ತು "ಇರುವಂತೆಯೇ" ಮತ್ತು 'ಮ್ಯಾಗ್' ಆಧಾರದ ಮೇಲೆ ನಡೆಸಲಾಗುತ್ತದೆ . ಚಿನ್ನದ ಆಭರಣಗಳ ಗುಣಮಟ್ಟ ಶುದ್ಧತೆ ಕ್ಯಾರೆಟ್ ತೂಕ ಅಥವಾ ಮೌಲ್ಯಮಾಪನದ ಬಗ್ಗೆ ಯಾವುದೇ ಪ್ರಾತಿನಿಧ್ಯ ಅಥವಾ ಖಾತರಿಗಳನ್ನು ನೀಡುವುದಿಲ್ಲ. 'ಮ್ಯಾಗ್' ಹರಾಜುದಾರರು ತಮ್ಮ ಸ್ವಂತ ವಿವೇಚನೆಯಿಂದ ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಖಾತೆ ಮತ್ತು ಹರಾಜು ಪಟ್ಟಿಯಿಂದ ಯಾವುದೇ ಕ್ರಮವನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು ಮತ್ತು ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ಯಾವುದೇ ಕಾರಣವನ್ನು ನೀಡದೆ ತಿರಸ್ಕರಿಸಬಹುದು. ಸಾಲಗಾರರ ಅಡವಿಟ್ಟ ಆಭರಣಗಳ ವಿವರಗಳು ಮತ್ತು ಇತರ ವಿವರಗಳನ್ನು ಸಂಬಂಧಪಟ್ಟ ಶಾಖೆಯಲ್ಲಿ ಪ್ರದರ್ಶಿಸಲಾಗುತ್ತದೆ. ಈ ಸೂಚನೆ ಪ್ರಕಟವಾದ ನಂತರವೂ ಹರಾಜಿನ ದಿನಾಂಕದವರೆಗೆ ಡೀಫಾಲ್ಟ್ ಸಾಲಗಾರರು ಸಾಲದ ಮೊತ್ತದ ಯಾವುದೇ ಮರುಪಾವತಿಗೆ ಅರ್ಹರಾಗಿರುವುದಿಲ್ಲ. ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳನ್ನು ಒಳಗೊಂಡಂತೆ ಪೂರ್ಣ ಮೊತ್ತವನ್ನು ಮರುಪಾವತಿಸಲು ಮತ್ತು ಅವರ ಸಾಲದ ಖಾತೆಯನ್ನು ಮುಚ್ಚಲು ಅಥವಾ ಕ್ರಮಬದ್ಧಗೊಳಿಸಲು ಒಂದು ಆಯ್ಕೆ ಇದೆ ಇಲ್ಲದಿದ್ದರೆ ಅಡವಿಟ್ಟ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ ಮತ್ತು ಉಳಿದ ಬಾಕಿಗಳನ್ನು ಯಾವುದಾದರೂ ಇದ್ದರೆ) ಪೂರ್ಣ ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಹರಾಜು ಪ್ರಕ್ರಿಯೆಯ ನಂತರ ಈ ಮೊತ್ತವನ್ನು ಸರಿಹೊಂದಿಸಲಾಗುತ್ತದೆ. ಈ ಪ್ರಕಟಣೆಯ ದಿನಾಂಕದಂದು ಅಥವಾ ನಂತರ ಮುಚ್ಚಿದ ಅಥವಾ ಕ್ರಮಬದ್ಧಗೊಳಿಸಿದ ಸಾಲಗಾರರು ಪ್ರಮಾಣಿತ ಪ್ರಕಟಣೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಹೆಚ್ಚುವರಿ ಹರಾಜು ಮೊತ್ತವನ್ನು ಯಾವುದಾದರೂ ಇದ್ದರೆ) ಸಕಾಲದಲ್ಲಿ ಮರುಪಾವತಿಸಲು ಸಾಧ್ಯವಾಗುವಂತೆ ಸಾಲಗಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುವಂತೆ/ನವೀಕರಿಸುವಂತೆ ವಿನಂತಿಸಲಾಗಿದೆ. ವಿವರವಾದ ಮಾಹಿತಿ ನಿಯಮಗಳು ಮತ್ತು ಷರತ್ತುಗಳಿಗಾಗಿ ಮ್ಯಾಗ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಸಂಬಂಧಪಟ್ಟ ಶಾಖಾ ಕಚೇರಿಯನ್ನು ಸಂಪರ್ಕಿಸಿ.

ದಿನಾಂಕ : 07/05/2026 . | ಸ್ಥಳ : ಫಾಲ್ಟನ್ | ಅಧಿಕೃತ ಅಧಿಕಾರಿ : ಮ್ಯಾಗ್ ಫಿನ್‌ಸರ್ವ್ ಕಂಪನಿ ಲಿಮಿಟೆಡ್.

ಶೀಘ್ರವೇ ಕೋರ್ಟಿನ ಹೊಸ ಕಟ್ಟಡ ಕಾಮಗಾರಿ ಆರಂಭ

ಜಮಖಂಡಿ: ನಗರದಲ್ಲಿ ನ್ಯಾಯಾಲಯದ ಆವರಣದಲ್ಲಿರುವ ನ್ಯಾಯಲಯದ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಹಳೆ ಕಟ್ಟಡಗಳನ್ನು ತೆರವುಗೊಳಿಸಿ ಹೊಸ ಕಟ್ಟಡದ ನಿರ್ಮಾಣ ಕೆಲಸಗಳು ಶೀಘ್ರದಲ್ಲಿ ಆರಂಭವಾಗಲಿದೆ ಎಂದು ವಕೀಲರ ಸಂಘದ ನೂತನ ಅಧ್ಯಕ್ಷ ಎ.ಪಿ.ಕುಲಕರ್ಣಿ ಹೇಳಿದರು.

ಜಮಖಂಡಿ: ನಗರದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಭವನದ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಕೀಲರ ಸಂಘದ ನೂತನ ಅಧ್ಯಕ್ಷ ಎ.ಪಿ.ಕುಲಕರ್ಣಿ ಮಾತನಾಡಿದರು.

ನಗರದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಭವನದ ಸಭಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕ ಭಾಗದಿಂದ ನ್ಯಾಯಾಧೀಶರ ನೇಮಕಾತಿಯಲ್ಲಿ ಕಡಿಮೆ ಪ್ರಮಾಣದಲ್ಲಿ ನೇಮಕಾತಿಗಳು ನಡೆಯುತ್ತಿರುವ ಹಿನ್ನಲೆಯಲ್ಲಿ ಜಮಖಂಡಿ ವಕೀಲರ ಸಂಘದಿಂದ ವರ್ಷದಲ್ಲಿ ಎರಡು ಸಲ ನೇಮಕಾತಿಗೆ ಸಂಬಂಧಿಸಿದಂತೆ ವಿಶೇಷ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ನಗರದ ನ್ಯಾಯಾಲಯದ ಆವರಣದ ರಸ್ತೆಯಲ್ಲಿ ಪಾರ್ಕಿಂಗ್ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಭೂಸೇನಾ ನಿಗಮ ತಾಲೂಕ ಹಿರಿಯ ಅಭಿಯಂತರ ಜತೆಗೆ ಒಂದು ಹಂತದ ಮಾತುಕತೆ ಮಾಡಲಾಗಿದೆ. ನ್ಯಾಯಾಲಯದ ಆವರಣದ ಪಕ್ಕದಲ್ಲಿ ಭೂಸೇನಾ ನಿಗಮದ ಜಾಗವಿದ್ದು, ಅನಧಿಕೃತ ಪಾರ್ಕಿಂಗ್ ವ್ಯವಸ್ಥೆ ನಿಯಂತ್ರಿಸುವಂತೆ ವಕೀಲರ ಸಂಘದಿಂದ ಕ್ರಮಕೈಗೊಳ್ಳುವಂತೆ ಸೂಚನೆ ನೀಡಲಾಗುತ್ತಿದೆ. ಶೀಘ್ರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಸುಧಾರಣೆ ಆಗುವ ಲಕ್ಷಣಗಳಿವೆ. ಜಮಖಂಡಿ ವಕೀಲರ ಭವನದಲ್ಲಿರುವ ಗ್ರಂಥಾಲಯ ಸುಧಾರಣೆಗೆ ಹೆಚ್ಚಿನ ಆಸಕ್ತಿಯೊಂದಿಗೆ ಕ್ರಮ ವಹಿಸಲಾಗುತ್ತಿದೆ ಎಂದರು.

ತಾಲೂಕ ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ ಜಂಟಿಯಾಗಿ ಕಾನೂನು ಅರಿವು-ನೆರವು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಜತೆಗೆ ಅಭಿಯಾನಗಳನ್ನು ಹಮ್ಮಿಕೊಳ್ಳುವ ಮೂಲಕ ಪ್ರತಿಯೊಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನೂತನ ಪದಾಧಿಕಾರಿಗಳು ಸನ್ನದ್ಧಗೊಂಡಿದ್ದಾರೆ. ಸಾಮಾಜಿಕ ಸೇವೆಗಳೊಂದಿಗೆ ಹೊಸದಾಗಿ ಆಗಮಿಸುವ ವಕೀಲರ ಉತ್ತಮ ಬಾಂಧ್ಯವ್ಯದೊಂದಿಗೆ ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸಲಿದ್ದಾರೆ. ಚುನಾವಣೆ ಮಾಡದೇ ಅವಿರೋಧ ಮಾಡಲು ಹಿರಿಯ ವಕೀಲರಾದ ಎಸ್.ಎಸ್.ದೇವರವರ ಮತ್ತು ಜಿ.ಕೆ.ಮಠದ, ಆರ್.ಡಿ. ಹಳಿಂಗಳಿ ನೇತೃತ್ವದಲ್ಲಿ ಸಂಧಾನ ಸಭೆ ನಡೆಸಿದರು ಯಶಸ್ವಿಯಾಗದೇ ವಿಫಲಗೊಂಡ ಪರಿಣಾಮ ತುರುಸಿನ ಚುನಾವಣೆಗಳು ನಡೆಯುವ ಮೂಲಕ ಎರಡು ವರ್ಷದ ಅವಧಿಗೆ ನೂತನ ಪದಾಧಿಕಾರಿಗಳಾಗಿ 11ಜನ ವಕೀಲರು ಆಯ್ಕೆಗೊಂಡಿದ್ದಾರೆ.

ಅದರಲ್ಲಿ ಮೂವರಿಗೆ ಮಹಿಳಾ ವಕೀಲರಿಗೆ ಸ್ಥಾನಮಾನ ನೀಡಲಾಗಿದೆ ಎಂದರು. ವಕೀಲರ ಸಂಘದ ನೂತನ ಪ್ರಧಾನ ಕಾರ್ಯದರ್ಶಿ ವೈ.ಬಿ.ಕಡಪಟ್ಟಿ ಮಾತನಾಡಿ, ಏ.30 ರಂದು ವಕೀಲರ ಸಂಘದ ಚುನಾವಣೆ ನಡೆದಿದ್ದು, ಎರಡು ವರ್ಷದ ಅವಧಿಗೆ ನೂತನ ಅಧ್ಯಕ್ಷರಾಗಿ ವಕೀಲ ಎ.ಪಿ.ಕುಲಕರ್ಣಿ, ಉಪಾಧ್ಯಕ್ಷರಾಗಿ ವಿಜಯಲಕ್ಷ್ಮೀ ಭಟ್, ಪ್ರಧಾನ ಕಾರ್ಯದರ್ಶಿಯಾಗಿ ವೈ.ಕೆ.ಕಡಪಟ್ಟಿ, ಸಹಾಯಕ ಕಾರ್ಯದರ್ಶಿ ಎಸ್.ಎ.ಅಂಬಿ, ಸದಸ್ಯರಾಗಿ ಆರ್.ಆರ್.ಕರೋಶಿ, ಆರ್.ಎಂ.ಝುಂಡೆ, ಎಸ್.ಕೆ. ಗೌಡಪ್ಪನವರ, ಯು.ಎಸ್.ಚರಕಿ, ಎಸ್.ಕೆ.ದಳವಾಯಿ (ಮಾಳಿ) ಮತ್ತು ಮಹಿಳಾ ಸದಸ್ಯರಾಗಿ ಜೆ.ಆರ್.ಮಾಳಿ, ವಿ.ಜಿ.ಅಳ್ಳಿಕಟ್ಟಿ ಆಯ್ಕೆಗೊಂಡಿದ್ದಾರೆ ಎಂದರು. ಸುದ್ದಿ ಗೋಷ್ಠಿಯಲ್ಲಿ ವಿಜಯಲಕ್ಷ್ಮೀ ಭಟ್, ಜೆ.ಆರ್.ಮಾಳಿ, ವಿ.ಜಿ.ಅಳ್ಳಿಕಟ್ಟಿ, ಆರ್.ಆರ್.ಕರೋಶಿ, ಆರ್.ಎಂ. ಝುಂಡೆ, ಎಸ್.ಎ.ಅಂಬಿ, ಎಸ್.ಕೆ.ಗೌಡಪ್ಪನವರ, ಉಮೇಶ ಚರಕಿ, ಎಸ್.ಕೆ.ದಳವಾಯಿ ಸಹಿತ ಹಲವರು ಇದ್ದರು.

ಸಮಾಜದ ಅಂಕು ಡೊಂಕು ತಿದ್ದಿ ತೀಡುವ ನಾಟಕಗಳು

ಕೆರೂರ ಸಮೀಪದ ಹೂಸಕೋಟಿ ಗ್ರಾಮದ ಗಣ್ಯರು ಸಾವಿರ ಹಳ್ಳಿ ಸರದಾರ ನಾಟಕಗಳನ್ನು ಉದ್ಘಾಟಿಸಿದರು

ಕೆರೂರ: ಚಿಕ್ಕಂದಿನಿಂದಲೆ ನಾಟಕದ ಗೀಳು ಅಂಟಿಸಿಕೊಂಡ ಚಿಕ್ಕ ಗ್ರಾಮ ಹೊಸಕೋಟಿಯ ಗೋಪಾಲ ನಾಯ್ಕ ತನ್ನದೆ ಸಂಘ ಕಟ್ಟಿಕೊಂಡು ಗ್ರಾಮೀಣ ಪ್ರದೇಶಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿರುವ ಹೆಮ್ಮೆಯ ರಂಗಭೂಮಿ ಕಲಾವಿದರೆಂದು ಹೊಸಕೋಟಿ ಗ್ರಾಮದ ಗಣ್ಯರಾದ ಅಶೋಕ ಸಾಲಿ ಹಾಗೂ ಗಂಗಯ್ಯ ಹಿರೇಮಠ ಹೇಳಿದರು. ಶ್ರೀಮಾರುತೇಶ್ವರ ಪರಿಶಿಷ್ಠ ಪಂಗಡ ಸಾಂಸ್ಕೃತಿಕ ಕಲಾ ಅಭಿವೃದ್ಧಿ ಸಂಘ (ರಿ) ಹೊಸಕೋಟೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ಹಾಗೂ ಬಾಗಲಕೋಟೆ ಇವರ ಸಹಯೋಗದಲ್ಲಿ 2026 ನೇ ಸಾಲಿನ ಗಿರಿಜನ ಉಪ ಯೋಜನೆ ಅಡಿಯಲ್ಲಿ ರಂಗಭೂಮಿ ಕಲಾವಿದರಾದ ಮಂಜುನಾಥ ಮತ್ತಿಕಟ್ಟಿ ಗುಬ್ಬೇರಕೊಪ್ಪ ಹಾಗೂ ಸಂಗಡಿಗರಿಂದ ಜಂಗವಾಡ ಗ್ರಾಮದ ಬಯಲು ರಂಗಮಂದಿರದಲ್ಲಿ ಸಾವಿರ ಹಳ್ಳಿ ಸರದಾರ ನಾಟಕ ಪ್ರದರ್ಶನ ಸಾನಿಧ್ಯವಹಿಸಿ ಮಾತನಾಡಿದರು. ನಾಟಕಗಳು ಸಮಾಜದ ಅಂಕು ಡೊಂಕುಗಳನ್ನುತಿದ್ದಿ ನೀತಿ ಸಾರವನ್ನು ಬಿಂಬಿಸುವ ರೂಪಕಗಳು ಗೋಪಾಲ ನಾಯ್ಕ ಅವರ ಸಂಘ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರು. ಕಾರ್ಯಕ್ರಮ ಗಣ್ಯರಾದ ರಾಮಣ್ಣ ನಿಂಬರಗಿ, ಮಧುಕರ ಕುಲಕರ್ಣಿ,ಎಸ್. ಎಮ್.ಗೊಣ್ಣಾಗರ ಪವನ ಹುಲಕುಂದ, ಪ್ರವೀಣ ಗೋನಾಗರ ಇದ್ದರು.

ಮೇ 10ಕ್ಕೆ ನಾಟಕ ಪ್ರದರ್ಶನ

ಇಳಕಲ್: ನಾಟ್ಯರಾಣಿ ಕಲಾಸಂಘ ಹಾಗೂ ಚಿಣ್ಣರ ಚಿಲಿಪಿಲಿ -2026, 20 ನೇ ವಾರ್ಷಿಕೋತ್ಸವ ಉದ್ಘಾಟನೆ, ಸಾಂಸ್ಕೃತಿಕ ಕಾರ್ಯಕ್ರಮ, ನಾಟಕಗಳು, ನೃತ್ಯ ಹಾಗೂ ಸನ್ಮಾನ ಕಾರ್ಯಕ್ರಮ ಮೇ 10ರ ಭಾನುವಾರ ಸಂಜೆ 4 ಗಂಟೆಗೆ ಸುವರ್ಣ ರಂಗ ಮಂದಿರದಲ್ಲಿ ನಡೆಯಲಿದೆ ಎಂದು ನಾಟ್ಯ ರಾಣಿ ಕಲಾ ಸಂಘದ ಅಧ್ಯಕ್ಷೆ ಉಮರಾಣಿ ಬಾರಿಗಿಡದ ಹೇಳಿದರು. ನಗರದ ಪತ್ರಿಕಾ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾ ಡಿದ ಅವರು, ಕಾರ್ಯಕ್ರಮವನ್ನು ವೀರ ಶೈವ ಲಿಂಗಾ ಯತ ಅಭಿವೃದ್ಧಿ ನಿಗಮ ಅಧ್ಯಕ್ಷ, ಶಾಸಕ ವಿಜಯಾನಂದ ಕಾಶಪ್ಪನ ವರ ಉದ್ಘಾಟಿಸಲಿದ್ದು, ಬಾಗಲಕೋಟ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯ ನಿರ್ದೇಶಕ ಸಂತೋಷ ಭೋವಿ, ಹಾಲುಮತ ಸಮಾ ಜದ ನಾಯಕ ವಿಜಯಮಹಾಂತೇಶ ಗದ್ದನಕೇರಿ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಕೆ.ಎ. ಬನ್ನಟ್ಟಿ, ಸುಪರ ಟೈಮ್ಸ್ ಸಂಪಾದಕ ಜಬ್ಬಾರ ಕಲಬುರ್ಗಿ,ನಿವೃತ್ತ ಮುಖ್ಯಗುರು ಗಳಾದ ಸಂಗಣ್ಣ ಗದ್ದಿ ಮುಖ್ಯ ಅತಿಥಿ ಗಳಾಗಿ ಆಗಮಿಸಲಿದ್ದಾರೆ ಎಂದರು. ದಿ.ಕಂದಗಲ್ಲ ಹನಮಂತರಾಯ್ ಅವರ ವಿರಚಿತ, ಉಮರಾಣಿ ಬಾರಿಗಿಡದ ನಿರ್ದೇಶನ, ಜ್ಯೋತಿ ಸಹ ನಿರ್ದೇಶನದ ನಾಟಕ ರಕ್ತರಾತ್ರಿ, ಹಾಗೂ ಬಿ.ಪಿ ದುತ್ತರಗಿ ರಚನೆ, ಉಮರಾಣಿ ಬಾರಿಗಿಡದ ನಿರ್ದೇ ಶನ, ಜ್ಯೋತಿ ಚಲವಾದಿ ವಸ್ತ್ರ ವಿನ್ಯಾಸದ ನಾಟಕ ಸಂಪತ್ತಿಗೆ ಸವಾಲ, ಪಕೀರಪ್ಪ ವರವಿ ರಚನೆಯ, ಮಹಾಂತೇಶ ಗಜೇಂದ್ರಡಗ ನಿರ್ದೇಶನದ ಅಲ್ಲಮಪ್ರಭು ಅನುಭವ ಮಂಟಪ ನಾಟಕ ಜರುಗಲಿವೆ ಎಂದು ಹಿರಿಯ ರಂಗಕರ್ಮಿ ಮಹಾಂತೇಶ ಗಜೇಂ ದ್ರಗಡ ಹೇಳಿದರು.

ವೈಜ್ಞಾನಿಕ ಮನೋಭಾವ ಬೆಳೆಸುವ ವಿಜ್ಞಾನ ಶಿಬಿರ

ಗುಳೇದಗುಡ್ಡ: ಬೇಸಿಗೆ ರಜೆಯಲ್ಲಿ ಮಕ್ಕಳು ಕೇವಲ ಆಟಕ್ಕೆ ಸೀಮಿತವಾಗದೆ, ಜ್ಞಾನವರ್ಧಕ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು. ಇದು ಅವರಲ್ಲಿ ತರ್ಕಬದ್ಧ ಆಲೋಚನೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲು ಉತ್ತಮ ಅವಕಾಶವಾಗಿದೆ ಎಂದು ಬದಾಮಿ ತಾಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿ ಎಂ.ಬಿ.ದೊಡ್ಡಪ್ಪನವರ ಹೇಳಿದರು

ಸಮೀಪದ ಪರ್ವತಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಬಾಗಲಕೋಟೆಯ ಅಗಸ್ತ್ಯ ವಿಜ್ಞಾನ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ಬೇಸಿಗೆ ಶಿಬಿರಕ್ಕೆ ಭೇಟಿ ನೀಡಿ ಮಾತನಾಡಿ, ಗ್ರಾಮೀಣ ಭಾಗಲದಲ್ಲಿ ಇಂತಹ ಶಿಬಿರಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮೀಣ ಮಕ್ಕಳ ಜ್ಞಾನವನ್ನು ಹೆಚ್ಚಿಸುವ ಕಾರ್ಯಮಾಡಿದ್ದು ಶ್ಲಾಘನೀಯ ಎಂದರು.

ಅಗಸ್ತ್ಯ ವಿಜ್ಞಾನ ಕೇಂದ್ರದ ಸಂಪನ್ಮೂಲ ವ್ಯಕ್ತಿ ರವಿಕಿರಣ ಹಡಪದ ಅವರು ವಿದ್ಯಾರ್ಥಿಗಳಿಗೆ ಸರಳ ವಿಜ್ಞಾನ ಪ್ರಯೋಗಗಳನ್ನು ಪ್ರಾಯೋಗಿಕವಾಗಿ ವಿವರಿಸಿದರು. ಶಾಲಾ ಕೊಠಡಿಯ ಫಲಕದ ಮೇಲೆ ಬರೆದಿದ್ದ ಸಂವಿಧಾನಾತ್ಮಕ ಹುದ್ದೆಗಳಾದ ಶಾಸಕರು, ಸಂಸದರು, ಮುಖ್ಯಮಂತ್ರಿ, ಪ್ರಧಾನಮಂತ್ರಿ ಗಳ ಕಾರ್ಯವೈಖರಿಯ ಬಗ್ಗೆಯೂ ಮಕ್ಕಳಿಗೆ ಸುಲಭವಾಗಿ ಅರ್ಥವಾಗುವಂತೆ ಮಾಹಿತಿ ನೀಡಿದರು.

ಶಾಲೆಯ ಮುಖ್ಯೋಪಾಧ್ಯಾಯ ಎಚ್. ಕೆ. ಗುಡೂರ ಶಿಬಿರದ ನೇತೃತ್ವ ವಹಿಸಿ ಶಿಬಿರದ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಸಂಗಮೇಶ ಯಲಿಗಾರ, ಸಮೂಹ ಸಂಪನ್ಮೂಲ ವ್ಯಕ್ತಿ ಜಗದೀಶ ಬುಳ್ಳಾ ಅತಿಥಿಗಳಾಗಿ ಭಾಗವಹಿಸಿದ್ದರು.

ಪರ್ವತಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಬಾಗಲಕೋಟೆಯ ಅಗಸ್ತ್ಯ ವಿಜ್ಞಾನ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಬೇಸಿಗೆ ವಿಜ್ಞಾನ ಶಿಬಿರಕ್ಕೆ ಬದಾಮಿ ತಾಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿ ಎಂ.ಬಿ.ದೊಡ್ಡಪ್ಪನವರ ಭೇಟಿ ನೀಡಿದರು.

ಆ.21ಕ್ಕೆ ವಿಶೇಷ ಲೋಕ್ ಅದಾಲತ್

ರಬಕವಿ-ಬನಹಟ್ಟಿ: ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ವ್ಯಾಜ್ಯಗಳ ಪರಿಹಾರಕ್ಕೆ ಸಮಾಧಾನ ಸಮಾರೋಹ ಎಂಬ ಹೆಸರಿನಡಿ ವಿಶೇಷ ಲೋಕ ಆದಾಲತ್ ಆ. 21, 22 ಮತ್ತು 23 ರಂದು ಹಮ್ಮಿಕೊಳ್ಳಲಾಗಿದೆ. ರಬಕವಿ-ಬನಹಟ್ಟಿ ತಾಲೂಕಿನ ಸಾರ್ವಜನಿಕರು ಸರ್ವೋಚ್ಚ ನ್ಯಾಯಾಲ ಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತ ಹಾಗೂ ತ್ವರಿತ ಇತ್ಯರ್ಥಪಡಿಸುವ ಅವಕಾಶವಿದ್ದು, ಈ ಕಾರ್ಯಕ್ರಮದಲ್ಲಿ ರಬಕವಿ-ಬನಹಟ್ಟಿ ತಾಲೂಕಿನ ಸಂಬಂಧಿಸಿದ ಪ್ರಕರಣಗಳನ್ನು ಸಮಾಧಾನ ಸಮಾರೋಹದಲ್ಲಿ ನಡೆಯಲಿದೆ.

ವಿಶ್ವವಾಣಿ

ಮಿಚೆಲ್ ಮಾರ್ಷ್ ಸ್ಫೋಟಕ ಶತಕ

ಗುರುವಾರದ ಮಳೆಬಾಧಿತ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಮೊದಲು ಬ್ಯಾಟ್ ಮಾಡಿದ ಲಖನೌ ಸೂಪರ್ ಜೈಂಟ್ಸ್ 3 ವಿಕೆಟ್‌ಗೆ 209 ರನ್ ಗಳಿಸಿತು. ತಂಡದ ಪರ ಸ್ಫೋಟಕ ಬ್ಯಾಟಿಂಗ್ ಮಾಡಿದ ಮಿಚೆಲ್ ಮಾರ್ಷ್ 111 ರನ್ ಸಿಡಿಸಿದರು. ಇದರಲ್ಲಿ ತಲಾ 9 ಬೌಂಡರಿ, ಸಿಕ್ಸರ್‌ಗಳು ಸೇರಿದ್ದವು.

ಸೊಂಪಾದ ಪುಟಗಳು

ಮಕ್ಕಳು ಹೆತ್ತವರ ಮುಂದೆ ಏಕೆ ಸುಳ್ಳು ಹೇಳುತ್ತಾರೆ?

ಶಿಶಿರಕಾಲ
ಶಿಶಿರ್ ಹೆಗಡೆ 6

ಕಾಡು ಹಣ್ಣುಗಳ ಸವಿ ರುಚಿಯ ತಖ್ತೆ!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಸೋಲು ಎನ್ನುವುದು ನಿಮ್ಮ ಪಯಣದ ಅಂತ್ಯವಲ್ಲ, ಅದು ನಿಮ್ಮ ವೇಗವನ್ನು ಪರೀಕ್ಷಿಸುವ ಒಂದು ತಿರುವು ಅಷ್ಟೇ. ಬಿದ್ದಾಗಲೆಲ್ಲ ಎದ್ದು ನಿಲ್ಲುವ ಛಲವಿದ್ದರೆ, ಜಗತ್ತಿನ ಯಾವುದೇ ಶಕ್ತಿಯೂ ನಿಮ್ಮನ್ನು ಗುರಿ ತಲುಪದಂತೆ ತಡೆಯಲು ಸಾಧ್ಯವಿಲ್ಲ.

ವಕ್ರತುಂಡೋಕ್ತಿ

ಮದುವೆ ಎಂದರೆ ಇಬ್ಬರು ವ್ಯಕ್ತಿಗಳು ಸೇರಿ, ತಮಗೆ ಇಲ್ಲದ ಸಮಸ್ಯೆಗಳನ್ನು ಒಟ್ಟಾಗಿ ಪರಿಹರಿಸಿಕೊಳ್ಳಲು ಪ್ರಯತ್ನಿಸುವ ಒಂದು ಸುಂದರ ಪ್ರಕ್ರಿಯೆ.

2ನೇ ಬಾರಿ ವಿಜಯ್‌ಗೆ 118 ಶಾಸಕರ ಪಟ್ಟಿ ತರಲು ಆಗ್ರಹಿಸಿದ ರಾಜ್ಯಪಾಲ
ತಮಿಳುನಾಡಲ್ಲಿ ಟಿವಿಕೆ ಕಾರ್ಯಕರ್ತರಿಂದ ರಾಜ್ಯಪಾಲರ ವಿರುದ್ಧ ಆಕ್ರೋಶ
ಎಡಿಎಂಕೆ ಜತೆ ಮೈತ್ರಿ ಇಲ್ಲ, ಟಿವಿಕೆಗೆ 6 ತಿಂಗಳು ತೊಂದರೆ ನೀಡಲ್ಲ: ಸ್ಟಾಲಿನ್

ತ.ನಾ ರಾಜ್ಯಪಾಲ VS ಟಿವಿಕೆ

ದೆಹಲಿ: ಪಂಚರಾಜ್ಯ ಚುನಾವಣೆ ಮುಗಿದ ತಮಿಳುನಾಡು ಮತ್ತು ಪ.ಬಂಗಾಳದಲ್ಲಿ ರಾಜಕೀಯ ಚಟುವಟಿಕೆಗಳು ತಾರಕಕ್ಕೇರಿವೆ. ತಮಿಳುನಾಡಿಗೆ ಸಂಬಂಧಿಸಿದಂತೆ ಬುಧವಾರ ರಾಜ್ಯಪಾಲರನ್ನು ಭೇಟಿಯಾಗಿ ಪ್ರಮಾಣವಚನ ಸ್ವೀಕಾರಕ್ಕೆ ಅನುಮತಿ ಕೋರಿದ್ದ

ಟಿವಿಕೆ ಮುಖ್ಯಸ್ಥ, ನಟ ಜೋಸೆಫ್ ವಿಜಯ್, ಗುರುವಾರವೂ ಮತ್ತೆ ರಾಜ್ಯಪಾಲರನ್ನು ಭೇಟಿ ಮಾಡಿದ್ದಾರೆ. ಈ ವೇಳೆಯೂ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ 118 ಶಾಸಕರೊಂದಿಗೆ ಮರಳಿಬನ್ನಿ, ನಿಮ್ಮನ್ನು ಬಿಟ್ಟು ಯಾರನ್ನೂ ಬಹುಮತ ಸಾಬೀತಿಗೆ ಆಹ್ವಾನಿಸಲ್ಲ ಎಂದು ಹೇಳಿದ್ದಾರೆನ್ನಲಾಗಿದೆ. ಗುರುವಾರ ವಿಜಯ್ ಪ್ರಮಾಣವಚನ ಎಂದು ನಿಗದಿಯಾಗಿದ್ದರೂ, ಅದು ನಡೆದಿಲ್ಲ. ಇದೀಗ ತಮಿಳುನಾಡಿನಲ್ಲಿ ಟಿವಿಕೆ ವರ್ಸಸ್ ರಾಜ್ಯಪಾಲ ಅಭಿಯಾನ ಶುರುವಾಗಿದೆ.

ಭಾರತೀಯ ಚಿತ್ರರಂಗದ ದಿಗ್ಗಜ ಕಮಲ್ ಹಾಸನ್, ಖ್ಯಾತ ಬಹುಭಾಷಾ ನಟ ಪ್ರಕಾಶ್ ರೈ ಸೇರಿ ಹಲವರು ವಿಜಯ್‌ಗೆ ಬಹುಮತ ಸಾಬೀತು ಮಾಡಲು ಅವಕಾಶ ನೀಡದ ರಾಜ್ಯಪಾಲರ ವಿರುದ್ಧ ಕಿಡಿಕಾರಿದ್ದಾರೆ.

ಇನ್ನೊಂದು ಕಡೆ ಬಿಜೆಪಿಯೇ ರಾಜ್ಯಪಾಲರ ಹಿಂದೆ ನಿಂತು ವಿಜಯ್ ಪ್ರಮಾಣ ವಚನ ತೆಗೆದುಕೊಳ್ಳದಂತೆ ತಡೆಯುತ್ತಿದೆ ಎಂಬ ಬಲ ವಾದ ಆರೋಪಗಳು ಕೇಳಿಬಂದಿವೆ. ತಮಿಳುನಾಡಿನಲ್ಲಿ ಮತ್ತೆ ರಾಜ್ಯಪಾಲ ವರ್ಸಸ್ ರಾಜಕೀಯ ಪಕ್ಷಗಳ ಸಂಘರ್ಷ ಶುರುವಾಗಿದೆ. ಇದೇ ವೇಳೆ ಮಾಧ್ಯಮವೊಂದಕ್ಕೆ ಪ್ರತಿಕ್ರಿಯಿಸಿರುವ ಡಿಎಂಕೆ ನಾಯಕ, ಎಂ.ಕೆ.ಸ್ಟಾಲಿನ್, ಟಿವಿಕೆ ವಿಜಯ್ ಸರಕಾರ ರಚನೆ ಮಾಡಲಿ ಎಂದು ನಾವು ಕಾಯುತ್ತಿದ್ದೇವೆ. ಅವರಿಗೆ ಯಾವುದೇ ತೊಂದರೆ ನೀಡದೇ 6 ತಿಂಗಳು ಗಮನಿಸುತ್ತೇವೆ ಎಂದು ಹೇಳಿದ್ದಾರೆ. ಇನ್ನು ಎಐಎಡಿಎಂಕೆ ಜೊತೆಗಿನ ಮೈತ್ರಿಯನ್ನೂ ಡಿಎಂಕೆ ಮೂಲಗಳು ತಿರಸ್ಕರಿಸಿವೆ. → 4



ನಿಯಮವೇನು?

ಸಂವಿಧಾನದ ವಿಧಿ 164(1) ರ ಪ್ರಕಾರ ಮುಖ್ಯಮಂತ್ರಿಯನ್ನು ನೇಮಿಸುವ ಅಧಿಕಾರ ರಾಜ್ಯಪಾಲರಿಗಿದೆ. ಅತಂತ್ರ ವಿಧಾನಸಭೆ ಸೃಷ್ಟಿಯಾದಾಗ ಯಾರನ್ನು ಸಿಎಂ ಆಗಿ ನೇಮಿಸಬೇಕು ಎಂಬ ವಿವೇಚನಾಧಿಕಾರ ರಾಜ್ಯಪಾಲರಿಗೆ ಇರುತ್ತದೆ. ಈ ಹಿಂದೆ ಹಲವು ರಾಜ್ಯಗಳಲ್ಲಿ ಬಹುಮತ ಕೊರತೆಯಿದ್ದಾಗ ರಾಜ್ಯಪಾಲರು ಅತ್ಯಂತ ದೊಡ್ಡ ಪಕ್ಷದ ನಾಯಕನನ್ನು ಆಹ್ವಾನಿಸಿದ ಇತಿಹಾಸವಿದೆ. ತಮಿಳುನಾಡಿನಲ್ಲಿ ರಾಜ್ಯಪಾಲರು 118 ಶಾಸಕರ ಪಟ್ಟಿಯನ್ನು ಕೇಳಿದ್ದಾರೆ.

ಟಿವಿಕೆ ಬಲಾಬಲ

ಸದ್ಯ ವಿಜಯ್ ಪಕ್ಷದ ಬಳಿ 108 ಸ್ಥಾನಗಳಿವೆ. ಅದರಲ್ಲಿ 2 ಸ್ಥಾನವನ್ನು ವಿಜಯ್ ತಾವೇ ಗೆದ್ದಿರುವುದರಿಂದ, ಅವರು 2ರಲ್ಲಿ ಒಂದನ್ನು ಬಿಟ್ಟು ಕೊಡಬೇಕಾಗುತ್ತದೆ. ಆಗ ಪಕ್ಷದ ಸ್ಥಾನದ ಸಂಖ್ಯೆ 107ಕ್ಕಿಳಿಯುತ್ತದೆ. ಕಾಂಗ್ರೆಸ್ ಬೆಂಬಲದಿಂದ ಬಲ 112ಕ್ಕೇರಿದೆ. ಬಹುಮತಕ್ಕೆ 118 ಶಾಸಕರ ಬಲ ಬೇಕು. ಅರ್ಥಾತ್ ಇನ್ನೂ 6 ಶಾಸಕರು ಬೆಂಬಲ ಬೇಕು. ಸಿಪಿಐ, ಸಿಪಿಎಂ, ಐಯುಎಂಎಲ್, ವಿಸಿಕೆ ಬೆಂಬಲ ನೀಡಿದರೆ ವಿಜಯ್‌ಗೆ ಬಹುಮತ ಸಿಗಲಿದೆ.

ಬಂಗಾಳ ಸರಕಾರ ವಿಸರ್ಜನೆ, ಮಮತಾಗೆ ಮುಖಭಂಗ

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ ಎಂದು ಬಿಗಿಪಟ್ಟು ಹಿಡಿದಿದ್ದ ಪ.ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಮುಖಭಂಗವಾಗಿದೆ. ಪ.ಬಂಗಾಳ ರಾಜ್ಯಪಾಲರು ಬಂಗಾಳ ಸರಕಾರವನ್ನು ವಿಸರ್ಜನೆ ಮಾಡಿದ್ದಾರೆ. ಅಲ್ಲಿಗೆ ಮಮತಾ ವಿಧಾನಸಭೆಯಿಂದ ಹೊರನಡೆಯುವುದು ಅನಿವಾರ್ಯವಾಗಲಿದೆ. ಇನ್ನು ಮೇ 9ರಂದು ಬಂಗಾಳದ ನೂತನ ಮುಖ್ಯಮಂತ್ರಿಯ ಪ್ರಮಾಣವಚನ ನಡೆಯಲಿದೆ. ಶುಕ್ರವಾರ ಯಾರು ಮುಖ್ಯಮಂತ್ರಿ ಎಂದು ಬಿಜೆಪಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಕೇರಳ: ಕಾಂಗ್ರೆಸ್ ಹೈಕಮಾಂಡ್‌ಗೆ ಸಿಎಂ ಆಯ್ಕೆ ಅಧಿಕಾರ

ಗುರುವಾರ ಕೇರಳದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆದಿದೆ. ಸರಕಾರದ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಹೈಕಮಾಂಡ್‌ಗೆ ನೀಡಲಾಗಿದೆ. ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು ಪಕ್ಷದ 63 ನಾಯಕರೊಂದಿಗೆ ನೇರಾನೇರ ಮಾತುಕತೆ ನಡೆಸಿ ಅಭಿಪ್ರಾಯ ಪಡೆದಿದ್ದಾರೆ. ಈ ಮಧ್ಯೆ ಕೆ.ಸಿ.ವೇಣುಗೋಪಾಲ್, ಸತೀಶನ್ ನಡುವೆ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಇದೆ.

ಕೇಂದ್ರದ ರಾಮ್‌ಜಿ ವಿರೋಧಿಸಿ ಸುಪ್ರೀಂಗೆ

ರಾಜ್ಯ ಸಂಪುಟ ಸಭೆಯಲ್ಲಿ ನಿರ್ಧಾರ
ರಾಜ್ಯ ಶಿಕ್ಷಣ ನೀತಿಗೆ ಜಾರಿಗೆ ಸಿದ್ಧತೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮನರೇಗಾ ಬದಲಾಗಿ ವಿಬಿಜಿ ರಾಮ್‌ಜಿ

ಯೋಜನೆಯನ್ನು ಕೇಂದ್ರ ಸರಕಾರ ಜಾರಿ ಮಾಡಿದ್ದನ್ನು ವಿರೋಧಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಲು ರಾಜ್ಯ ಸರಕಾರ ನಿರ್ಧರಿಸಿದೆ. ಗುರುವಾರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ವಿಬಿಜಿ ರಾಮ್ ಸಂಬಂಧ ಕೇಂದ್ರ ಸರಕಾರ ಯಾವುದೇ ಅಧಿಸೂಚನೆ ಹೊರಡಿಸಿಲ್ಲ ಹಾಗೂ ಪರ್ಯಾಯ ಮಾರ್ಗವೂ ಹೇಳಿಲ್ಲ. ಇದು ರಾಜ್ಯ ಸರಕಾರಗಳ ಅಧಿಕಾರವನ್ನು ದಮನ ಮಾಡಿದಂತಾಗಿದೆ. ಮನರೇಗಾ ಕ್ರಿಯಾಯೋಜನೆ ಸಿದ್ಧಪಡಿಸಿ ಅವಕಾಶ ಕಲ್ಪಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಲಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಯೋಜನೆಯಡಿ ಜಾರಿಯಲ್ಲಿದ್ದ ಮನರೇಗಾವನ್ನು ಬಿಟ್ಟು ರಾಮ್‌ಜಿ ಯೋಜನೆಯನ್ನು ತಂದಿದ್ದರೂ ಕೇಂದ್ರದಿಂದ ಯಾವುದೇ ಅಧಿಸೂಚನೆ ಬಂದಿಲ್ಲ. ಈ ಸಂಬಂಧ ರಾಜಕೀಯವಾಗಿ ಒತ್ತಡ ಹೇರಲು ವಿಧಾನಸಭೆ ಮೂಲಕ ಒತ್ತಾಯಿಸಿದ್ದೆವು.

ಇದನ್ನು ರಾಷ್ಟ್ರಮಟ್ಟದಲ್ಲೂ ವಿರೋಧಿಸಲಾಗಿತ್ತು. ಮೇ ತಿಂಗಳಾದರೂ ರಾಮ್‌ಜಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಕೇಂದ್ರ ಹೊರಡಿಸಿಲ್ಲ. ಬೇಕಾಗಿರುವ ನೀತಿ ನಿಯಮಾವಳಿ ಕೇಂದ್ರ ರೂಪಿಸಿಲ್ಲ. ಯಾವಾಗ ಜಾರಿಗೆ ಬರುತ್ತದೆಯೋ ಎಂಬುದು ಗೊತ್ತಿಲ್ಲ. → 4

ನಿರ್ಣಯಗಳೇನು?

- ಹಟ್ಟಿ ಚಿನ್ನದ ಗಣಿ ಟೌನ್‌ಶಿಪ್‌ಗೆ 132.50 ಕೋಟಿ ರು., ಆಡಳಿತಾತ್ಮಕ ಅನುಮೋದನೆ
- ಧಾರವಾಡ ಪ್ರಾದೇಶಿಕ ವೈಜ್ಞಾನಿಕ ಕೇಂದ್ರದಲ್ಲಿ ಡಿಜಿಟಲ್ ತಾರಾಲಯ, 22 ಕೋಟಿ ರು.
- 20 ಕಿಮೀ ಉದ್ದದ ಬಂಗಾರಪೇಟೆ ರಾಜ್ಯ ಹೆದ್ದಾರಿಯ 2 ಕಾಮಗಾರಿಗೆ 66 ಕೋಟಿ ರು.
- ಸಾರಿಗೆ ಇಲಾಖೆಯ ಕಾರ್ಮಿಕ ಸಾಮಾಜಿಕ ಭದ್ರತೆ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ
- ಮೈಸೂರು ಮೃಗಾಲಯ, ಬನ್ನೇರುಘಟ್ಟದ ಅಭಿವೃದ್ಧಿಗೆ ಕ್ರಮವಾಗಿ 44, 35 ಕೋಟಿ ರು.
- ಮೈಸೂರು ಜಯದೇವ ಆಸ್ಪತ್ರೆಗೆ 600 ಹಾಸಿಗೆ, ಮೇಲ್ದರ್ಜೆಗೇರಿಸಲು 183 ಕೋಟಿ ರು.
- ಕುಕ್ಕೆ ಸುಬ್ರಮಣ್ಯ ಮಾಸ್ಟರ್ ಪ್ಲಾನ್ ಮೂರನೇ ಹಂತದ ಯೋಜನೆಗೆ 604 ಕೋಟಿ ರು.
- ಕಲಬುರಗಿ ಹಾಗೂ ಯಾದಗಿರಿಯಲ್ಲಿ ಮೂರು ಕೈಗಾರಿಕಾ ಕೇಂದ್ರಕ್ಕಾಗಿ 200 ಕೋಟಿ ರು.
- ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ನೇಮಕಾತಿಯಲ್ಲಿ ಶೇ.2ರಷ್ಟು ಮೀಸಲಿಗೆ ಒಪ್ಪಿಗೆ

ಸಕ್ರಿಯ ರಾಜಕೀಯಕ್ಕೆ ಹಳ್ಳಿಹಕ್ಕಿ ವಿದಾಯ

ಮೈಸೂರು: ಮಾಜಿ ಸಚಿವ, ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಚುನಾವಣೆ ರಾಜಕೀಯಕ್ಕೆ ವಿದಾಯ ಹೇಳಿದ್ದಾರೆ. ಹಳ್ಳಿಹಕ್ಕಿ ಎಂದೇ ಖ್ಯಾತರಾಗಿರುವ ಅವರು, ಮುಂಬರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ನನ್ನ ಬಳಿ ಅದಕ್ಕೆ ಖರ್ಚು ಮಾಡುವಷ್ಟು ಹಣವಿಲ್ಲ ಎಂದಿದ್ದಾರೆ. ನಾನು ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡಿದ್ದರು. ಆದರೆ ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ವಿಧಾನಸಭೆ ಚುನಾವಣೆ ಎದುರಿಸಲು 50 ಕೋಟಿ ರೂ. ಹಣ ಬೇಕು. ಅಂತಹ ಶಕ್ತಿ ಈಗ ನನ್ನಲ್ಲಿ ಇಲ್ಲ ಎಂದರು.

ವಿನಯ್ ಅರ್ಜಿ ವಿಚಾರಣೆ ಮೇ 26ಕ್ಕೆ ಮುಂದೂಡಿಕೆ

ಬೆಂಗಳೂರು: ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿದ್ದ ಧಾರವಾಡದ ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣ ದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ರುವ ಅನರ್ಹ ಶಾಸಕ ವಿನಯ್ ಕುಲಕರ್ಣಿ ಮತ್ತು ಇತರ ಆರೋಪಿಗಳು ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಅರ್ಜಿಯ ವಿಚಾರಣೆಯು ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಆಕ್ಷೇಪಣೆ ಸಲ್ಲಿಕೆ ಮಾಡುವಂತೆ ಸಿಬಿಐಗೆ ಸೂಚನೆ ನೀಡಿ ವಿಚಾರಣೆಯನ್ನು ಮೇ 26ಕ್ಕೆ ಮುಂದೂಡಿಕೆ ಮಾಡಿದೆ.

ಈ ಪ್ರಶಸ್ತಿ ಪಡೆದ ದೇಶದ ಮೊದಲ ಸಾಧಕಿ ಎಂಬ ಹೆಗ್ಗಳಿಕೆ

ವನ್ಯಜೀವಿ ವಿಜ್ಞಾನಿ ಕೃತಿ ಕಾರಂತಗೆ ಜಿಯಾಗ್ರಫಿ ಎಕ್ಸ್‌ಪ್ಲೋರರ್ ಪ್ರಶಸ್ತಿ

ಬೆಂಗಳೂರು: ಭಾರತದ ವನ್ಯಜೀವಿ ಸಂರಕ್ಷಣಾ ಕ್ಷೇತ್ರಕ್ಕೆ ಜಾಗತಿಕ ವೇದಿಕೆಯಲ್ಲಿ ಮತ್ತೊಂದು ದೊಡ್ಡ ಗೌರವ ದೊರೆತಿದೆ. ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಕೃತಿ ಕಾರಂತ ಅವರಿಗೆ 2026ನೇ ಸಾಲಿನ 'ರೋಲೆಕ್ಸ್ ನ್ಯಾಷನಲ್ ಜಿಯಾಗ್ರಫಿಕ್ ಎಕ್ಸ್‌ಪ್ಲೋರರ್ ಆಫ್ ದಿ ಇಯರ್' ಪ್ರಶಸ್ತಿ ಲಭಿಸಿದೆ. ಈ ಗೌರವ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಜ್ಞಾನಪೀಠ ವಿಜೇತ ಸಾಹಿತಿ ಶಿವರಾಮ ಕಾರಂತ ಅವರ ಮೊಮ್ಮಗಳು, ವನ್ಯಜೀವಿ ತಜ್ಞ ಉಲ್ಲಾಸ ಕಾರಂತ ಅವರ ಮಗಳಾದ ಕೃತಿ ವನ್ಯಜೀವಿ ವಿಜ್ಞಾನಿ ಹಾಗೂ ಸಂರಕ್ಷಣಾವಾದಿಯಾಗಿ ಖ್ಯಾತರಾಗಿದ್ದಾರೆ.

ವನ್ಯಜೀವಿ ಸಂರಕ್ಷಣೆ ಎಂದರೆ ಕೇವಲ ಹುಲಿ, ಆನೆಗಳನ್ನು ಉಳಿಸುವುದಲ್ಲ, ಕಾಡಿನ ಅಂಚಿನಲ್ಲಿ ಬದುಕುವ ಜನರ ಬದುಕನ್ನೂ ರಕ್ಷಿಸುವುದು ಎಂಬ ನಂಬಿಕೆಯನ್ನು ಕಾರ್ಯರೂಪಕ್ಕೆ ತಂದು, ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ಕಡಿಮೆ

ಮಾಡಿ, ಗ್ರಾಮೀಣ ಸಮುದಾಯಗಳೊಂದಿಗೆ ಕೈಜೋಡಿಸಿ ಸಹಜೀವನದ ಮಾದರಿಗಳನ್ನು ನಿರ್ಮಿಸಲು ಕಳೆದ ಮೂರು ದಶಕಗಳಿಂದ ಅವರು ದುಡಿಯುತ್ತಿದ್ದಾರೆ. ಅವರು ಬೆಂಗಳೂರಿನ ಸೆಂಟರ್ ಫಾರ್ ವೈಲ್ಡ್ ಲೈಫ್ ಸ್ಟಡೀಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದಾರೆ. ಅವರು ಎಂಟು ರಾಜ್ಯಗಳ 100ಕ್ಕೂ ಹೆಚ್ಚು ವನ್ಯಜೀವಿ ಸಂರಕ್ಷಣಾ ಪ್ರದೇಶಗಳಲ್ಲಿ ಸಂಚರಿಸಿ 50 ಸಾವಿರಕ್ಕೂ ಹೆಚ್ಚು ಸ್ಥಳೀಯರಿಗೆ ತರಬೇತಿ ನೀಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ವಿದ್ಯಾಪೀಠದಲ್ಲಿ ಉಪನ್ಯಾಸ

ಏಕರೂಪ ಜಾರಿಗೆ ಸಮಯ ಬೇಕು: ಮೋಹನ್ ಭಾಗವತ್

ಮೈಸೂರು: ಏಕರೂಪ ನಾಗರಿಕ ಸಂಹಿತೆ (ಯುಸಿಸಿ)ಯನ್ನು ಭಾರತದಾದ್ಯಂತ ಜಾರಿಗೆ ತರಬಹುದು. ಆದರೆ, ಪ್ರಜಾಪ್ರಭುತ್ವದಲ್ಲಿ ಇಂತಹ ಪ್ರಮುಖ ಸುಧಾರಣೆಗೆ ಸಮಯ ಬೇಕಾಗುತ್ತದೆ, ಅದಕ್ಕೆ ಜಾಗೃತಿ ಅಗತ್ಯ ಎಂದು ಆರ್‌ಎಸ್‌ಎಸ್ ಸರ ಸಂಘಚಾಲಕ ಮೋಹನ್ ಭಾಗವತ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠ ಆಶ್ರಯದಲ್ಲಿ ಗುರುವಾರ ಆಯೋಜಿಸಿದ್ದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಏಕರೂಪ ನಾಗರಿಕ ಸಂಹಿತೆಯು ಉತ್ತರಾಖಂಡದಲ್ಲಿ ಈಗಾಗಲೇ ಜಾರಿಯಾಗಿದೆ. ಇದೇ ರೀತಿಯಲ್ಲಿ ಎರಡು ಅಥವಾ ಮೂರು ರಾಜ್ಯಗಳು ಸಹ ಆ ದಿಕ್ಕಿನಲ್ಲಿ ಸಾಗುತ್ತಿವೆ. ಈ ಪರಿಕಲ್ಪನೆಯು ಕ್ರಮೇಣ ನೆಲೆಗೊಳ್ಳುತ್ತಿದೆ, ಮುಂದೊಂದು ದಿನ ದೇಶಾದ್ಯಂತ ವಿಸ್ತರಿಸಬಹುದು ಎಂದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ನಡೆದ ಸುವರ್ಣ ಮಹೋತ್ಸವದಲ್ಲಿ ಮೋಹನ್ ಭಾಗವತ್ ಪುಸ್ತಕ ಬಿಡುಗಡೆ ಮಾಡಿದರು.

ರತ್ನಾ ಮನೆ ಬಳಿ ಘಟನೆ, ಐವರಿಗೆ ಗಾಯ
ಟಿಎಂಸಿ ನಾಯಕನ ಮನೆಗೂ ಬಾಂಬ್

ಬಂಗಾಳ ಬಿಜೆಪಿ ಶಾಸಕಿ ನಿವಾಸದ ಸನಿಹ ಬಾಂಬ್

ಕೋಲ್ಕತಾ: ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ

ಬಳಿಕ ದಿನೇದಿನೇ ರಾಜಕೀಯ ಹಿಂಸಾಚಾರ ತೀವ್ರಗೊಂಡಿದೆ. ಬುಧವಾರ ರಾತ್ರಿ ಬಿಜೆಪಿ ನಾಯಕ ಸುವೇಂದು ಅಧಿಕಾರಿಯ ಪಿಎಯನ್ನು ಗುಂಡಿಕ್ಕಿ ಕೊಂದ ಬಳಿಕ, ಉತ್ತರ 24 ಪರಗಣ ಜಿಲ್ಲೆಯ ಪಾಣಿಹಟಿಯ ಸೇಂಟ್ ಜೇವಿಯರ್ ಸಂಸ್ಥೆಯ ಬಳಿ ಬಾಂಬ್ ಸ್ಫೋಟ ನಡೆದಿದೆ. ಇದರಲ್ಲಿ ಐವರು ಬಿಜೆಪಿ ಬೆಂಬಲಿಗರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ನೂತನ ಬಿಜೆಪಿ ಶಾಸಕಿ ರತ್ನಾ ದೇಬನಾಥ್‌ರವರ ಮನೆಯ ಸನಿಹದಲ್ಲಿ ಈ ಘಟನೆಯಾಗಿರುವುದು ಎಲ್ಲರ ಗಮನ ಸೆಳೆದಿದೆ. → 4

ಸುವೇಂದು ಪಿಎ ಹತ್ಯೆ ತನಿಖೆಗೆ ಎಸ್‌ಐಟಿ ರಚನೆ

ಪಶ್ಚಿಮ ಬಂಗಾಳದ ಮುಂದಿನ ಮುಖ್ಯಮಂತ್ರಿ ಎಂದೇ ಬಿಂಬಿತವಾಗಿರುವ ಸುವೇಂದು ಅಧಿಕಾರಿ ಪಿಎ ಚಂದ್ರನಾಥರನ್ನು ಬುಧವಾರ ರಾತ್ರಿ ಹತ್ಯೆ ಮಾಡಲಾಗಿತ್ತು. ಅವರ ಹಂತಕರಿಗಾಗಿ ರಾಜ್ಯ ಪೊಲೀಸರು ತೀವ್ರ ಶೋಧ ಆರಂಭಿಸಿದ್ದಾರೆ. ಹಂತಕರನ್ನು ಬಂಧಿಸಲು ಹಲವು ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿದೆ. 4 ಗುಂಡೇಟು ತಿಂದಿದ್ದ ಚಂದ್ರನಾಥ್‌ರನ್ನು ಆಸ್ಪತ್ರೆಗೆ ಕರೆದೊಯ್ಯುವಾಗಲೇ ಅವರು ಸಾವನ್ನಪ್ಪಿದ್ದರು.

ಚುನಾವಣಾ ಆಯೋಗಕ್ಕೆ ರಾಜೇಗೌಡ ದೂರು



ಬೆಂಗಳೂರು: ಶೃಂಗೇರಿ ಅಂಚೆ ಮತ ಮರು ಎಣಿಕೆಯಲ್ಲಿ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಯನ್ನು ಭೇಟಿಯಾಗಿ ಮತಪತ್ರ ತಿದ್ದಿರುವುದಾಗಿ ಆರೋಪಿಸಿ ತನಿಖೆ ನಡೆಸುವಂತೆ ದೂರು ನೀಡಿದ್ದಾರೆ. ಭೇಟಿ ಬಳಿಕ ಮಾತನಾಡಿದ ಅವರು, 2023ರ ಚುನಾವಣೆ ಮತ ಎಣಿಕೆಯ ವೇಳೆ ಜೆಡಿಎಸ್ ಕಾಂಗ್ರೆಸ್, ಬಿಜೆಪಿ, ಪಕ್ಷೇತರರ ಅಭ್ಯರ್ಥಿಗಳ ಏಜೆಂಟ್‌ಗಳು ಇದ್ದರು. ಪಾರದರ್ಶಕವಾಗಿ ಮತ ಎಣಿಕೆ ಆಗಿತ್ತು. ಮತ ಎಣಿಕೆ ಬಳಿಕ ರಾಜೇಗೌಡ ಗೆದ್ದರು ಎಂದು ಘೋಷಣೆ ಮಾಡಿದ್ದರು ಎಂದಿದ್ದಾರೆ.

ಹೆಲಿಕಾಪ್ಟರ್ ದುರಂತ: ಶಿಂದೆ ಪಾರು

ಮುಂಬೈ: ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಪ್ರಯಾಣಿಸುತ್ತಿದ್ದ ವಿಮಾನವು ಹಾರಾಟದ ವೇಳೆ ಕೆಲಕಾಲ ದಾರಿ ತಪ್ಪಿದ ಘಟನೆ ನಡೆದಿದೆ. ಆದರೆ ಪೈಲಟ್‌ನ ಸಮಯಪ್ರಜ್ಞೆ ಮತ್ತು ಚಾಕಚಕ್ಯತೆಯಿಂದ ವಿಮಾನವನ್ನು ಸುರಕ್ಷಿತವಾಗಿ ಇಳಿಸಲಾಗಿದ್ದು, ಸಂಭವನೀಯ ಅನಾಹುತ ತಪ್ಪಿದೆ. ಮೂಲಗಳ ಪ್ರಕಾರ, ಹವಾಮಾನ ಹಾಗೂ ತಾಂತ್ರಿಕ ಸಂವಹನದ ದೋಷದಿಂದ ಸಮಸ್ಯೆಯಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮಗಳ ಮೊಬೈಲ್ ಚಟ ಬಿಡಿಸಲು ಬೌನ್ಸರ್‌ಗಳನ್ನು ನೇಮಿಸಿದ ಪೋಷಕರು

ಸುದ್ದಿ

10 ಲಕ್ಷ ಜನ ಸೇರುವ ನಿರೀಕ್ಷೆ, 10 ಸಾವಿರ ಬಸ್, 50 ಸಾವಿರ ಇತರೆ ವಾಹನ ಆಗಮನ | 1000ಕ್ಕೂ ಅಧಿಕ ಶ್ರೀಗಳು ಭಾಗಿ ನಿರೀಕ್ಷೆ

ನಾಳೆ ಬಿಎಸ್‌ವೈ ಅಭಿಮಾನೋತ್ಸವ, ಭರದ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಯಡಿಯೂರಪ್ಪ ಅಭಿಮಾನೋತ್ಸವಕ್ಕೆ ಅಂತಿಮ ಹಂತದ ಸಿದ್ಧತೆಗಳು ನಡೆಯುತ್ತಿದ್ದು, ಕರ್ನಾಟಕವನ್ನು ಮರುವಶಕ್ಕೆ ಪಡೆದುಕೊಳ್ಳಲು ಬೂಸ್ಟರ್ ಡೋಸ್ ನೀಡಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲು ಬಿಜೆಪಿ ಯೋಜಿಸಿದೆ.

ಪಂಚರಾಜ್ಯಗಳಲ್ಲಿ ಬಿಜೆಪಿಯ ಉತ್ತಮ ಫಲಿತಾಂಶದ ಬೆನ್ನಲ್ಲೇ ದಕ್ಷಿಣ ಭಾರತದಲ್ಲಿ ಅಧಿಕಾರ ಕಳೆದುಕೊಂಡಿರುವ ಕರ್ನಾಟಕದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ತರಲು ಕಾರ್ಯಕ್ರಮ ನಾಂದಿ ಹಾಡಲಿದೆ. ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಪಯಣವನ್ನು ಸಂಭ್ರಮಾಚರಣೆ ಮೂಲಕ ಪಕ್ಷದ ವರ್ಚಸ್ಸನ್ನೂ ಈ ಮೂಲಕ ಹೆಚ್ಚಿಸಿಕೊಳ್ಳಲು ಬಿಜೆಪಿಯೂ ತಂತ್ರ ಹಣೆದಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆಯಿದೆ.



ಚಿತ್ರದುರ್ಗದ ಭೋವಿ ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಯಿತು

ಮೇ 9ರಂದು ಬೆಳಗ್ಗೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನೂತನ ಮುಖ್ಯಮಂತ್ರಿಗಳ ಪ್ರಮಾಣ ವಚನ ನಡೆಯಲಿದೆ. ಹೀಗಾಗಿ ಅಭಿಮಾ ನೋತ್ಸವವು ಬೆಳಗ್ಗೆಯ ಬದಲಾಗಿ ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ. ಅಭಿಮಾನೋತ್ಸವ ಸಂಬಂಧ ಈಗಾಗಲೇ ಭೂಮಿಪೂಜೆ ನೆರವೇರಿಸಿ ವೇದಿಕೆಯ ಸಿದ್ಧತೆಗಳು ಅಂತಿಮ ಹಂತದಲ್ಲಿದೆ.

ಈಗಾಗಲೇ ಪ್ರತಿ ಜಿಲ್ಲೆಗೆ ಹೋಗಿ ಸ್ವಾಮೀಜಿಗಳಿಗೆ ಆಮಂತ್ರಣಪತ್ರ ನೀಡಲಾಗಿದ್ದು, ನಾಡಿನ ಮಠಾಧೀಶರು, ಸ್ವಾಮೀಜಿಗಳಿಗೆ ಪಾಲ್ಗೊಳ್ಳಲು ವಿನಂತಿಸಲಾಗಿದೆ. ಎಲ್ಲ ಸಮಾಜದ ಗುರುಗಳು ಬಂದು ಆಶೀರ್ವದಿಸಬೇಕೆಂದು ಮನವಿ ಮಾಡಲಾಗಿದೆ. ಅಭಿಮಾನಿಗಳು ಆಗಮಿಸಲು 10 ಸಾವಿರ ಬಸ್‌ಗಳನ್ನು ಬುಕಿಂಗ್ ಮಾಡಲಾಗಿದೆ. 45ರಿಂದ 50 ಸಾವಿರ ಕಾರು ಮತ್ತಿತರ ವಾಹನಗಳು ಬರಲಿವೆ. ನಮ್ಮ ನಿರೀಕ್ಷೆಗೂ ಮೀರಿ ಸ್ಪಂದನೆ ಲಭಿಸುತ್ತಿದೆ, ಶ್ರೀಗಳು, ಅಭಿಮಾನಿಗಳು ದೊಡ್ಡ ಸಂಖ್ಯೆಯಲ್ಲಿ ಬರಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಎರಡು ಗ್ರಂಥಗಳ ಬಿಡುಗಡೆ: ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಮಾಜಸೇವೆ, ಜೀವನಚರಿತ್ರೆಯನ್ನು ಐತಿಹಾಸಿಕ ನಗರ ಚಿತ್ರದುರ್ಗದಲ್ಲಿ ಒಂದು ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಯಡಿಯೂರಪ್ಪನವರ ಜೀವನಚರಿತ್ರೆಯನ್ನಾಧರಿಸಿದ ಕೆಂದಾವರೆ-ಕಮಲದಲ್ಲಿ ಅರಳಿದ ಹೂ, ಸದನದಲ್ಲಿ ಶಿಕಾರಿ 2 ಗ್ರಂಥಗಳನ್ನು ಅಂದು ಬಿಡುಗಡೆ ಮಾಡಲು ಸಿದ್ಧತೆ ನಡೆಸಲಾಗಿದೆ.

ಇಂದು ಯಡಿಯೂರಪ್ಪ ಪುರಪ್ರವೇಶ: ಮೇ 8ರಂದು ಸಂಜೆ ಯಡಿಯೂರಪ್ಪನವರ ಪುರಪ್ರವೇಶ ನಡೆಯಲಿದ್ದು, ಇದನ್ನು ನಾಡಿನ ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಮಾಡಲು ತಯಾರಿ ನಡೆಸಲಾಗಿದೆ. 24 ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿದೆ.

> ತುಮಕೂರು ರಸ್ತೆಗೆ ಸಮೀಪವಿರುವ ವಿಧಾನಸಭಾ ಕ್ಷೇತ್ರಗಳ ಕಾರ್ಯಕರ್ತರು ಚಿತ್ರದುರ್ಗದ ಕಾರ್ಯಕ್ರಮಕ್ಕೆ ಹೋಗುತ್ತಾರೆ. ಯಾವುದೇ ಸಮಸ್ಯೆಯಾಗದಂತೆ ಸಿದ್ಧತೆ ಮಾಡುತ್ತಿದ್ದೇವೆ.
> -ಆರ್.ಅಶೋಕ, ಪ್ರತಿಪಕ್ಷದ ನಾಯಕ

> ಯಡಿಯೂರಪ್ಪ ಅವರೆಂದರೆ ಹೋರಾಟಗಾರರು. ಅವರು ನಗರಕ್ಕೆ ಸೀಮಿತವಾಗಿದ್ದ ಪಕ್ಷವು ಹಳ್ಳಿಹಳ್ಳಿಗೂ ವಿಸ್ತರಿಸಲು ಕಾರಣವಾದವರು. ಕಾಲಿಗೆ ಚಕ್ರ ಕಟ್ಟಿಕೊಂಡು ಪ್ರವಾಸ ಮಾಡಿ ಪಕ್ಷ ಸಂಘಟಿಸಿದವರು.
> - ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ ಮ.ಟೆಂಡರ.ಪ್ರ-35/2026-27/542 ದಿನಾಂಕ: 06-05-2026

ಮರುಟೆಂಡರ್ (Call-2) ಪ್ರಕಟಣೆ (ಇ-ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)

ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ-1/ಟೆಂಡರ-35/2025-26/5604 ದಿನಾಂಕ: 04-03-2026

ಉಲ್ಲೇಖದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2025-26ನೇ ಸಾಲಿನ Mitigation-8443-Deposite Contribution During 2025-26 ಯೋಜನೆ ಅಡಿಯಲ್ಲಿ ಕರೆಯಲಾಗಿದ್ದ Construction of retaining wall at km 1.00 at Uppinapattana Bandivala road in Kumta taluk Uttara kannada district (RESERVED FOR Schedule Tribe category) PWD/2025-26/FP/WORK_INDENT34090/CALL-2 ರೂ. 82.07 ಲಕ್ಷದ ಕಾಮಗಾರಿಗಳಿಗೆ ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 13-05-2026 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 14-05-2026 16.30 ಗಂಟೆವರೆಗೆ (3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 15-05-2026 17.00 ಗಂಟೆವರೆಗೆ (4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 18-05-2026 17.00 ಗಂಟೆವರೆಗೆ

ಹೆಚ್ಚಿನ ವಿವರಗಳನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/KWR/KSMCA/111/26-27 dt. 06.05.2026

(ಪೌರಾಡಳಿತ ಇಲಾಖೆ)
ಪಟ್ಟಣ ಪಂಚಾಯತ ಕಾರ್ಯಾಲಯ ಇಂಚಾಯತ ಕಲಘಟಗಿ-581204
TOWN PANCHAYAT KALAGHATAGI-581204
ಕಚೇರಿ ವಿಳಾಸ: ಟಿಎಂಸಿ ರೋಡ್ ಕಲಘಟಗಿ Tel No: 08370-284542 284544
E-mail:itstaff_ulb_kalaghatagi@yahoo.co.in WebAddrs:www.kalaghatagitown. gov.in
(ರಾಜ್ಯ: ಕರ್ನಾಟಕ ಜಿಲ್ಲಾ: ಧಾರವಾಡ)

ಕ್ರಮಾಂಕ:-/ಪ.ಪಂ.ಅ/ಜೆಇ/ಟೆಂ.ಪ್ರ/2025-26/ ದಿನಾಂಕ: 7/05/2026

: ಟೆಂಡರ ಪ್ರಕಟಣೆ :

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999 ಮತ್ತು (ತಿದ್ದುಪಡಿ) 2001 ರಂತೆ ಕರ್ನಾಟಕ ಲೋಕೂಪಯೋಗಿ ಮತ್ತು ಇ-ಪೋರ್ಟಲ್‌ನಲ್ಲಿ ನೊಂದಣಿ ಮಾಡಿಸಿದ ಅರ್ಹ ಗುತ್ತಿಗೆದಾರರಿಂದ ಹಾಗೂ ಪೂರೈಕೆದಾರರರಿಂದ ಎಸ್ ಎಫ್ ಸಿ. ಅನುದಾನ ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಿದ ಕಾಮಗಾರಿ ಸ್ಟಾಂಡರ್ಡ ಡಾಕ್ಯುಮೆಂಟ್ ರನ್ವಯ ಇಂಡೆಂಟ ನಂ : 57729, 58102, 58097, 57732, 57735, 57728, ಇ ಪೋರ್ಟಲ್- (E-Portal) ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್‌ಜಾಲ ವಿಳಾಸ: https://kppp.karnataka.gov.in/ .ದಲ್ಲಿ ತಿಳಿದುಕೊಳ್ಳಬಹುದಾಗಿದೆ

1 ಟೆಂಡರ ಸಲ್ಲಿಸಲುಕೊನೆಯ ದಿನಾಂಕ : 14/05/2026 ರಂದು ಸಾಯಂಕಾಲ 5.00
2 ಬಿಡ್‌ತೆರೆಯುವ ದಿನಾಂಕ : 16/05/2026 ರಂದು ಮುಂಜಾನೆ 11.00

ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ, ಕಲಘಟಗಿ — ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಕಲಘಟಗಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132,
ದೂ ಸಂಖ್ಯೆ: 08137-282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಹ.ಅ-06/2026-24
ದಿನಾಂಕ: 04.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್‌ನಲ್ಲಿ ಮಧುಗಿರಿ ವಿಭಾಗ ವ್ಯಾಪ್ತಿಯ, ಚಿಂತಾಮಣಿ ವಿಧಾನ ಸಭಾ ಕ್ಷೇತ್ರದ "Construction of Checkdam and other development works for major nala near Kariyapalli Village, Kadadhanamari gram Panchayathi, Munganahalli Hobli in Chintamani taluk" (Indent No:505)" ಕಾಮಗಾರಿಗೆ ರೂ.253.73 ಲಕ್ಷಗಳಿಗೆ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ Percentage Tender ಮೂಲಕ ಅರ್ಹ ಬಿಡ್ಡುದಾರರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನ https://kppp.karnataka.gov.in ವೆಬ್ ಸೈಟ್ ಮೂಲಕ ದಿನಾಂಕ: 05.05.2026 ರಿಂದ ದಿನಾಂಕ: 12.05.2026 ರ ಸಂಜೆ 5:30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಬಿಡ್ಡುದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: 08.05.2026 ರ ಸಂಜೆ 3:00 ಗಂಟೆಯವರೆಗೆ ಸಂಪರ್ಕಿಸಬಹುದು ಹಾಗೂ ಸ್ವೀಕೃತ ಟೆಂಡರ್‌ಗಳನ್ನು ಕೆ.ಪಿ.ಪಿ-ಪೋರ್ಟಲ್‌ನಲ್ಲಿ ದಿನಾಂಕ: 14.05.2026 ರಂದು ಬೆಳಗ್ಗೆ 11:00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ವಿಜನಿನಿ, ಮಧುಗಿರಿ
DIPR/TUM/59/KSMCA/2026-27

ನಗರಸಭಾ ಕಾರ್ಯಾಲಯ, ಹರಿಹರ-577601
ಫೋ:08192-202627 ka.harihar.cmc@gmail.com
ನಂ.ನಸಹ/ತಾಂತ್ರಿಕ/ಐಎಫ್‌ಟಿ-30/2025-26 ದಿನಾಂಕ: 06-05-2026

ಟೆಂಡರ್ ಪ್ರಕಟಣೆ

2023-24 ಮತ್ತು 2024-25 ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಶೇ.24.10ರ ಯೋಜನೆ ಮತ್ತು 2026-27ನೇ ಸಾಲಿನ ನಗರಸಭೆ ಸಾಮಾನ್ಯ ನಿಧಿ ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ-1999-2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಜಿ-1, ಕೆ.ಸಿ-1 ಮತ್ತು ಕೆಡಬ್ಲ್ಯೂ-2 ರ ನಿಯಮದನ್ವಯ ಈ ಕೆಳಗಿನಂತೆ ಇಂಡೆಂಟ್ ನಂಬರ್‌ಗೆ ನೀಡಲಾದ ಕೆಲಸಕ್ಕೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ/ಏಜೆನ್ಸಿದಾರರು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು KPP ಪೋರ್ಟ್‌ಲ್ ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಅನ್ವಯಿಸುವ ಟೆಂಡರ್ ದಾಖಲೆಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ.

ವಿವರ	ಕ್ರಮ ಸಂಖ್ಯೆ 1 ರಿಂದ 2 ರ ವರೆಗಿನ ಕಾಮಗಾರಿಗಳಿಗೆ ನಿಗಧಿಪಡಿಸಿದ ದಿನಾಂಕ	ಕ್ರಮ ಸಂಖ್ಯೆ 3 ಮತ್ತು 4 ಕಾಮಗಾರಿಗಳಿಗೆ ನಿಗಧಿಪಡಿಸಿದ ದಿನಾಂಕ
ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 22-05-2026 ರಂದು ಸಾಯಂಕಾಲ 5.00 ಗಂಟೆಯವರೆಗೆ	ದಿನಾಂಕ: 18-05-2026 ರಂದು ಸಾಯಂಕಾಲ 5.00 ಗಂಟೆಯವರೆಗೆ
ಕೆ.ಪಿ.ಪಿ ಪೋರ್ಟಲ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 25-05-2026 ರಂದು ಸಾಯಂಕಾಲ 5.30 ಗಂಟೆಗೆ	ದಿನಾಂಕ: 19-05-2026 ರಂದು ಸಾಯಂಕಾಲ 5.30 ಗಂಟೆಗೆ

ಕ್ರ. ಸಂ	ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1.	DMA/2025-26/SE7618/CALL-2	18.00
2.	DMA/2025-26/SE 7388/ CALL-2	20.25
3.	DMA/2026-2/WS/WORK_INDENT58087	28.00
4.	DMA/2026-27/SE 7769/CALL-2	14.00

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹರಿಹರ. — ಸಹಿ/-ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/67/ಕೆಎಸ್‌ಎಂಸಿಎ/2026-27

ಜಾನುವಾರುಗಳ ಆರೈಕೆಗಾಗಿ ರೂಪಿಸಿದ ವಿಶೇಷ ಯೋಜನೆ ಮೈಸೂರಲ್ಲಿ ಯಶಸ್ವಿ

ಜಾನುವಾರುಗಳಿಗೆ ಸಂಚಾರಿ ಸಂಜೀವಿನಿ

ಕೆ.ಜಿ.ಲೋಕೇಶ್ ಬಾಬು

ಮೈಸೂರು: ರೈತಕುಲದ ಬೆನ್ನೆಲುಬಾದ ಜಾನುವಾರುಗಳ ಆರೈಕೆಗಾಗಿ ಪಶುಸಂಗೋಪನಾ ಇಲಾಖೆ ರೂಪಿಸಿದ ವಿಶೇಷ ಯೋಜನೆಗೆ ಮೈಸೂರು ಜಿಲ್ಲೆಯಲ್ಲಿ ಅಭೂತಪೂರ್ವ ಸ್ಪಂದನೆ ಕಂಡುಬಂದಿದೆ.

ಜಾನುವಾರುಗಳ ಕಾಲುಬಾಯಿ ರೋಗ, ವಾರ್ಷಿಕ ಲಸಿಕೆ ಕಾರ್ಯಕ್ರಮಗಳು, ಸಾಂಕ್ರಾಮಿಕ ರೋಗಗಳು ಜಾನುವಾರುಗಳನ್ನು ಬಾಧಿಸುವುದು ಸಾಮಾನ್ಯವಾಗಿದ್ದು, ಅವುಗಳಿಗೆ ಕಾಲಕಾಲಕ್ಕೆ ನಿಗಧಿತ ಕೇಂದ್ರದಲ್ಲಿ ಚಿಕಿತ್ಸೆ ನೀಡುತ್ತಿರುವುದರ ನಡುವೆಯೇ ರೈತನ ಮನೆ ಬಾಗಿಲಲ್ಲೇ ಜಾನುವಾರುಗಳಿಗೆ ಚಿಕಿತ್ಸೆ ನೀಡಬೇಕೆಂಬ ರಾಜ್ಯ ಸರ್ಕಾರದ ಸಂಕಲ್ಪ ಯಶಸ್ವಿ ಕಂಡಿದೆ. ಜಾನುವಾರುಗಳಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಅವುಗಳು ಇರುವಲ್ಲಿಯೇ ನೀಡುವ ಉದ್ದೇಶದಿಂದ ಜಾರಿಗೆ ತರಲಾದ ಸಂಚಾರಿ ಪಶುಚಿಕಿತ್ಸಾ ಘಟಕಕ್ಕೆ ಮೈಸೂರು ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆತಿದೆ.

ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿ ಈ ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ. ಕೇಂದ್ರ ಸರಕಾರದ ಶೇ.60 ಹಾಗೂ ರಾಜ್ಯ ಸರಕಾರದ ಶೇ 40ರಷ್ಟು ಅನುದಾನದಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದ್ದು, ಕಳೆದ ಮಾರ್ಚ್ ಹಾಗೂ ಏಪ್ರಿಲ್ ತಿಂಗಳಲ್ಲಿ ಸಂಚಾರಿ ಪಶುಚಿಕಿತ್ಸಾ ಘಟಕದ ಮೂಲಕ ಒಟ್ಟು 3000ಕ್ಕೂ ಹೆಚ್ಚು ವೈದ್ಯಕೀಯ ಸೇವೆಯನ್ನು ಒದಗಿಸಲಾಗಿದೆ.

ಸಂಚಾರಿ ಪಶುಚಿಕಿತ್ಸಾ ಘಟಕದ ಸೇವೆಯು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ದೊರೆಯಲಿದೆ. ಈ ಸೇವೆಗೆ ಸಾಕಷ್ಟು ಬೇಡಿಕೆ ಇರುವ ಹಿನ್ನೆಲೆಯಲ್ಲಿ ಸಮಯವನ್ನು ವಿಸ್ತರಿಸಬೇಕು ಹಾಗೂ ಹೆಚ್ಚುವರಿ ಸಂಚಾರಿ ಪಶುಚಿಕಿತ್ಸಾ ಘಟಕವನ್ನು ಮಂಜೂರು ಮಾಡಬೇಕು ಎಂಬ ಕೂಗು ರೈತರ ಕಡೆಯಿಂದ ಕೇಳಿಬರುತ್ತಿದೆ.

ಸಿಬ್ಬಂದಿ ಬದ್ಧತೆ: ಪಶುಸಂಗೋಪನಾ ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿಯ ಪ್ರಾಮಾಣಿಕ ಸೇವೆಯಿಂದ ಜಿಲ್ಲೆಯಲ್ಲಿ ಹಲವಾರು ಜಾನುವಾರು ಗಳು ಹಲವಾರು ಕಾಯಿಲೆಗಳಿಂದ ಪಾರಾಗುತ್ತಿವೆ. ಜಾನುವಾರುಗಳಿಗೆ ಕಾಯಿಲೆ ಕಾಣಿಸಿಕೊಂಡರೆ ಅವುಗಳನ್ನು ಪಶುವೈದ್ಯ ಆಸ್ಪತ್ರೆಗೆ ಕರೆ ತರುವುದು ತುಂಬಾ ಕಷ್ಟದ ಕೆಲಸ. ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಸು, ಎತ್ತುಗಳನ್ನು ರೈತರು ಸಾಕುತ್ತಾರೆ. ಇವುಗಳಿಗೆ ಕಾಯಿಲೆ ಕಾಣಿಸಿಕೊಂಡರೆ ಗಾತ್ರದ ದೃಷ್ಟಿಯಿಂದ ಆಸ್ಪತ್ರೆಗೆ ಕರೆ ತರುವುದು ಕಷ್ಟದ ಕೆಲಸ ಮಾತ್ರವಲ್ಲದೆ ರೈತರಿಗೆ ಆರ್ಥಿಕ ಹೊರೆಯೂ ಉಂಟಾಗುತ್ತದೆ. ಆದರೆ, ಆರೋಗ್ಯ ಸೇವೆಯು ಜಾನುವಾರುಗಳು ಇರುವಲ್ಲಿಯೇ ಚಿಕಿತ್ಸೆ ದೊರೆಯುತ್ತಿರುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿದೆ.

ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಒಂದು ಸಂಚಾರಿ ಪಶು ಚಿಕಿತ್ಸಾ ಘಟಕ ಕಾರ್ಯನಿರ್ವಹಿಸುತ್ತಿದ್ದು, ಪಿರಿಯಾಪಟ್ಟಣ ತಾಲೂಕಿನಲ್ಲಿ ತಾಲೂಕು ಕೇಂದ್ರ ಹಾಗೂ ಬೆಟ್ಟದಪುರದಲ್ಲಿ ತಲಾ 1 ಸಂಚಾರಿ ಪಶುಚಿಕಿತ್ಸಾ ಘಟಕ ಕಾರ್ಯನಿರ್ವಹಿಸುತ್ತಿದೆ. ಸರಗೂರು ಘಟಕ ಹೊರತುಪಡಿಸಿ ಉಳಿದ ಎಲ್ಲ ಘಟಕದಲ್ಲೂ ಪಶುವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ.

1962 ಸಂಖ್ಯೆಗೆ ಕರೆ ಮಾಡಿ: ಜಾನುವಾರುಗಳು ಅನಾರೋಗ್ಯಕ್ಕೀಡಾದ ಸಂದರ್ಭದಲ್ಲಿ ಪಶುವೈದ್ಯರು ಅಥವಾ ಸಿಬ್ಬಂದಿ ಸಂಪರ್ಕ ಸಾಧಿಸುವುದು ಗ್ರಾಮೀಣ ಭಾಗದಲ್ಲಿ ಸವಾಲಾಗಿದೆ. ಇಂತಹ ಸಮಸ್ಯೆ ತಪ್ಪಿಸುವ ಸಲುವಾಗಿಯೇವ ಸಂಚಾರಿ ಪಶುಚಿಕಿತ್ಸಾ ಘಟಕದ ಸೇವೆಯನ್ನು ಕೇಂದ್ರ ಸರಕಾರದ ಮಾರ್ಗಸೂಚಿಯಂತೆ ಪಡೆಯಬಹುದಾಗಿದೆ. ಅದಕ್ಕಾಗಿ ಬೆಂಗಳೂರಿನಲ್ಲಿ ಕಾಲ್ ಸೆಂಟರ್ ಸ್ಥಾಪಿಸಲಾಗಿದ್ದು, 1962 ಸಂಖ್ಯೆಗೆ ಉಚಿತವಾಗಿ ಕರೆ ಮಾಡಿ ಸೇವೆ ಪಡೆಯಬಹುದು. ಪ್ರತಿ ತಾಲೂಕಿನ ಸಂಚಾರಿ ಒಬ್ಬ ಪಶುವೈದ್ಯರು, ಒಬ್ಬ ಅರೆ ತಾಂತ್ರಿಕ ಸಿಬ್ಬಂದಿ, ಒಬ್ಬ ಚಾಲಕ ಕಂ ಅಟೆಂಡರ್ ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಈ ಘಟಕಗಳಿಗಾಗಿ ಒಟ್ಟು 9 ಮಂದಿ ಪಶುವೈದ್ಯರು, 10 ಅರೆತಾಂತ್ರಿಕ ಸಿಬ್ಬಂದಿ ಹಾಗೂ 10 ಚಾಲಕ ಕಂ ಅಟೆಂಡರ್ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹಾಲಿನ ಪ್ರಮಾಣದಲ್ಲಿ ಏರಿಕೆ: ಸಕಾಲಕ್ಕೆ ಸರಿಯಾಗಿ ಜಾನುವಾರುಗಳಿಗೆ ಲಸಿಕೆ ಹಾಗೂ ಸೂಕ್ತ ಚಿಕಿತ್ಸೆ ಲಭಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2023-24ನೇ ಸಾಲಿನಲ್ಲಿ ಪ್ರತಿನಿತ್ಯ ಸರಾಸರಿ 6.90 ಲಕ್ಷ ಲೀಟರ್ ಹಾಲು ಉತ್ಪಾದನೆ ಮಾಡಲಾಗಿತ್ತು. 2025-26ನೇ ಸಾಲಿನಲ್ಲಿ ಪ್ರತಿನಿತ್ಯ ಸರಾಸರಿ 9.27 ಲಕ್ಷ ಲೀಟರ್ ದಾಖಲೆಯ ಪ್ರಮಾಣದ ಹಾಲು ಉತ್ಪಾದನೆಯಾಗಿದೆ. ಹಿಂದಿನ ಸಾಲಿಗೆ ಹೋಲಿಕೆ ಮಾಡಿದರೆ 2.37 ಲಕ್ಷ ಲೀಟರ್‌ನಷ್ಟು ಹೆಚ್ಚುವರಿ ಹಾಲು ಉತ್ಪಾದನೆಯಾಗಿದೆ.

ಜಾನುವಾರುಗಳ ವಿವರ

ತಾಲೂಕು	ಜಾನುವಾರು
ಮೈಸೂರು	1,45,809
ನಂಜನಗೂಡು	1,67,465
ಕೆ.ಆರ್.ನಗರ	1,32,613
ಹುಣಸೂರು	1,16,616
ಪಿರಿಯಾಪಟ್ಟಣ	1,16,365
ತಿ.ನರಸೀಪುರ	1,18,199
ಎಚ್.ಡಿ.ಕೋಟೆ	91,032
ಸರಗೂರು	45,199

> ಜಾನುವಾರುಗಳನ್ನು ಪಶುವೈದ್ಯ ಆಸ್ಪತ್ರೆಗೆ ಕರೆ ತರುವುದು ಕಷ್ಟದ ಕೆಲಸ. ಹೀಗಾಗಿ ಜಾನುವಾರುಗಳು ಇರುವಲ್ಲಿಯೇ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿರುವ ಸಂಚಾರಿ ಪಶುಚಿಕಿತ್ಸಾ ಘಟಕಕ್ಕೆ ನಮ್ಮ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆಯುತ್ತಿದೆ. ಮುಂದಿನ ದಿನಗಳಲ್ಲಿ ಈ ಸೇವೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಾಗುವುದು.
> - ಡಾ.ನಾಗರಾಜ್, ಉಪ ನಿರ್ದೇಶಕ, ಪಶುಪಾಲನಾ ಸೇವಾ ಇಲಾಖೆ, ಮೈಸೂರು

26 ವರ್ಷದ ಯುವತಿ ಜತೆ ಪ್ರೀತಿಸಿದ 15ರ ಬಾಲಕ ಆತ್ಮಹತ್ಯೆ

ರಾಮನಗರ: 26 ವರ್ಷದ ಯುವತಿಯೊಂದಿಗಿನ ಪ್ರೀತಿಗೆ ಮನೆಯವರು ಅಡ್ಡಿಪಡಿಸಿದ ಹಿನ್ನೆಲೆ ವಿಷ ಸೇವಿಸಿ 15 ವರ್ಷದ ಬಾಲಕ ಆತ್ಮಹತ್ಯೆ ಮಾಡಿಕೊಂಡ ಘಟನೆ ಚನ್ನಪಟ್ಟಣ ನಗರದ ರಾಜಾಕೆಂಪೇಗೌಡ ಬಡಾವಣೆಯಲ್ಲಿ ನಡೆದಿದೆ.

ಬಿಡದಿ ಮೂಲದ ಬಾಲಕ ಮೃತ ದುರ್ದೈವಿ. ಮೇ.4ರಂದು ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಬಿಡದಿ ಮೂಲದ ಶೋಭಾ ಎಂಬ ಯುವತಿ ಜತೆ ಬಾಲಕ ಪ್ರೀತಿಯಲ್ಲಿ ಬಿದ್ದಿದ್ದ. ಈ ಬಗ್ಗೆ ಪೋಷಕರಿಗೆ ವಿಚಾರ ಗೊತ್ತಾಗಿದ್ದು, ಬಾಲಕನಿಗೆ ಬೈದು ಬುದ್ಧಿ ಹೇಳಿದ್ದರು. ನಿಮ್ಮಿಬ್ಬರಿಗೂ ವಯಸ್ಸಿನ ಅಂತರ ಇದೆ. ಇದನ್ನು ಇಲ್ಲಿಗೆ ನಿಲ್ಲಿಸುವಂತೆ ತಾಕೀತು ಮಾಡಿದ್ದರು. ಆದರೂ ಬಾಲಕ ಹಾಗೂ ಯುವತಿ ವಾಟ್ಸಾಪ್, ಇನ್‌ಸ್ಟಾಗ್ರಾಂ ಮೂಲಕ ಸಂಪರ್ಕದಲ್ಲಿದ್ದರು ಎನ್ನಲಾಗಿದೆ. ಇದಾದ ಬಳಿಕ ಮನೆ ಬಿಟ್ಟು ಬಂದಿದ್ದ ಬಾಲಕ ಚನ್ನಪಟ್ಟಣದ ತನ್ನ ಸ್ನೇಹಿತನ ಮನೆಯಲ್ಲಿದ್ದ. ಯುವತಿ ಜತೆ ಇದೇ ವಿಚಾರಕ್ಕೆ ಗಲಾಟೆ ಮಾಡಿಕೊಂಡು ಏ.29ರಂದು ವಿಷ ಸೇವಿಸಿ ಬಾಲಕ ಆತ್ಮಹತ್ಯೆಗೆ ಯತ್ನಿಸಿದ್ದ. ಕೂಡಲೇ ಸ್ನೇಹಿತರು ಚನ್ನಪಟ್ಟಣ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೇ.4ರಂದು ಬಾಲಕ ಸಾವನ್ನಪ್ಪಿದ್ದಾನೆ. ಈ ಹಿನ್ನೆಲೆ ಮಗನ ಸಾವಿಗೆ ಯುವತಿಯೇ ಕಾರಣ ಎಂದು ಬಾಲಕನ ಪೋಷಕರು ದೂರು ನೀಡಿದ್ದು, ಈ ಸಂಬಂಧ ಶೋಭಾ ಎಂಬ ಯುವತಿ ವಿರುದ್ಧ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

- ಪ್ರೀತಿ ನಿಲ್ಲಿಸುವಂತೆ ಇಬ್ಬರಿಗೂ ಬುದ್ಧಿವಾದ ಹೇಳಿದ್ದ ಹಿರಿಯರು
- ಪ್ರೀತಿ ವಿಚಾರಕ್ಕೆ ಯುವತಿ ಜತೆ ಗಲಾಟೆ ಮಾಡಿಕೊಂಡು ವಿಷಸೇವನೆ
- ಚಿಕಿತ್ಸೆ ಫಲಿಸದೆ ಬಾಲಕ ಸಾವು, ಯುವತಿ ವಿರುದ್ಧ ಪ್ರಕರಣ ದಾಖಲು

SBI ಆವರಣ ಮತ್ತು ಸ್ವತ್ತು ವಿಭಾಗ, ಸ್ಥಳೀಯ ಪ್ರಧಾನ ಕಚೇರಿ, #65, ಸಂತ ಮಾರ್ಕರ ರಸ್ತೆ, ಬೆಂಗಳೂರು ☐ 560 001.
ದೂರವಾಣಿ ಸಂಖ್ಯೆ: 080 25943867

ಭಾರತೀಯ ಸ್ಟೇಟ್ ಬ್ಯಾಂಕ್ ದೈನಂದಿನ / ಮಾಸಿಕ ಆಧಾರದ ಮೇಲೆ ವಾಹನಗಳನ್ನು ಬಾಡಿಗೆಗೆ ಪಡೆಯಲು "ದರ ಗುತ್ತಿಗೆ ಟೆಂಡರ್" ಅನ್ನು ಆಹ್ವಾನಿಸಿದೆ. ಈ ಉದ್ದೇಶಕ್ಕಾಗಿ ವಿವರವಾದ ಟೆಂಡರ್ ದಾಖಲೆ, ಅರ್ಹತಾ ಮಾನದಂಡಗಳು ಇತ್ಯಾದಿಗಳನ್ನು ನಮ್ಮ ವೆಬ್ ಸೈಟ್ <bank.sbi> ನಲ್ಲಿರುವ 'SBI in the News' => 'Procurement News' https://bank.sbi/web/sbi-in-the-news/procurement-news or https://www.tenderwizard.com/SBIETENDER/ ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 21.05.2026

ಸ್ಥಳ: ಬೆಂಗಳೂರು
ದಿನಾಂಕ:08/05/2026 ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಸ್ವ)

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560009.
ಫೋನ್ : 080-22341230/35, ಇ-ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-04/09/2026-27/211 ದಿನಾಂಕ: 07.05.2026

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಸೈಯರ್ ನಾಜೀರ್ ಬಿನ್ ಲೇಟ್ ಸೈಯದ್ ಮೊಹಿಯುದ್ದೀನ್, ಶ್ರೀ ಮೊಹಮ್ಮದ್ ಕಲೀಮ್ ಉಲ್ಲಾ ಬಿನ್ ಲೇಟ್ ಮೊಹಮ್ಮದ್ ಶಫೀಉಲ್ಲಾ ಮತ್ತು ಶ್ರೀ ತದ್ರೇಜ್ ಆಲಿ ಬೇಗ್ ಬಿನ್ ಲೇಟ್ ನೂರುಲ್ಲಾ ಬೇಗ್ ಇವರುಗಳು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ಸಂಖ್ಯೆ:387/13ರ 0ಎ-13¾ ಮತ್ತು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ 239/1ರ 0ಎ-07ಗು, 239/2 ರ 0ಎ-16ಗು, 239/3 ರ 0ಎ-19ಗು ಮತ್ತು 239/4ರ 0ಎ-02ಗು, **ಒಟ್ಟು 01ಎ-17¾ ಗು,** ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ,

1) ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ-ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/560/ಶಿರಡಿ ಸಾಯಿ/2026-27

ಹಿರಿಯ ಪತ್ರಕರ್ತ ಪ್ರಹ್ಲಾದ್ ಕುಳಲಿ ನಿಧನ

ಬೆಂಗಳೂರು: ಹಿರಿಯ ಪತ್ರಕರ್ತರಾದ ಪ್ರಹ್ಲಾದ್ ಕುಳಲಿ (87) ಅವರು ಗುರುವಾರ ಬೆಳಗ್ಗೆ 8.45ಕ್ಕೆ ಕೆಂಗೇರಿಯ ಅವರ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

ಮೂಲತಃ ಬೆಳಗಾವಿ ಜಿಲ್ಲೆಯ ಹೊಸಕೋಟ ಗ್ರಾಮದವರಾದ ಪ್ರಹ್ಲಾದ್ ಅವರು, ಮುಧೋಳದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಲೇಖನಗಳನ್ನು ಬರೆಯಲು ಆರಂಭಿಸಿದ್ದರು. ಆಗಲೇ ಹುಬ್ಬಳ್ಳಿ, ಬೆಂಗಳೂರಿನ ವಾರ ಪತ್ರಿಕೆಗಳಲ್ಲಿ ಅವರ ಬರಹಗಳು ಪ್ರಕಟವಾಗುತ್ತಿದ್ದವು. ನಂತರ ಪತ್ರಿಕೋದ್ಯಮವನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕದಲ್ಲಿ 1956 ರಿಂದ 57 ರವರೆಗೆ, ಬೆಂಗಳೂರಿಗೆ ವರ್ಗಾವಣೆಯಾದ ಬಳಿಕ 1997 ರವರೆಗೆ ಸುಮಾರ 40 ವರ್ಷಗಳ ಸತತ ಸೇವೆ ಸಲ್ಲಿಸಿದ ನಂತರ ಸೇವಾ ನಿವೃತ್ತಿ ಹೊಂದಿದರು.

ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿದ್ದ ಹಾಗೂ ದಿ.ಮಾಜಿ ಮುಖ್ಯಮಂತ್ರಿ ಆರ್.ಗುಂಡೂರಾವ್ ಅವರ ಮಾಧ್ಯಮ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಅಪಾರ ಅನುಭವ ಹೊಂದಿದ್ದರು. ಪ್ರಹ್ಲಾದ್ ಕುಳಲಿ ಅವರಿಗೆ ಅಪಾರ ಪ್ರಶಸ್ತಿಗಳು ಅರಸಿಕೊಂಡು ಬಂದಿವೆ. 2 ಬಾರಿ ಕರ್ನಾಟಕ ಮಾಧ್ಯಮ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಬೆಂಗಳೂರು ವರದಿಗಾರರ ಕೂಟದ ವಾರ್ಷಿಕ ಪ್ರಶಸ್ತಿಯೂ ಎರಡು ಬಾರಿ ಲಭಿಸಿದೆ. ಇಷ್ಟೇ ಅಲ್ಲದೆ ಸನ್ಮಾನಗಳು ಅವರಿಗೆ ಸಂದಿವೆ.

ಗಾಂಧೀಜಿ ವಿಚಾರಧಾರೆಗಳ ಪ್ರತಿಪಾದಕರಾಗಿ ಮಾಧ್ಯಮ ಲೋಕದಲ್ಲಿಯೂ ಇದೇ ರೀತಿ ಕೆಲಸ ಮಾಡುತ್ತಿದ್ದರು. ಮಾಜಿ ಮುಖ್ಯಮಂತ್ರಿ ಆರ್ ಗುಂಡೂರಾವ್ ಅವರ ಮಾಧ್ಯಮ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು. ಇವರ ವಿಶೇಷ ವರದಿಗಳು ಭಾರೀ ಜನಮನ್ನಣೆ ಗಳಿಸಿದ್ದವು. ವರದಿಗಾರರ ಕೂಟದ ಪ್ರಪ್ರಥಮ ಪ್ರಧಾನ ಕಾರ್ಯದರ್ಶಿ ಪತ್ರಕರ್ತರ ಸಂಘಟನೆಯ ಕೆಲಸದಲ್ಲೂ ತೊಡಗಿಸಿಕೊಂಡಿದ್ದರು. 4 ದಶಕಗಳ ಕಾಲ ಒಂದೇ ಪತ್ರಿಕೆಯಲ್ಲಿ ಕೆಲಸ ಮಾಡಿದ ಹೆಗ್ಗಳಿಕೆಗೆ ಇವರದ್ದು. ಅಗಲಿದ ಪ್ರಹ್ಲಾದ್ ಕುಳಲಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ತ.ನಾ ರಾಜ್ಯಪಾಲ V/S ಟಿವಿಕೆ

← ಮೊದಲಪುಟದಿಂದ

ರಾಜ್ಯಪಾಲ ಹೇಳಿದ್ದೇನು?: ಈಗಲೂ ನಿಮಗೆ ಅಗತ್ಯ ಶಾಸಕರ ಕೊರತೆಯಿದೆ. ನಿಮಗೆ ಬಹುಮತ ಇದೆ ಎಂದು ಸಾಬೀತುಪಡಿಸಲು 118 ಶಾಸಕರ ಸಹಿಯೊಂದಿಗೆ ಮರಳಿ ಬನ್ನಿ. ಆಗ ಯಾವುದೇ ಸಂದರ್ಭದಲ್ಲೂ ಪ್ರಮಾಣವಚನ ಸಮಾರಂಭ ನಡೆದೇ ನಡೆಯುತ್ತದೆ, ನಿಮ್ಮನ್ನು ಹೊರತು ಬೇರೆ ಯಾರನ್ನೂ ಆಹ್ವಾನಿಸುವುದಿಲ್ಲ ಎಂದು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಹೇಳಿದ್ದಾರೆ ಎಂದು ಮೂಲಗಳು ವರದಿ ಮಾಡಿವೆ. ಆದರೆ ರಾಜ್ಯಪಾಲರಿಗೆ ಹೀಗೆ ಹೇಳುವ ಅಧಿಕಾರವೇ ಇಲ್ಲ ಎಂಬ ವಾದಗಳಿವೆ. ಬಹುಮತ ಸಾಬೀತಾಗಬೇಕಿರುವುದು ವಿಧಾನಸೌಧದಲ್ಲೇ ಹೊರತು, ಲೋಕಭವನದ ಕಚೇರಿಯಲ್ಲಿ ಅಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹಿಂದೆಯೇ ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ವಿಜಯ್‌ರನ್ನು ಬಹುಮತ ಸಾಬೀತುಪಡಿಸಲು ಆಹ್ವಾನಿಸಬೇಕು ಎಂಬ ಬಲವಾದ ಒತ್ತಡ ಶುರುವಾಗಿದೆ.

ರಾಜ್ಯಪಾಲರ ವಿರುದ್ಧ ಮಿತ್ರಪಕ್ಷಗಳ ಕಿಡಿ: ವಿಸಿಕೆ ಮುಖ್ಯಸ್ಥ ತೋಳ್ ತಿರುಮಾವಳವನ್ ಅವರು ವಿಜಯ್ ಪರವಾಗಿ ಬ್ಯಾಟ್ ಬೀಸಿದ್ದಾರೆ. ವಿಜಯ್ ಅವರನ್ನು ಅತ್ಯಂತ ದೊಡ್ಡ ಪಕ್ಷದ ನಾಯಕ ಎಂದು ಪರಿಗಣಿಸಿ ಮೊದಲು ಪ್ರಮಾಣವಚನಕ್ಕೆ ಆಹ್ವಾನಿಸಬೇಕು. ಸದನದಲ್ಲಿ ಬಹುಮತ ಸಾಬೀತುಪಡಿಸಲು ಅವರಿಗೆ ಅವಕಾಶ ನೀಡಬೇಕು. ಬಿಜೆಪಿ, ಅಮಿತ್ ಶಾ ಮತ್ತು ಮೋದಿ ಅವರು ತಮಿಳುನಾಡು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ. ಸಿಪಿಐ ಪಕ್ಷ ಕೂಡ ರಾಜ್ಯಪಾಲರ ನಡೆಯನ್ನು ಖಂಡಿಸಿದ್ದು, ಪ್ರಮಾಣವಚನಕ್ಕೂ ಮುನ್ನವೇ ಬಹುಮತ ಸಾಬೀತುಪಡಿಸಲು ಕೇಳುವುದು ಸಂವಿಧಾನ ಬಾಹಿರ ಮತ್ತು ಅನುಚಿತ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ಬಂಗಾಳ ಬಿಜೆಪಿ ಶಾಸಕಿ ನಿವಾಸದ ಸನಿಹ ಬಾಂಬ್

← ಮೊದಲಪುಟದಿಂದ

ರತ್ನಾ 2024ರಲ್ಲಿ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ಅತ್ಯಾಚಾರದಿಂದ ಮೃತಪಟ್ಟ ವೈದ್ಯೆಯ ತಾಯಿ. ಅಪರಿಚಿತ ದುಷ್ಕರ್ಮಿಗಳು ಬಿಜೆಪಿ ಕಾರ್ಯಕರ್ತರ ಗುಂಪಿನ ಮೇಲೆ ಕಚ್ಚಾ ಬಾಂಬ್‌ಗಳನ್ನು ಎಸೆದಿದ್ದಾರೆ. ಗಾಯಾಳುಗಳನ್ನು ಕೋಲ್ಕತಾದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂಲಗಳ ಪ್ರಕಾರ, ಪಾಣಿಹಾಟಿಯ ವಾರ್ಡ್ ಸಂಖ್ಯೆ 2ರ ದತ್ತ ರಸ್ತೆಯಲ್ಲಿ ಬಿಜೆಪಿ ಕಾರ್ಯಕರ್ತರು ನಿವಾಸಿಗಳೊಂದಿಗೆ ಸಂವಹನ ನಡೆಸುತ್ತಿದ್ದಾಗ, ಮೋಟಾರ್ ಸೈಕಲ್‌ನಲ್ಲಿ ಬಂದ ವ್ಯಕ್ತಿಗಳ ಗುಂಪೊಂದು ಅವರನ್ನು ಗುರಿಯಾಗಿಸಿಕೊಂಡು ಬಾಂಬ್‌ಗಳಿಂದ ದಾಳಿ ನಡೆಸಿ ಪರಾರಿಯಾಗಿದೆ ಎಂದು ಆರೋಪಿಸಲಾಗಿದೆ. ದಾಳಿಕೋರರಿಗೆ ಟಿಎಂಸಿ ಬೆಂಬಲ ನೀಡಿದೆ ಎಂದು ಬಿಜೆಪಿ ಆರೋಪಿಸಿದೆ, ಆದರೆ ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷ ಈ ಆರೋಪವನ್ನು ನಿರಾಕರಿಸಿದೆ.

ಬುಧವಾರ ರಾತ್ರಿ ನಡೆದ ಇನ್ನೊಂದು ಬಾಂಬ್ ದಾಳಿಯಲ್ಲಿ ಕಾಂತಿ ಬ್ಲಾಕ್ ಯುವ ಟಿಎಂಸಿ ಅಧ್ಯಕ್ಷ ಉಸ್ಮಾನ್ ಘನಿ ಅವರ ಮನೆಯನ್ನು ಗುರಿಯಾಗಿಸಿಕೊಳ್ಳಲಾಗಿದೆ. ಪುರಂದಪುರ ಹಟ್ಟಾಲ ಪ್ರದೇಶದಲ್ಲಿರುವ ಮನೆಯಲ್ಲಿದ್ದಾಗ ಬಾಂಬ್ ಸ್ಫೋಟಗೊಂಡಿದೆ. ಈ ಘಟನೆಯು ವ್ಯಾಪಕ ಗಲಭೆಗೆ ಕಾರಣವಾಗಿದೆ. ಈ ಘಟನೆಗೆ ಯಾವುದೇ ರಾಜಕೀಯ ಸಂಬಂಧವಿದೆಯೇ ಎಂದು ನಿರ್ಧರಿಸಲು ತನಿಖೆ ನಡೆಯುತ್ತಿದೆ. ರಾಜ್ಯದಲ್ಲಿ ಚುನಾವಣೆಯ ನಂತರದ ರಾಜಕೀಯ ಹಿಂಸಾಚಾರದಲ್ಲಿ 5 ಜನರು ಸಾವನ್ನಪ್ಪಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-271/25-26/494/2026-27 ದಿನಾಂಕ: 06.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಪಿ.ಸಿ. ಮುನಿಸ್ವಾಮಿರೆಡ್ಡಿ	ಆನೇಕಲ್	ಸರ್ಜಾಪುರ	ಹೆಗ್ಗೊಂಡಹಳ್ಳಿ	27/1	0-07.75	ವ್ಯವಸಾಯ	ವಸತಿ
2					27/3	0-02.25		
3					27/4	0-02.00		
4					27/5	1-30.25		
5					27/6	0-18.75		
6					29/3	0-19.00		

ಷರಾ: ಪ್ರಶ್ನಿತ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ಈ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). X @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕೇಂದ್ರದ ರಾಮ್‌ಜಿ ವಿರೋಧಿಸಿ ಸುಪ್ರೀಂಗೆ

← ಮೊದಲಪುಟದಿಂದ

ನರೇಗಾ ಕೆಲಸ ಮುಂದುವರಿಸಬಹುದು ಎಂಬ ನೋಟಿಫಿಕೇಷನ್ ಮಾಡಿದ್ದಾರೆ ಎನ್ನುವುದನ್ನು ಬಿಟ್ಟರೆ ಹಣಕಾಸು ಹಾಗೂ ಇನ್ನಿತರ ವಿಚಾರ ಹೇಳಿಲ್ಲ ಎಂದು ಸಭೆಯಲ್ಲಿ ಆರೋಪಿಸಲಾಗಿದೆ.

ಕೇಂದ್ರದ ನಡೆಯಿಂದಾಗಿ ಬಡವರು ಹಾಗೂ ಕೃಷಿ ಕಾರ್ಮಿಕರಿಗೆ ಸಂಕಷ್ಟ ಎದುರಾಗಿದೆ. ಕುಡಿಯುವ ನೀರು ಹಾಗೂ ಇನ್ನಿತರ ಮೂಲ ಸೌಲಭ್ಯಗಳ ಬಗ್ಗೆ ಹೇಳಿದ್ದರೂ ಬಡವರ ಕೆಲಸದ ಬಗ್ಗೆ, ಕೂಲಿ ಕೆಲಸದ ಬಗ್ಗೆ ಕೇಂದ್ರ ಚಿಂತನೆ ಹಾಗೂ ಚರ್ಚೆ ಮಾಡುತ್ತಿಲ್ಲ. ರಾಜ್ಯ ಸರಕಾರ ನಿರ್ಣಯ ಕೈಗೊಳ್ಳುವ ಮೂಲಕ ಒತ್ತಡ ಹೇರಿದ್ದರೂ, ಮುಖ್ಯಮಂತ್ರಿ ಅವರು ಪ್ರಧಾನಮಂತ್ರಿಗೆ ಪತ್ರ ಬರೆದಿದ್ದರೂ, ಗ್ರಾಮೀಣಾಭಿವೃದ್ಧಿ ಸಚಿವರು ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ಮೊರೆಹೋಗಲು ನಿರ್ಧರಿಸಲಾಗಿದೆ ಎಂದರು.

ರಾಜ್ಯ ಶಿಕ್ಷಣ ನೀತಿಗೆ ಉಪಸಮಿತಿ: ರಾಜ್ಯ ಶಿಕ್ಷಣ ನೀತಿ ಸಂಬಂಧ ಶಿಕ್ಷಣ ತಜ್ಞ ಸುಖದೇವ್ ಥೋರಟ್ ಅವರು ಆಯೋಗ ಸಲ್ಲಿಸಿರುವ ಶಿಫಾರಸು ವಿಚಾರವನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಆಯೋಗ ಕೊಟ್ಟಂತಹ ವಿಚಾರವನ್ನು ವಿವರವಾಗಿ ಚರ್ಚಿಸಿ ಇದರ ಅನುಷ್ಠಾನ ಹಾಗೂ ಇತರೆ ವಿಚಾರಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ಉಪಸಮಿತಿಯನ್ನು ಮಾಡಲು ಒಪ್ಪಿಗೆ ನೀಡಲಾಗಿದೆ. ಸಮಿತಿ ರಚಿಸಲು ಸಿಎಂ ಅವರಿಗೆ ಅಧಿಕಾರ ನೀಡಲಾಗಿದೆ ಎಂದರು



ಕೇಂದ್ರದ ನೀತಿಗೆ ವಿರುದ್ದವಾಗಿ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಲು ಸಮಿತಿ ರಚಿಸಲಾಗಿತ್ತು. ಸಮಿತಿ 279 ತಜ್ಞರನ್ನು ಒಳಗೊಂಡ 35 ಉಪಸಮಿತಿಗಳನ್ನು ರಚಿಸಿ 132 ಸಭೆಗಳನ್ನು ನಡೆಸಿ, 2197 ಪುಟಗಳ 3 ಸಂಪುಟಗಳನ್ನು ಹೊಂದಿರುವ ಮಾದರಿಯನ್ನು 2025ರ ಆ.9ರಂದು ರಾಜ್ಯ ಸರಕಾರಕ್ಕೆ ಸಮಿತಿ ಸಲ್ಲಿಸಿದೆ. ರಾಜ್ಯ ಸರಕಾರ ಜಾರಿಗೊಳಿಸಲು ಉದ್ದೇಶಿಸಿರುವ ಈ ನೀತಿಯಲ್ಲಿ 2ನೇ ತರಗತಿ ವರೆಗೂ ಪ್ರಾಥಮಿಕ ಪೂರ್ವ, 10ನೇ ತರಗತಿವರೆಗೆ ಮಾಧ್ಯಮಿಕ ಹಾಗೂ ಉಳಿದ 4 ವರ್ಷ ಪ್ರೌಢಶಿಕ್ಷಣ ವ್ಯವಸ್ಥೆ ರೂಪಿಸಲುವ ಚರ್ಚೆಗಳಾಗಿದೆ. ಅಲ್ಲದೆ 5 ನೇ ತರಗತಿವರೆಗೂ ಮಾತೃಭಾಷೆ ಬೋಧಿಸುವುದು, ಎನ್‌ಸಿಇಆರ್‌ಟಿ ಪಠ್ಯದ ಬದಲಾಗಿ ರಾಜ್ಯದ ಅಭಿವೃದ್ಧಿಗೆ ಪೂರಕವಾದ ಸಮಗ್ರ ಪಠ್ಯಕ್ರಮ (ಸಿಸಿಎಸ್‌ಇ) ಅನುಷ್ಠಾನಗೊಳಿಸುವನ್ನು ಶಿಫಾರಸು ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ನಾಯಕತ್ವ ಗೊಂದಲ ಶೀಘ್ರ ಬಗೆಹರಿಸಲಿ

ಮೈಸೂರು: ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯ ಬಗ್ಗೆ ಇರುವ ಗೊಂದಲವನ್ನು ಹೈಕಮಾಂಡ್ ಬೇಗ ಬಗೆಹರಿಸಿದರೆ ಸರಕಾರ ಹಾಗೂ ಪಕ್ಷಕ್ಕೂ ಒಳ್ಳೆಯದು ಎಂದು ಕಾಂಗ್ರೆಸ್ ಶಾಸಕ ಹಾಗೂ ಮಾಜಿ ಸಚಿವ ರಾಜಣ್ಣ ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೈಸೂರಿನ ಮನೆಯ ಮುಂದೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರು ಹೈಕಮಾಂಡ್ ಏನು ಹೇಳುತ್ತದೋ ಅದೇ ರೀತಿ ನಡೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಹಾಗಾಗಿ, ಹೈಕಮಾಂಡ್ ರಾಜ್ಯದಲ್ಲಿರುವ ಗೊಂದಲವನ್ನು ಬೇಗ ಬಗೆಹರಿಸಬೇಕು. ಇಲ್ಲದಿದ್ದರೆ ಸರಕಾರ ಮತ್ತು ಪಕ್ಷದ ಮೇಲೆ ಪರಿಣಾಮ ಬೀರುತ್ತದೆ. ಈ ಕುರಿತಾಗಿ ನಾನು ಹೈಕಮಾಂಡ್? ಭೇಟಿ ಮಾಡಿದಾಗ ಖುದ್ದಾಗಿಯೂ ಹೇಳಿದ್ದೇನೆ, ಪತ್ರವನ್ನೂ ಬರೆದಿದ್ದೇನೆ ಎಂದರು. ಸಚಿವ ಸಂಪುಟ ವಿಸ್ತರಣೆಗೆ ಮುಕ್ತ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾಯಕತ್ವ ಬದಲಾವಣೆ ಬಗ್ಗೆ ತೀರ್ಮಾನ ಮಾಡಬೇಕು. ಏನೇ ಆದರೂ ಬೇಗ ಮಾಡಲಿ. ಸಿದ್ದರಾಮಯ್ಯ ಬದಲಾದರೆ ಕಾಂಗ್ರೆಸ್? ಪಕ್ಷಕ್ಕೆ ಕಷ್ಟ ಆಗಲಿದೆಯೇ ಎಂಬ ಪ್ರಶ್ನೆಗೆ, ನಮ್ಮದು ರಾಷ್ಟ್ರೀಯ ಪಕ್ಷ. ಈ ವಿಚಾರವನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ತಿಮರೋಡಿ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ಮಂಗಳೂರು: ಯಕ್ಷಗಾನ ಕಲಾವಿದರ ವಿರುದ್ಧ ಅವಹೇಳನಕಾರಿ ಮಾತು ಹಾಗೂ ಬೆದರಿಕೆ ಹಾಕಿದ ಆರೋಪ ಎದುರಿಸುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಇಲ್ಲಿನ ಜಿಲ್ಲಾ ನ್ಯಾಯಾಲಯ ವಜಾಗೊಳಿಸಿದೆ. ನಗರದ ಆರನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಆದೇಶ ಹೊರಡಿಸಿದೆ. ಯಕ್ಷಗಾನ ರಂಗದ ಪ್ರಮುಖ ಕಲಾವಿದರ ಕುರಿತು ಅವಹೇಳನಕಾರಿಯಾಗಿ ಮಾತನಾಡಿ ಬೆದರಿಕೆ ಒಡ್ಡಿದ್ದಾರೆ ಎಂಬ ಆರೋಪದ ಮೇಲೆ ತಿಮರೋಡಿ ವಿರುದ್ಧ ಪ್ರಕರಣ ದಾಖಲಾಗಿತ್ತು.

ವಿಶ್ವವಾಣಿ ಕ್ಲಬ್ ಹೌಸ್
04.05.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ. ನಂದೀಶ್ ಪಿ.ಕೆ
ವಿಷಯ
ಅರವಿಂದರ ಸಾವಿತ್ರಿ 23
vishwavani.news

ದಿನ ವಿಶೇಷ

08 ಮೇ 2026 ಶುಕ್ರವಾರ

» ಸೂರ್ಯೋದಯ	05-51
» ಸೂರ್ಯಾಸ್ತ	06-55
» ತಿಥಿ	ಷಷ್ಠಿ
» ನಕ್ಷತ್ರ	ಉತ್ತರಾಷಾಢ
» ಸಂವತ್ಸರ	ಪರಾಭವ
» ಅಯನ	ಉತ್ತರಾಯನ
» ಋತು	ಗ್ರೀಷ್ಮ
» ಮಾಸ	ವೈಶಾಖ
» ಪಕ್ಷ	ಕೃಷ್ಣಪಕ್ಷ

ಅಭಿಮಾನೋತ್ಸವ ಕಾರ್ಯಕ್ರಮ: ಇಂದು ಯಡಿಯೂರಪ್ಪ ಅವರ ಪುರ ಪ್ರವೇಶ

1,000 ಮಹಿಳೆಯರಿಂದ ಪೂರ್ಣಕುಂಭ ಸ್ವಾಗತ, ಜನಪದ ಕಲಾತಂಡಗಳು ಭಾಗಿ

ಬಿಎಸ್‌ವೈ ಭವ್ಯ ಸ್ವಾಗತಕ್ಕೆ ಸಕಲ ಸಿದ್ಧತೆ

ಚಿತ್ರದುರ್ಗ: ಮೇ 8ರಂದು ಬಿ.ಎಸ್. ಯಡಿಯೂರಪ್ಪ ಅವರ ಪುರ ಪ್ರವೇಶ ಆಗಲಿದ್ದು, ಅದ್ದೂರಿಯಾಗಿ ಸ್ವಾಗತಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮೆರವಣಿಗೆ ಸಮಿತಿ ಉಸ್ತುವಾರಿ ರಾಜ್ಯ ಬಿಜೆಪಿ ಓಬಿಸಿ ಮೋರ್ಚಾದ ಅಧ್ಯಕ್ಷ ರಘು ಕೌಟಿಲ್ಯ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 50 ವರ್ಷ ರಾಜಕೀಯ ಜೀವನ ಪೂರೈಸಿದ ಹಿನ್ನೆಲೆ ಮೇ 9 ರಂದು ಚಿತ್ರದುರ್ಗದಲ್ಲಿ ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆ ಕುರಿತು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಜನ ಸೇವೆಗಾಗಿ ತಮ್ಮ ಜೀವನವನ್ನೇ ಬಿಎಸ್‌ವೈ ಮುಡುಪಾಗಿ ಇಟ್ಟಿದ್ದಾರೆ. ದಲಿತರು, ಪರಿಶಿಷ್ಟ ಜಾತಿ ಮತ್ತು ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸ ಮಾಡಿದ್ದಾರೆ. ಅಧಿಕಾರಕ್ಕಾಗಿ ಎಂದು ಸಹ ಹೋರಾಟವನ್ನು ಮಾಡಲಿಲ್ಲ. ಬಡವರ ಕಣ್ಣೀರನ್ನು ಒರೆಸುವ ಸಲುವಾಗಿ ಕೆಲಸವನ್ನು ಮಾಡಿದ್ದಾರೆ. 50 ವರ್ಷ ಬಡವರ ಪರವಾಗಿ ಕೆಲಸ ಮಾಡಿದ್ದಾರೆ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ, ಪಕ್ಷ ಕಟ್ಟಿ ಬೆಳೆಸಿದ ಅವರ ಹೋರಾಟ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದ್ದು, ಜನರ ಪ್ರೀತಿ ವಿಶ್ವಾಸದ ಮೂಲಕ ಅಧಿಕಾರ ಹಿಡಿದು ಆಡಳಿತ ಮಾಡಿದರು ಎಂದರು.

ರಾಜ್ಯದ ವಿವಿಧೆಡೆಗಳಿಂದ ಪೂಜಾ ಕುಣಿತ, ಪಟ ಕುಣಿತ, ಕೋಲಾಟ, ಗಾರುಡಿ ಗೊಂಬೆ, ಚಿಟ್ಟೆಮೇಳ, ಮಹಿಳಾ ವೀರಗಾಸೆ, ಮಹಿಳಾ ತಮಟೆ, ವೀರಗಾಸೆ, ಗೊರವರ ಕುಣಿತ, ಬೇಡರವೇಷ, ಹಗಲು ವೇಷ, ಡೊಳ್ಳು ಕುಣಿತ, ಕಂಸಾಳೆ, ಕೊಂಬು ಕಹಳೆ, ಲಂಬಾಣಿ ನೃತ್ಯ, ಕೀಲು ಕುದುರೆ, ರಾಜರಾಣಿ ಉಗ್ರನರಸಿಂಹ ಮಹಿಷಾಸುರ ಜೋಕರ್, ಆರೆವಾದ್ಯ, ನಂದಿ ಧ್ವಜ ವೀರಭದ್ರ ಕುಣಿತ, ನಗಾರಿ ಸೋಮನ ಕುಣಿತ ಚಂಡೆವಾದನ ರಂಗ ಕುಣಿತ ಗೋರುಕಾನ ನೃತ್ಯ ಸೇರಿದಂತೆ 25ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜನಪದ ಕಲಾ ತಂಡಗಳು ಭಾಗವಹಿಸಲಿವೆ.

ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಆಶ್ವಿನಿ, ಸಿದ್ದಾಪುರ ಸುರೇಶ್, ಬಸವರಾಜ್, ಸಂಪತ್ ಕುಮಾರ್, ದಗ್ಗೆ ಶಿವಪ್ರಕಾಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಸುದ್ದಿಗೋಷ್ಠಿಯಲ್ಲಿ ಬಿಎಸ್‌ವೈ ಮೆರವಣಿಗೆ ಸಮಿತಿ ಉಸ್ತುವಾರಿ ರಾಜ್ಯ ಬಿಜೆಪಿ ಓಬಿಸಿ ಮೋರ್ಚಾದ ಅಧ್ಯಕ್ಷ ರಘು ಕೌಟಿಲ್ಯ ಮಾತನಾಡಿದರು.

200 ಮಹಿಳೆಯರು ಒನಕೆ ಓಬವ್ವ ಛದ್ಮವೇಷ

1000ಕ್ಕೂ ಹೆಚ್ಚು ಮಹಿಳೆಯರು ಪೂರ್ಣ ಕುಂಭದೊಂದಿಗೆ ಬಿಎಸ್‌ವೈ ಅವರನ್ನು ಸ್ವಾಗತ ಮಾಡಿಕೊಳ್ಳಲಾಗುವುದು. ರೈತರು ಸಂಪ್ರದಾಯಿಕ ಶೈಲಿಯಲ್ಲಿ ರಾಶಿ ಪೂಜೆಯೊಂದಿಗೆ ಗೌರವವನ್ನು ಸಲ್ಲಿಸಲಿದ್ದಾರೆ. ಯಡಿಯೂರಪ್ಪರವರನ್ನು ಅಲಂಕೃತವಾದ ವಾಹನದ ಮೆರವಣಿಗೆಯಲ್ಲಿ ಕರೆತರಲಾಗುವುದು. 2000ಕ್ಕೂ ಹೆಚ್ಚಿನ ರೈತರು ನೇಗಿಲನ್ನು ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ. ಇದ್ದಲ್ಲದೆ ಚಿತ್ರದುರ್ಗದ ನೆಚ್ಚಿನ ನಾಯಕಿ ಒನಕೆ ಓಬವ್ವನ ನೆಲದಲ್ಲಿ ನಾರಿ ಶಕ್ತಿ ವಂದನ್ ಕಾಯ್ದೆಗೆ ಗೌರವ ಸಲ್ಲಿಸುಲು 200 ಮಹಿಳೆಯರು ಒನಕೆ ಓಬವ್ವ ಪಾತ್ರಧಾರಿಗಳು ಭಾಗವಹಿಸಲಿದ್ದಾರೆ ಎಂದು ರಾಜ್ಯ ಬಿಜೆಪಿ ಓಬಿಸಿ ಮೋರ್ಚಾದ ಅಧ್ಯಕ್ಷ ರಘು ಕೌಟಿಲ್ಯ ಮಾಹಿತಿ ನೀಡಿದರು.

ಬಿಎಸ್‌ವೈ ಅಂಬಾಸಿಡರ್ ಕಾರು ಆಕರ್ಷಣೆ

ಬಿಎಸ್‌ವೈ ಅವರು ತಮ್ಮ ರಾಜಕೀಯ ಜೀವನದ ಆರಂಭದ ದಿನಗಳಲ್ಲಿ ಬಳಕೆ ಮಾಡುತ್ತಿದ್ದ ಸಿಕೆಆರ್ 45 ನೋಂದಣಿಯ ಅಂಬಾಸಿಡರ್ ಕಾರನ್ನು ಕಾರ್ಯಕ್ರಮದಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. ಕಾರ್ಯಕ್ರಮದ ಮುಖ್ಯ ಆಕರ್ಷಣೆ ಹಾಗೂ ಯಡಿಯೂರಪ್ಪ ಅವರ ಆರಂಭಿಕ ದಿನಗಳ ನೆನಪಿಗಾಗಿ ಅಂಬಾಸಿಡರ್ ಕಾರು ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಮಾಜಿ ಸಿಎಂ ಯಡಿಯೂರಪ್ಪ ಅವರ ಜೀವನ ಚರಿತ್ರೆಯ ಡಾಕ್ಯುಮೆಂಟರಿ ಪ್ರದರ್ಶನಕ್ಕೆ ಆರು ಎಲ್‌ಇಡಿ ಪರದೆಗಳ ವ್ಯವಸ್ಥೆ ಮಾಡಲಾಗಿದೆ. ಬಾಲ್ಯದಿಂದ ವಿಧಾನಸೌಧವರೆಗೆ ಯಡಿಯೂರಪ್ಪ ಅವರ ಜೀವನ ಚರಿತ್ರೆಯನ್ನು ಪ್ರದರ್ಶಿಸಲಾಗುವುದು. ಸಿಎಂ ಆಗಿದ್ದಾಗ ಮಾಡಿದ ಜನಪ್ರಿಯ ಯೋಜನೆಗಳು ಭಾಗ್ಯಲಕ್ಷ್ಮೀ, ಹೆಣ್ಣು ಮಕ್ಕಳಿಗೆ ಸೈಕಲ್ ವಿತರಣೆ, ಕೃಷಿ ಬಜೆಟ್, ಮೊದಲಾವುಗಳ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

-ರಘು ಕೌಟಿಲ್ಯ ರಾಜ್ಯ ಬಿಜೆಪಿ ಓಬಿಸಿ ಮೋರ್ಚಾದ ಅಧ್ಯಕ್ಷ

ಬಿಎಸ್‌ವೈ ಸೇವೆ ಸ್ಮರಿಸುವ ಅದ್ಭುತ ಕ್ಷಣ

ದಾವಣಗೆರೆ: ಅಭಿವೃದ್ಧಿಯ ಹರಿಕಾರ, ನಾಡುಕಂಡ ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಾರ್ವಜನಿಕ ಜೀವನದಲ್ಲಿ ಐದು ದಶಕಗಳ ಸುದೀರ್ಘ ಸೇವೆ ಪೂರೈಸಿದ್ದು, ಈ ಐತಿಹಾಸಿಕ ಸಾಧನೆಯ ಸವಿನೆನಪಿಗಾಗಿ ಚಿತ್ರದುರ್ಗದಲ್ಲಿ ಮೇ 9ರಂದು ಬೃಹತ್ ಅಭಿಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಭಿಮಾನೋತ್ಸವ ಒಂದು ಪಕ್ಷದ ಕಾರ್ಯಕ್ರಮವಾಗದೆ, ರಾಜ್ಯಾದ್ಯಂತ ಇರುವ ಅವರ ಕೋಟ್ಯಂತರ ಅಭಿಮಾನಿಗಳ ಸಂಭ್ರಮ ಕ್ಷಣ. ಬಿಎಸ್‌ವೈ ಅವರು ಅಧಿಕಾರದಲ್ಲಿದ್ದಾಗ ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿ, ಭಾಗ್ಯಲಕ್ಷ್ಮಿ ಅಂತಹ ಜನಪರ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಾಮಾನ್ಯರು ಸ್ಮರಿಸುವಂತಹ ಕೊಡುಗೆ ನೀಡಿದವರು ಎಂದರು.

ಇತ್ತೀಚೆಗೆ ನಡೆದ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಆಡಳಿತ ಯಂತ್ರದ ದುರುಪಯೋಗ ಮತ್ತು ಹಣದ ಪ್ರಭಾವದಿಂದ ಕಾಂಗ್ರೆಸ್ ಗೆದ್ದಿದೆ. ಕಾಂಗ್ರೆಸ್ ದುರಾಡಳಿತರಿಂದ ಜನರು ಬೇಸತ್ತಿದ್ದು ಮುಂಬರುವ 2028ರ ವೇಳೆಗೆ ದಾವಣಗೆರೆ ಜಿಲ್ಲೆಯು ಸಂಪೂರ್ಣವಾಗಿ ಕಾಂಗ್ರೆಸ್ ಮುಕ್ತವಾಗಲಿದೆ ಎಂದರು.

ಘೋಷಣೆ ಮಾಡಿದ ಕೇವಲ ಒಂದು ತಿಂಗಳ ಅವಧಿಯಲ್ಲೇ ದಾವಣಗೆರೆ ವಿವಿ ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡಿದ ಶ್ರೇಯಸ್ಸು ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಜಿಲ್ಲೆಯ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೂ ಸಾಕಷ್ಟು ನೆರವು ನೀಡಿದ್ದಾರೆ. ಇಂತಹ ಜನನಾಯಕನಿಗೆ ಗೌರವ ಸಲ್ಲಿಸಲು ಪಕ್ಷಾತೀತವಾಗಿ ಜನರು ಚಿತ್ರದುರ್ಗದತ್ತ ಧಾವಿಸಬೇಕು.

-ಡಾ.ಎ.ಎಚ್.ಶಿವಯೋಗಿಸ್ವಾಮಿ ಮಾಜಿ ಸಚೇತಕ

ಮಂಡ್ಯ ಜಿಲ್ಲೆ ಋಣ ನಮ್ಮ ಮೇಲಿದೆ

ಪಾಂಡವಪುರದಲ್ಲಿ ನಡೆದ ಜೆಡಿಎಸ್ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ನಿಖಿಲ್‌ಕುಮಾರಸ್ವಾಮಿ ಪಾಲ್ಗೊಂಡರು.

ಮಂಡ್ಯ: ನನ್ನ ರಾಜಕೀಯ ಪ್ರವೇಶ ಮಂಡ್ಯ ಜಿಲ್ಲೆಯಿಂದಲೇ ಆಗಿದೆ. ನಾವು ಮಂಡ್ಯದಲ್ಲಿ ಹುಟ್ಟದಿದ್ದರೂ ಈ ಜಿಲ್ಲೆಯ ಋಣ ನಮ್ಮ ಮೇಲಿದೆ. ಯಾವುದೇ ಊರಿಗೆ ಹೋದರೂ ಜನ ತೋರಿಸುವ ಪ್ರೀತಿ ಮರೆಯಲಾಗದು ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಮಂಡ್ಯದ ಪಾಂಡವಪುರದಲ್ಲಿ ನಡೆದ ಜನರೊಂದಿಗೆ ಜನತಾದಳ ಪಕ್ಷದ 25ನೇ ವರ್ಷದ ರಜತ ಮಹೋತ್ಸವದಲ್ಲಿ ಮಾತನಾಡಿದ ಅವರು, 2019ರ ಲೋಕಸಭಾ ಚುನಾವಣೆಯ ಸೋಲು ರಾಜಕೀಯ ಪಕ್ವತೆಗೆ ದಾರಿ ಮಾಡಿಕೊಟ್ಟಿದೆ. ಅವತ್ತಿನ ನಿಖಿಲ್‌ಗೂ ಇವತ್ತಿನ ನಿಖಿಲ್‌ಗೂ ಸಾಕಷ್ಟು ಬದಲಾವಣೆಯಾಗಿದೆ ಎಂದರು.

ದೇವೇಗೌಡರ ಹೋರಾಟದ ಫಲವೇ ಜನತಾದಳ ಪಕ್ಷ. 25 ವರ್ಷಗಳ ರಜತ ಮಹೋತ್ಸವ ಆಚರಿಸುತ್ತಿರುವ ನಮ್ಮ ಜೆಡಿಎಸ್ ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಾಗಿ ಹೋರಾಡಿದ ಪಕ್ಷ. ಎಷ್ಟೋ ಪ್ರಾದೇಶಿಕ ಪಕ್ಷಗಳು ಹುಟ್ಟಿ ಮುಳುಗಿದರೂ, ಗಟ್ಟಿಯಾಗಿ ಉಳಿದು ರಾಜ್ಯದಲ್ಲಿ ಸುಭದ್ರವಾಗಿರುವುದು ಜೆಡಿಎಸ್ ಮಾತ್ರ ಎಂದು ಪ್ರತಿಪಾದಿಸಿದರು.

93ನೇ ವಯಸ್ಸಿನಲ್ಲೂ ಮಾಜಿ ಪ್ರಧಾನಿ ಎಚ್‌ಚ್.ಡಿ. ದೇವೇಗೌಡರ ಹೋರಾಟದ ಕಿಚ್ಚು ಕಡಿಮೆಯಾಗಿಲ್ಲ. ರಾಜ್ಯಸಭೆಯಲ್ಲಿ ಕನ್ನಡ ನಾಡಿನ ರೈತರು, ನೀರಾವರಿ ಪರವಾಗಿ ಅವರು ಧ್ವನಿ ಎತ್ತುತ್ತಿದ್ದಾರೆ. ಅವರ ಹೋರಾಟದ ಮನೋಭಾವ ನಮಗೆಲ್ಲರಿಗೂ ಸ್ಫೂರ್ತಿ.

-ನಿಖಿಲ್ ಕುಮಾರಸ್ವಾಮಿ ಯುವ ಜೆಡಿಎಸ್ ರಾಜ್ಯಾಧ್ಯಕ್ಷ

ರೈತರ ಬದುಕು ಹಸನಾಗಿಸುತ್ತೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದ ಸರಕಾರದ ಆಡಳಿತದಲ್ಲಿ ಇಂದು ಅನ್ನದಾತನ ಬದುಕೇ ಹಾಳಾಗುತ್ತಿದೆ. ಸಾಲದ ಸುಳಿಗೆ ಸಿಲುಕಿ, ಬೆಂಬಲ ಬೆಲೆಯಿಲ್ಲದೆ, ನೆಮ್ಮದಿಯಿಂದ ಬದುಕಲೂ ಆಗದ ಸ್ಥಿತಿಗೆ ರೈತ ತಲುಪಿದ್ದಾನೆ. ಕಾಂಗ್ರೆಸ್ ಆಡಳಿತದಲ್ಲಿ ಕಳೆದ ಮೂರು ವರ್ಷಗಳಲ್ಲಿ 3 ಸಾವಿರ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮಂಡ್ಯ ಜಿಲ್ಲೆಯೊಂದರಲ್ಲೇ 97 ರೈತರು ಬಲಿಯಾಗಿದ್ದಾರೆ. ಇದು ಸರಕಾರದ ವೈಫಲ್ಯಕ್ಕೆ ಸಾಕ್ಷಿ ಎಂದು ಆರೋಪಿಸಿದರು.

500ಕ್ಕೂ ಹೆಚ್ಚು ಟ್ರ್ಯಾಕ್ಟರ್ ವ್ಯವಸ್ಥೆ: ಸಿದ್ದೇಶ್ವರ

ದಾವಣಗೆರೆ: ಚಿತ್ರದುರ್ಗದಲ್ಲಿ ಮೇ 9 ರಂದು ಹಮ್ಮಿಕೊಂಡಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ 9ರಿಂದ 10 ಲಕ್ಷ ಅಭಿಮಾನಿಗಳು ಭಾಗವಹಿಸಲಿದ್ದು, ಜಿಲ್ಲೆಯಿಂದ 25 ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ ಎಂದು ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ತೆರಳುವವರಿಗಾಗಿ 100 ಬಸ್‌ಗಳು ಹಾಗೂ 500ಕ್ಕೂ ಹೆಚ್ಚು ಕಾರು ಮತ್ತು ಟ್ರ್ಯಾಕ್ಟರ್‌ಗಳ ವ್ಯವಸ್ಥೆ ಮಾಡಲಾಗಿದೆ. ದಾವಣಗೆರೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ. ಪ್ರತಿ ಬಸ್‌ಗೂ ಉಸ್ತುವಾರಿಗಳನ್ನು ನೇಮಿಸಲಾಗಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನಿಗಾ ವಹಿಸಲಾಗಿದೆ ಎಂದು ಮಾಹಿತಿ ನೀಡಿದರು. ಮೇ9 ರಂದು ಮಧ್ಯಾಹ್ನ 3.30ಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಿತ್ರದುರ್ಗಕ್ಕೆ ಆಗಮಿಸಿ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ಈ ಅಭಿನಂದನಾ ಸಮಾರಂಭದಲ್ಲಿ ನಾಡಿನ ವಿವಿಧ ಮಠಗಳ ಮಠಾಧೀಶರು ಪಾಲ್ಗೊಂಡು ಆಶೀರ್ವಚನ ನೀಡಲಿದ್ದಾರೆ. ಈ ಸಮಾರಂಭ ಕೇವಲ ಒಂದು ಪಕ್ಷದ ಕಾರ್ಯಕ್ರಮವಲ್ಲ, ಬದಲಿಗೆ ಇದು ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬದ ಕಾರ್ಯಕ್ರಮದಂತೆ ಪಕ್ಷಾತೀತವಾಗಿ ನಡೆಯುತ್ತಿದೆ ಎಂದು ಹೇಳಿದರು.

ಚುನಾವಣಾ ರಾಜಕೀಯಕ್ಕೆ ವಿಶ್ವನಾಥ್ ವಿರಾಮ

ಮೈಸೂರು: ಮುಂದಿನ ಯಾವುದೇ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಘೋಷಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನಾನು ಹಲವು ಚುನಾವಣೆಗಳನ್ನು ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡುತ್ತಿದ್ದರು. ಆದರೆ ಈಗ ಚುನಾವಣೆಯಲ್ಲಿ ಸ್ಪರ್ಧಿಸಲು ಅಪಾರ ಹಣದ ಅವಶ್ಯಕತೆ ಇದೆ. ಸದ್ಯದ ಪರಿಸ್ಥಿತಿಯಲ್ಲಿ ವಿಧಾನಸಭೆ ಚುನಾವಣೆ ಎದುರಿಸಲು ಕನಿಷ್ಠ 50 ಕೋಟಿ ರು. ಬೇಕಾಗಿದೆ. ರಿಯಲ್ ಎಸ್ಟೇಟ್ ಉದ್ಯಮ ನಡೆಸುವವರು ತಮ್ಮ ನಿವೇಶನಗಳನ್ನು ಮಾರಾಟ ಮಾಡಿ ಚುನಾವಣೆ ಎದುರಿಸುತ್ತಾರೆ.

ಆದರೆ ನನಗೆ ಒಂದು ಮನೆ ಮತ್ತು ಒಂದು ನಿವೇಶನ ಮಾತ್ರ ಇದೆ. ಅಷ್ಟು ದೊಡ್ಡ ಮೊತ್ತ ಖರ್ಚು ಮಾಡುವ ಶಕ್ತಿ ನನ್ನಲ್ಲಿಲ್ಲ. ಅಲ್ಲದೇ ನನ್ನ ಮಕ್ಕಳು ಸಹ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅವರು ತಮ್ಮ ಶಕ್ತಿಯನುಸಾರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ನಾನು ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿರುತ್ತೇನೆ, ಆದರೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದರು.

ಕಿಕ್ ಬ್ಯಾಕ್ ಆರೋಪ

ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಅಮಾನತು ಆದೇಶವನ್ನು ರಾಜ್ಯ ಸರಕಾರ ಹಿಂಪಡೆದಿರುವ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಎಚ್.ವಿಶ್ವನಾಥ್, ಹಿರಿಯ ಅಧಿಕಾರಿ ರಾಮಚಂದ್ರರಾವ್ ಅವರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದ ಹಿನ್ನೆಲೆ ಸರಕಾರ ಅವರನ್ನು ಅಮಾನತು ಮಾಡಿತ್ತು. ಇದೀಗ ಏಕಾಏಕಿ ಅವರ ಮೇಲಿನ ಅಮಾನತು ಆದೇಶ ಹಿಂಪಡೆದು ಕರ್ತವ್ಯಕ್ಕೆ ಮರು ನಿಯೋಜಿಸಿರುವುದು ಸರಿಯಲ್ಲ. ಸರಕಾರದಲ್ಲಿ ನ್ಯಾಯಕ್ಕೆ ಬೆಲೆ ಇಲ್ಲದಂತಾಗಿದ್ದು, ಗೃಹ ಇಲಾಖೆಯನ್ನು ಪರಮೇಶ್ವರ್ ನಡೆಸುತ್ತಿದ್ದಾರೋ ಅಥವಾ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರಾ ನಡೆಸುತ್ತಿದ್ದಾರಾ? ಎಂಬ ಅನುಮಾನವಿದೆ. ರಾಮಚಂದ್ರರಾವ್ ಅವರ ಅಮಾನತು ಆದೇಶ ಹಿಂಪಡೆಯಲು ದೊಡ್ಡಮಟ್ಟದ ಕಿಕ್ ಬ್ಯಾಕ್ ಪಡೆದಿರಬಹುದು ಎಂದು ಎಂಎಲ್‌ಸಿ ಎಚ್. ವಿಶ್ವನಾಥ್ಆರೋಪಿಸಿದರು.

ದಣಿವರಿಯದ ರೈತ ನಾಯಕ ಬಿ.ಎಸ್.ಯಡಿಯೂರಪ್ಪ

50 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿರುವ ದಣಿವರಿಯದ ರೈತ ನಾಯಕ ಯಡಿಯೂ ರಪ್ಪನವರಿಗೆ ಅವರ ಲಕ್ಷಾಂತರ ಅಭಿಮಾನಿಗಳು ಅವರ ಈ ಐತಿಹಾಸಿಕ ಸಾಧನೆಯನ್ನು ಸಂಭ್ರಮೋತ್ಸವದ ರೂಪದಲ್ಲಿ ಆಚರಿಸಿ ಆ ಮೇರು ವ್ಯಕ್ತಿತ್ವದ ನಾಯಕನಿಗೆ ಸಲ್ಲಿಸುತ್ತಿರುವ ಹೃದಯಪೂರ್ವಕ ಗೌರವವಾಗಿದೆ. ಬಿಜೆಪಿಯನ್ನು ಏಕಾಂಗಿಯಾಗಿ ಆಲದ ಮರದಂತೆ ಬೆಳೆಸಿ ಮೂರು ಬಾರಿ ಅಧಿಕಾರಕ್ಕೆ ತಂದ ಕೀರ್ತಿ ಅವರದ್ದು.

1983ರಿಂದ ಇಲ್ಲಿಯವರೆಗೆ ಶಿಕಾರಿಪುರದ ಜನತೆಯು ಇವರನ್ನು ಮತ್ತು ಇವರ ಕುಟುಂಬದವರನ್ನು ಎಂದೂ ಕೈಬಿಡಲಿಲ್ಲ. ಅಣ್ಣ ಬಿ.ವೈ. ರಾಘವೇಂದ್ರ ಸಂಸದರಾದರೆ, ಕಿರಿಯ ಪುತ್ರ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷರಾದ ವಿಜ ಯೇಂದ್ರ ಶಾಸಕರಾಗಿ ಶಿಕಾರಿಪುರವನ್ನು ಪ್ರತಿನಿಧಿಸುತ್ತಿದ್ದಾರೆ. ಯಡಿಯೂರಪ್ಪನವರ ಬೆಳವಣಿಗೆಯು ಹೂವಿನ ಹಾಸಿಗೆಯಾಗಿರಲಿಲ್ಲ. ಸದಾ ಹೋರಾಟದ ಛಲ ತೊಟ್ಟಿದ್ದ ಅವರು ನಾನಾ ಕಷ್ಟಗಳನ್ನು ಎದುರಿಸಿದವರು. ಕಣ್ಣು ಬಿಡುತ್ತಿದ್ದ ಪಕ್ಷಕ್ಕೆ ರಸ್ತೆಗಿಳಿದು ಸರ್ಕಾರವನ್ನು ಬಗ್ಗಿಸುವ ಕಲೆಯನ್ನು ತಿಳಿಸಿಕೊಟ್ಟವರು. ಅವರ ಜನಪರ ಕಾಳಜಿ ಹಾಗೂ ವಿಶೇಷವಾಗಿ ರೈತ ಪರ ಸಮಸ್ಯೆಗಳು ಅವರ ಹೃದಯಕ್ಕೆ ಹತ್ತಿರವಾಗಿದ್ದ ವಿಷಯವಾಗಿತ್ತು ಮತ್ತು ಇದರಿಂದ ಅವರಿಗೆ ರೈತ ನಾಯಕ ಎಂದು ಗುರುತಿಸಲ್ಪಡಲು ಕಾರಣವಾಯಿತು.

ಬಿಜೆಪಿ ಹಿರಿಯ ನಾಯಕ ಎಲ್.ಕೆ ಅಡ್ವಾಣಿಯವರು ಹಲವಾರು ರಥಯಾತ್ರೆಗಳನ್ನು ಕೈಗೊಂಡು ದೇಶವ್ಯಾಪಿ ಬಿಜೆಪಿಯನ್ನು ವಿಸ್ತರಿಸಿದರು. ಯಡಿಯೂರಪ್ಪನವರು ಸಾಲಮನ್ನಾ, ಬಗರ್ ಹುಕುಂ, ಸ್ಥಳೀಯ ಸಂಸ್ಥೆ ಚುನಾವಣೆಗೆ ಒತ್ತಾಯಿಸಿ ಪದೆಪದೇ ಪಾದಯಾತ್ರೆಯ ಮೂಲಕ ಜನಜಾಗೃತಿ ಕೈಗೊಂಡು ಸರಕಾರವನ್ನು ಬಗ್ಗಿಸುತ್ತಿದ್ದರು. ಇದರಿಂದ ಪಕ್ಷದ ಪ್ರಭಾವಲಯ ವಿಸ್ತರಿಸುತ್ತಾ ಹೋಯಿತು. ಜನಪರ ಕಾಳಜಿಯಿಂದ ಸರಕಾರಕ್ಕೆ ಇವರು ಬೀಸುತ್ತಿದ್ದ ಚಾಟಿಯು ವಿಧಾನ ಸೌಧದಲ್ಲಿದ್ದವರನ್ನು ಬಡಿದೆಬ್ಬಿಸುತ್ತಿತ್ತು. ಇದರಿಂದಲೇ ಅವರಿಗೆ ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗು ವುದು

ಪ್ರೀತಂಗೌಡ
ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ

ಎಂಬ ಘೋಷಣೆಯು ಪ್ರತಿಯೊಬ್ಬರ ಬಿಜೆಪಿ ಕಾರ್ಯಕರ್ತರ ಬಾಯಲ್ಲಿ ಘೋಷಣೆಯು ಕೇಳಬಹುದಾಗಿತ್ತು.

ಇವರ ಜನಪ್ರಿಯತೆ ಹೆಚ್ಚಾಗುತ್ತಿದ್ದ ಹಾಗೆಯೇ ಜಿಲ್ಲೆ ಜಿಲ್ಲೆಗಳಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಬಿಜೆಪಿ ಸೇರಲು ವಿವಿಧ ಸಮುದಾಯದ ನಾಯಕರು ಸಾಲುಗಟ್ಟಿ ನಿಂತರು. ಮೈಸೂರಿನ ರಾಜಶೇಖರ ಮೂರ್ತಿ, ಬಾಗಲ ಕೋಟೆಯ ಗೋವಿಂದ ಕಾರಜೋಳ, ವಿಜಾಪುರದ ರಮೇಶ್ ಜಿಗಜಿಣಗಿ, ಹಾವೇರಿಯ ಬಸವರಾಜ್ ಬೊಮ್ಮಾಯಿ, ಮೈಸೂರಿನ ಬೆಂಕಿ ಮಹದೇವು, ಚಾಮರಾಜ ನಗರದ ಶ್ರೀನಿವಾಸ ಪ್ರಸಾದ್ ಹೀಗೆ ಹತ್ತು ಹಲವು ನಾಯಕರು ಪಟ್ಟಿಯೇ ಇರುವುದು. ಬಿಜೆಪಿ ಕೋಮುವಾದಿ ಮತ್ತು ಕೇವಲ ಒಂದು ವರ್ಗದವರ ಪಾರ್ಟಿ ಎಂಬ ಅಪಖ್ಯಾತಿಯನ್ನು ತೊರೆದು ಹಾಕಿ ಬಿಜೆಪಿ ಸರ್ವ ಜನಾಂಗದವರ ಪಾರ್ಟಿ ಎಂದು ಸಿದ್ಧಪಡಿಸಿದ ಛಲಗಾರ ಯಡಿಯೂರಪ್ಪನವರು.

ನನ್ನಂತಹ ಯುವ ಪೀಳಿಗೆಯವರನ್ನು ಪಕ್ಷದಲ್ಲಿ ಗುರುತಿಸಿ ಬೆನ್ನು ತಟ್ಟಿದರು. ಯುವಮೋರ್ಚಾ ರಾಜ್ಯದ ಮಟ್ಟದ ಜವಾಬ್ದಾರಿ ನೀಡಿದರು. ಹಾಸನವನ್ನು ನನ್ನ ಕರ್ಮಭೂಮಿ ಮಾಡಿಕೊಂಡಾಗ ಇವರ ಬೆಂಬಲ ಹಾಗೂ ಆಶೀರ್ವಾದ ಆನೆ ಬಲ ನೀಡಿತು.

ಸಂಘಟನೆಯ ದೃಷ್ಟಿಯಿಂದ ದುರ್ಬಲವಾಗಿದ್ದ ಹಾಸನದಲ್ಲಿ ಬಿಜೆಪಿಯನ್ನು ಬೆಳೆಸಲು ನನಗೆ ನೀಡಿದ ಪ್ರೋತ್ಸಾಹವೇ ಮುಂದೆ ನಾನು ಶಾಸಕನಾಗಿ ಆಯ್ಕೆಯಾಗುವುದಕ್ಕೆ ಮಹತ್ತರ ಪಾತ್ರವಹಿಸಿತು ಎಂದರೆ ಉತ್ಪ್ರೇಕ್ಷೆಯಲ್ಲ. ಹಾಸನ ನಗರ ಮತ್ತು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಯಡಿಯೂರಪ್ಪನವರ ಕೊಡುಗೆ ಅಪಾರ. ಇವರ ಅವಧಿಯಲ್ಲಿ ದೊರೆತ ಪ್ರಮಾಣದ ಅನುದಾನ ಮತ್ತು ಅಭಿವೃದ್ಧಿ ಕಾರ್ಯಗಳು ಹಾಸನದ ಇತಿಹಾಸದಲ್ಲಿ ನಡೆದಿರಲಿಲ್ಲ. ಅಭಿವೃದ್ಧಿ ಯೋಜನೆಗಳನ್ನು ತಡ ಮಾಡದೆ ಅನುಮೋದಿಸಿ ಚಾಲನೆ ನೀಡುತ್ತಿದ್ದರು. ಇದರಿಂದ ಶಾಸಕನಾಗಿದ್ದ ನನಗೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ತುಂಬಾ ಸಹಕಾರಿಯಾಯಿತು.

ಹಾಸನ ನಗರಕ್ಕೆ ಒಳ ಚರಂಡಿ ವ್ಯವಸ್ಥೆ: ಹಾಸನ ನಗರಕ್ಕೆ ಒಳ ಚರಂಡಿ ವ್ಯವಸ್ಥೆ ರೂಪಿಸಲು 165 ಕೋಟಿ ಯೋಜನೆ ಯನ್ನು ಅವರಿಗೆ ಸಲ್ಲಿಸಿದಾಗ ಕೂಡಲೇ ಅದನ್ನು ಅನುಮೋದಿಸಿದರು. ಇಂದು ಇಡೀ ಹಾಸನ ನಗರದ ಮನೆಗಳು ಈ ವ್ಯವಸ್ಥೆಯೊಂದಿಗೆ ಜೋಡಣೆಯಾಗಿದೆ. ಹಾಸನ ನಗರದಲ್ಲಿ 150 ಕೋಟಿ ರು. ವೆಚ್ಚದಲ್ಲಿ ಹತ್ತು ಉದ್ಯಾನವನ ಮತ್ತು 15 ಕೆರೆಗಳನ್ನು ಅಭಿವೃದ್ಧಿಪಡಿಸಲು ಅನುದಾನ ನೀಡಿದರು. ಇದರಿಂದ ಹಾಸನ ನಗರದ ಸೌಂದರ್ಯ ಹೆಚ್ಚಲು ಸಹಾಯವಾ ಯಿತು. ರಾಜ್ಯದಲ್ಲಿ ಹಾಸನದಲ್ಲಿ ಅತಿ ದೊಡ್ಡ ಸರ್ಕಾರಿ ಬಸ್ ನಿಲ್ದಾಣ ನಿರ್ಮಾಣವಾಗಿದ್ದು ಯಡಿಯೂರಪ್ಪ ನವರ ಕಾಲದಲ್ಲಿಯೇ.



ಹಾಸನದ ರಿಂಗ್ ರಸ್ತೆಯ ಮೂಲಕ ಚಿಕ್ಕಮಗಳೂರು ರಸ್ತೆ ಸಂಪರ್ಕಿಸುವ ನೂರಾರು ಕೋಟಿ ವೆಚ್ಚದ ಯೋಜನೆಯ ಅನು ಷ್ಠಾನದ ಕೀರ್ತಿಯು ಯಡಿಯೂರಪ್ಪ ನವರಿಗೆ ಸಲ್ಲುತ್ತದೆ. ನಗರವನ್ನು ಸಂಪರ್ಕಿಸುವ ರಿಂಗ್ ರೋಡ್ ಯೋಜನೆಯನ್ನು ಕೈಗೊಂಡಿದ್ದು ಇವರ ಅವಧಿಯಲ್ಲಿಯೇ. ಹಾಸನದ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಯು ಯಡಿಯೂರಪ್ಪ ನವರು ಮುಖ್ಯಮಂತ್ರಿ ಆದಾಗ ನಡೆದಿದ್ದು. ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಸಾವಿರಾರು ಬೋರ್ ವೆಲ್‌ಗಳನ್ನು ಕೊರೆಯಲಾಯಿತು. ಜನರ ನೀರಿನ ದಾಹ ಇಂಗಿಸಲು ಭಗೀರಥರಾದವರು ಯಡಿಯೂರಪ್ಪನವರು.

ನನ್ನ ರಾಜಕೀಯ ಬೆಳವಣಿಗೆ ಸಹಿಸದ ಕಿಡಿಗೇಡಿಗಳು ನನ್ನ ಮನೆಯ ಮೇಲೆ ಕಲ್ಲೆಸೆತ ಮಾಡಿದಾಗ ಯಡಿಯೂ ರಪ್ಪನವರು 40 ಜನ ಶಾಸಕರೊಂದಿಗೆ ಹಾಸನಕ್ಕೆ ಬಂದು ನನಗೆ ನೀಡಿದ ನೈತಿಕ ಬೆಂಬಲ ಜಿಲ್ಲೆಯ ನಾಯಕನಾಗಿ ನನ್ನನ್ನು ಗುರುತಿಸಲು ಸಹಾಯವಾಯಿತು. 2019ರ ವಿಧಾನಸಭಾ ಚುನಾವಣೆಯಲ್ಲಿ ನನಗೆ ಸ್ಪರ್ಧಿಸಲು ಬಿ ಫಾರಂ ನೀಡಲು ತಡವಾದಾಗ ಯಡಿಯೂರಪ್ಪನವರು ಮಧ್ಯ ಪ್ರವೇಶಿಸಿ ಹಾಸನದಲ್ಲಿ ಬಿಜೆಪಿಯು ಬಲವಾಗಿ ಬೆಳೆಯಲು ಪ್ರೀತಂ ಗೌಡ ಸ್ಪರ್ಧೆ ಅತಿ ಮುಖ್ಯ ಎಂದು ಸ್ಪಷ್ಟಪಡಿಸಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಬಿ ಫಾರಂ ನೀಡಿ ಆಶೀರ್ವದಿಸಿದರು. ಚುನಾವಣಾ ಪ್ರಚಾರಕ್ಕೆ ಹಾಸನ ಕ್ಷೇತ್ರಕ್ಕೆ ವಿಶೇಷವಾಗಿ ಆಗಮಿಸಿ ವ್ಯಾಪಕವಾಗಿ ಪ್ರಚಾರ ಕೈಗೊಂಡು ನನ್ನ ಗೆಲುವಿಗೆ ಕಾರಣರಾದರು.

ಮೊದಲ ಬಾರಿ ಶಾಸಕನಾದ ನನಗೆ ಪ್ರಮುಖವಾದ ಸಂಪುಟ ದರ್ಜೆಯ ನಿಗಮದ ಅಧ್ಯಕ್ಷ ಸ್ಥಾನ ನೀಡಿದರು. ಹಾಸನದ ಸಮಗ್ರ ಅಭಿವೃದ್ಧಿಯು ನನ್ನ ಕನಸಾಗಿದ್ದ ಕಾರಣ ನಾನು ಈ ಹುದ್ದೆಯನ್ನು ಸ್ವೀಕರಿಸಲಿಲ್ಲ ಮತ್ತು ಯಡಿಯೂರಪ್ಪನವರಿಗೆ ಇದರ ಬಗ್ಗೆ ಮನವರಿಕೆ ಮಾಡಿದಾಗ ಹರ್ಷದಿಂದ ನನ್ನ ಗುರಿ ಸಾಧಿಸಲು ಎಲ್ಲ ರೀತಿ ಸಹಕಾರ ನೀಡುವ ಭರವಸೆ ಕೊಟ್ಟರು. ಯುವ ಶಾಸಕನಾದ ನನಗೆ ಇದು ಅವರ ಬಗ್ಗೆ ಇನ್ನೂ ಹೆಚ್ಚಿನ ಗೌರವ ಬೆಳೆಯುವಂತೆ ಮಾಡಿತು ಹಾಗೂ ಹಾಸನವನ್ನು ಮಾದರಿ ನಗರ ಮಾಡುವ ನನ್ನ ಯೋಜನೆಗೆ ಇಮ್ಮಡಿ ಶಕ್ತಿ ದೊರೆಯಿತು.

ಬಿಜೆಪಿಯಲ್ಲಿ ಯಡಿಯೂರಪ್ಪನವರು ಪ್ರಬಲ ಶಕ್ತಿಯಾಗಿ ಐವತ್ತು ವರ್ಷದ ರಾಜಕೀಯದ ನಂತರವು ಇದ್ದಾರೆ ಎಂದರೆ ಅವರ ಜನಪ್ರಿಯತೆಗೆ ಅವರ ಶಕ್ತಿಗೆ ಸಾಕ್ಷಿಯಾಗಿದೆ. ಇಂದಿಗೂ ಜನಾನುರಾಗಿ ನಾಯಕರಾಗಿ ಜನರನ್ನು ಸೆಳೆಯುವ ಕಲೆಯು ಅವರಿಂದ ಮಾಸಿಲ್ಲ. ಬಿಜೆಪಿಯನ್ನು ರಾಜ್ಯದಲ್ಲಿ ಮತ್ತೇ ಅಧಿಕಾರಕ್ಕೆ ತರಬೇಕೆಂಬ ತುಡಿತ ಮಾಗಿಲ್ಲ. ವಯಸ್ಸು ಎಂಭತ್ತು ದಾಟಿದ್ದರು ನಲವತ್ತರ ಚೈತನ್ಯದೊಂದಿಗೆ ರಾಜ್ಯ ಪ್ರವಾಸ ಮಾಡುವುದು ಕಾರ್ಯಕರ್ತರೊಂದಿಗೆ ಬೆರೆತು ಅವರಿಗೆ ಉತ್ಸಾಹ ತುಂಬುವ ಕೆಲಸ ನಿರಂತರವಾಗಿ ವಿರಮಿಸದೆ ಮಾಡುತ್ತಿರುವುದು ನಮ್ಮಂತಹ ಯುವಕರಿಗೆ ಅವರು ಪ್ರೇರಕ ಶಕ್ತಿಯಾಗಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಹಾದಿಬೀದಿಗೆ ಬಂದ ದೀದಿ ರಂಪ

ಪಶ್ಚಿಮ ಬಂಗಾಳದ ರಾಜಕೀಯ ಅನಾಹುತಕಾರಿ ತಿರುವು ತಿರುಗಿದೆ. ವಿಧಾನಸಭೆ ಚುನಾವಣೆಯಲ್ಲಿ ಸೋತು ಸ್ಥಾನ ಕಳೆದುಕೊಂಡ ಮಮತಾ ಬ್ಯಾನರ್ಜಿ ತಾನು ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವುದಿಲ್ಲ ಎಂದು ಹಠ ಹಿಡಿದಿದ್ದಾರೆ. ಬೇಕಾದರೆ ರದ್ದುಗೊಳಿಸಿ, ರಾಷ್ಟ್ರಪತಿ ಆಡಳಿತ ಹಾಕಿ ಎಂದೆಲ್ಲ ಮೊಂಡು ವಾದ ಹೂಡಿದ್ದಾರೆ. ಯಥಾ ನಾಯಕಿ ತಥಾ ಕಾರ್ಯಕರ್ತರು ಎಂದು ಬೇರೆ ಹೇಳಬೇಕಿಲ್ಲ. ಸೋಲಿನಿಂದ ರೊಚ್ಚಿಗೆದ್ದಿರುವ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ಎಸಗುತ್ತಿರುವ ಹಿಂಸಾಚಾರ ಹಿಂದೆಂದೂ ಕಾಣದ ಮಟ್ಟವನ್ನೇ ಮುಟ್ಟಿದೆ. ಗೆದ್ದು ಸರಕಾರ ರಚಿಸಲಿದ್ದ ಬಿಜೆಪಿಯ ಮುಖಂಡ ಸುವೇಂದು ಅಧಿಕಾರಿ ಅವರ ಆಪ್ತನೇ ಗುಂಡಿಗೆ ಬಲಿಯಾಗಿದ್ದಾರೆ. ದುಷ್ಕರ್ಮಿಗಳ ಗುರಿ ತಾನೇ ಆಗಿದ್ದೆ ಎಂದು ಸುವೇಂದು ಅವರು ಹೇಳಿದ್ದಾರೆ. ಫಲಿತಾಂಶ ಬಂದ ಬಳಿಕದ ಎರಡು ದಿನಗಳಲ್ಲಿ ಹಿಂಸಾಚಾರಕ್ಕೆ ಐದು ಮಂದಿ ಬಲಿಯಾಗಿದ್ದಾರೆ. ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರು ಪರಸ್ಪರರ ಕಚೇರಿಗಳಿಗೆ ಬೆಂಕಿ ಹಚ್ಚಿದ ಘಟನೆ ನಡೆದಿದೆ. ಚುನಾವಣಾ, ರಾಜಕೀಯ ಹಿಂಸಾಚಾರದಲ್ಲಿ ಪಶ್ಚಿಮ ಬಂಗಾಳ ಹಾಗೂ ಕೇರಳ ಮೊದಲೆರಡು ಸ್ಥಾನಗಳಲ್ಲಿವೆ ಎಂಬುದು ಎಲ್ಲರಿಗೂ ಗೊತ್ತಿದ್ದದ್ದೇ. ಈ ಸಮಸ್ಯೆಯ ಮೂಲ ಬರಿಯ ಕಾರ್ಯಕರ್ತರಲ್ಲಿ ಇರುವುದಲ್ಲ. ನಾಯಕ ರಲ್ಲಿಯೂ ಇದೆ. ಪೀಠ ಬಿಟ್ಟುಕೊಡಲಾರೆ ಎಂಬ ಮೊಂಡು ಹಠವನ್ನು ಬಿಟ್ಟುಕೊಡದ ಮಮತಾ ಇದಕ್ಕೆ ಮೂಲ ಕಾರಣ. ಈ ಹಿಂದೆಯೂ ಅವರು ಒಕ್ಕೂಟ ಸರ್ಕಾರದ ವಿರುದ್ಧ, ವಿರೋಧ ಪಕ್ಷಗಳ ವಿರುದ್ಧ ಸಂಘರ್ಷದ ಹಾದಿಯನ್ನೇ ತುಳಿದಿದ್ದಾರೆ. ಎನ್‌ಆರ್‌ಸಿ, ಎಸ್‌ಐಆರ್, ಇಡಿ ಕಾರ್ಯಾಚರಣೆಗಳು, ನ್ಯಾಯಾಂಗ ನಿರ್ಧಾರಗಳು, ಕೇಂದ್ರದ ಯೋಜನೆಗಳಿಗೆ ಅಡೆ ತಡೆ ಒಡ್ಡುವುದು, ಮಹಿಳಾ ಹಕ್ಕು ಸಂಘಟನೆಯವರು ಬಂದಾಗ ಅವರಿಗೆ ಘೆರಾವ್ ಮಾಡಿಸುವುದು– ಹೀಗೆ ಅವರ ಅಪಖ್ಯಾತಿಗೆ ಎಲ್ಲೆಯೇ ಇಲ್ಲ. ಮಮತಾ ಈ ಹಿಂಸೆಯ ಹಾದಿಯನ್ನು ಬಿಡದೇ ಹೋದರೆ ಯಾರಿಗೂ ನೆಮ್ಮದಿಯಿಲ್ಲ. ದಶಕಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಹರಡಿದ್ದ ಕಮ್ಯುನಿಸ್ಟ್ ಪಕ್ಷಗಳ ಹಿಂಸಾತ್ಮಕ ಆಡಳಿತವನ್ನು ಹೋರಾಟದಿಂದ ಮಣಿಸಿ ಗಾದಿ ಏರಿದವರು ದೀದಿ. ಅಂದು ಮಾವೋವಾದಿ ಪಕ್ಷಗಳನ್ನು ತ್ಯಜಿಸಿ ತೃಣಮೂಲ ಸೇರಿದವರೇ ಇಂದು ಬಿಜೆಪಿ ವಿರುದ್ಧ ಹಿಂಸೆಯಲ್ಲಿ ತೊಡಗಿದ್ದಾರೆ. ಅದಕ್ಕೆ ದೀದಿ ಕುಮ್ಮಕ್ಕು ನೀಡುತ್ತಿದ್ದಾರೆ. ವಾಸ್ತವ ಅರ್ಥ ಮಾಡಿಕೊಂಡು, ಹಿಂದೆ ಸರಿದು, ಹೊಸ ಶಾಸಕಾಂಗ ವ್ಯವಸ್ಥೆಗೆ ಹಾದಿ ಮಾಡಿಕೊಡುವಲ್ಲಿ ಎಲ್ಲರ ಹಿತವಿದೆ.

ಸೊಂಪಾದಕೀಯ

ಪೊಲೀಸರ ಲವ್ ದೋಖಾ

ಪೊಲೀಸ್ ಇಲಾಖೆ ಇರುವುದು 'ಕಾನೂನು ಮತ್ತು ಸುವ್ಯವಸ್ಥೆ'ಯ ರಕ್ಷಣೆಗೆ. ಆದರೆ ಇದು ಪೊಲೀಸ್ ಇಲಾಖೆಯೊಳಗೇ ನಡೆದ ಕಾನೂನು ಮತ್ತು ಅವ್ಯವಸ್ಥೆ ಸಮಸ್ಯೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಪಿಎಸ್‌ಐ ಮತ್ತು ಮಹಿಳಾ ಪೇದೆ ನಡುವೆ ನಡೆದ 'ಸುವ್ಯವಸ್ಥೆ' ಮತ್ತು ಅದರಿಂದ ಉಂಟಾದ 'ಅವ್ಯವಸ್ಥೆ'ಯ ಕತೆ. ಯಾದಗಿರಿಯ ಶಹಾಪುರದಲ್ಲಿ ಪಿಎಸ್‌ಐ ಹಾಗೂ ಮಹಿಳಾ ಪೇದೆ 8 ವರ್ಷಗಳಿಂದ ಲಿವಿಂಗ್ ಟುಗೆದರ್‌ನಲ್ಲಿ ಇದ್ದರು. ಅದೂ ಗುಪ್ತಚರ ಇಲಾಖೆಯವರು. ಗುಪ್ತವಾಗಿಯೇ ಎಲ್ಲ ನಡೆದಿತ್ತು. ಪಬ್ಲಿಕ್ ಆಗಿದ್ದು ಮಹಿಳಾ ಪೇದೆ ತನಗೆ ಮೋಸ ಮಾಡಿದ್ದಾರೆ ಎಂದು ಪಿಎಸ್‌ಐ ಆರೋಪಿಸಿ ರಾಯಚೂರು ಎಸ್‌ಪಿಗೆ ದೂರು ನೀಡುವ ಮೂಲಕ. ದೂರನ್ನು ಅಲ್ಲಿಗೇ ಗುಪ್ ಗುಪ್ ಮಾಡೋಣ ಎಂದರೆ ಪಿಎಸ್‌ಐ ಮೀಡಿಯಾಗಳಲ್ಲೂ ಟಾಂಟಾಂ ಮಾಡಿದ್ದಾರೆ. ಮೋಸ ಏನು? ನಾಲ್ಕು ವರ್ಷ ಒಂದೇ ಮನೆಯಲ್ಲಿ ಜೊತೆಯಾಗಿ ವಾಸಿಸಿ, ಈಗ ಬೇರೊಬ್ಬನ ಕೈ ಹಿಡಿಯುತ್ತಿದ್ದಾಳೆ ಎಂದು ದೂರು. ವಿಶೇಷ ಇನ್ನೂ ಇದೆ– ಈ ಮಹಿಳಾ ಪೇದೆ ಮೂರು ಬಾರಿ ಗರ್ಭಪಾತ ಮಾಡಿಸಿಕೊಂಡಿದ್ದಾಳೆ. 35 ಲಕ್ಷ ಹಣ ಪಡೆದು ಕೈ ಎತ್ತಿದ್ದಾಳೆ ಎಂದು ಪಿಎಸ್‌ಐ ದೂರು. ಈಗ ತನ್ನನ್ನು ಬಿಟ್ಟು, ಜಾತಿ ನೆಪ ಹೇಳಿ ದೂರಾಗಿ, ಬೇರೊಬ್ಬನ ಜೊತೆ ಸಪ್ತಪದಿ ತುಳಿಯುತ್ತಿದ್ದಾಳೆ ಎಂದು ದೂರುದಾರನ ಲಬೋಲಬೋ. ಈತ ಯಾವ್ಯಾವುದಕ್ಕೆಲ್ಲಾ ದುಃಖಪಡಬೇಕೋ ಏನೋ. ಜಾತಿ ಬೇರೆಯಾದರೂ ಆತನಿಗೆ ಆಕೆಯೇ ಬೇಕಂತೆ. ಕೊಟ್ಟ ಹಣ, ಪಡೆದ ಸುಖ, ಎಲ್ಲ ದುಃಖದ ಲೆಕ್ಕಕ್ಕೆ ಈಗ ಜಮೆ ಯಾಗಿ, ಲಿವಿಂಗ್ ಟುಗೆದರ್ ಎಂಬ ಅವ್ಯವಸ್ಥೆಯನ್ನು ಶಪಿಸುವಂತಾಗಿದೆ.

ಸಂಪಾದಕರ ಸದ್ಯಶೋಧನೆ

ರೋಲಿಂಗ್ ಮತ್ತು ಗುಪ್ತನಾಮ

ಜೆ.ಕೆ. ರೋಲಿಂಗ್ ಮತ್ತು 'ದಿ ಕುಕ್ಕೂಸ್ ಕಾಲಿಂಗ್' ಅಂದರೆ ನಿಮಗೆ ಏನು ನೆನಪಾಗುತ್ತದೆ? ಇದು ಸಾಹಿತ್ಯ ಲೋಕದ ಅತ್ಯಂತ ಆಸಕ್ತಿದಾಯಕ ಮತ್ತು ಕಟು ಸತ್ಯವನ್ನು ಸಾರುವ ಕಥೆಗಳಲ್ಲಿ ಒಂದು ಅಂದರೆ ಆಶ್ಚರ್ಯವಾಗಬಹುದು. ಒಬ್ಬ ವ್ಯಕ್ತಿಯ ಯಶಸ್ಸಿನಲ್ಲಿ ಕೇವಲ ಪ್ರತಿಭೆ ಮಾತ್ರವಲ್ಲದೇ, 'ಬ್ರ್ಯಾಂಡ್ ವ್ಯಾಲ್ಯೂ' ಅಥವಾ 'ಹೆಸರು' ಎಷ್ಟು ಮುಖ್ಯ ಪಾತ್ರ ವಹಿಸುತ್ತದೆ ಎಂಬುದಕ್ಕೆ ಇದೊಂದು ಜ್ವಲಂತ ಉದಾಹರಣೆ. ಹ್ಯಾರಿ ಪಾಟರ್ ಸರಣಿಯ ಮೂಲಕ ಜಗತ್ತಿನ ಅತ್ಯಂತ ಶ್ರೀಮಂತ ಮತ್ತು ಪ್ರಭಾವಶಾಲಿ ಲೇಖಕಿಯಾಗಿ ಬೆಳೆದ ರೋಲಿಂಗ್ ಅವರಿಗೆ ಒಂದು ಆಸೆ ಇತ್ತು. ತನ್ನ ಹೆಸರಿನ ಪ್ರಭಾವವಿಲ್ಲದೇ, ಕೇವಲ ತನ್ನ ಬರವಣಿಗೆಯ ಗುಣಮಟ್ಟದಿಂದ ಓದುಗರನ್ನು ಸೆಳೆಯಲು ಸಾಧ್ಯವೇ ಎಂದು ಪರೀಕ್ಷಿಸುವುದು ಅವರ ಉದ್ದೇಶವಾಗಿತ್ತು. ಇದಕ್ಕಾಗಿ ಅವರು 'ರಾಬರ್ಟ್ ಗಲ್‌ಬ್ರೈತ್' ಎಂಬ ಗುಪ್ತನಾಮವನ್ನು ಆರಿಸಿಕೊಂಡರು. ಇದು ಅವರ ವೃತ್ತಿಜೀವನದ ಮೇಲೆ ಅವರಿಗೆ ಇದ್ದ ನಂಬಿಕೆ ಮತ್ತು ಸವಾಲು ಹಾಕುವ ಗುಣವನ್ನು ತೋರಿಸುತ್ತದೆ. ಆದರೆ, ಫಲಿತಾಂಶ ಮಾತ್ರ ಅಂದುಕೊಂಡಿದ್ದಕ್ಕಿಂತ ಭಿನ್ನವಾಗಿತ್ತು. ರೋಲಿಂಗ್ ಅವರು ಹಸ್ತಪ್ರತಿಯನ್ನು ಪ್ರಕಾಶಕರಿಗೆ ಕಳುಹಿಸಿದಾಗ, ಅವರಿಗೆ ಬಂದ ಪ್ರತಿಕ್ರಿಯೆಗಳು ಆಘಾತಕಾರಿಯಾಗಿದ್ದವು. ಕೆಲವು ಪ್ರಕಾಶಕರು ಈ ಕೃತಿಯನ್ನು ತಿರಸ್ಕರಿಸಿದರು, ಇನ್ನು ಕೆಲವರು ಬರವಣಿಗೆಯಲ್ಲಿ ಯಾವುದೇ ವಿಶೇಷ ಇಲ್ಲ ಎಂದು ಟೀಕಿಸಿದರು. ವಿಶ್ವದ ಶ್ರೇಷ್ಠ ಲೇಖಕಿಯೊಬ್ಬರಿಗೆ 'ಬರವಣಿಗೆ ಕಲಿಯಿರಿ' ಎಂಬ ಧಾಟಿಯ ಸಲಹೆಗಳು ಬಂದವು ಎಂದರೆ, ಮಾರುಕಟ್ಟೆಯಲ್ಲಿ ಪ್ರತಿಭೆಯನ್ನು ಗುರುತಿಸುವ ಮಾನದಂಡ ಎಷ್ಟು ಸಂಕೀರ್ಣವಾಗಿದೆ ಎಂಬುದು ತಿಳಿಯುತ್ತದೆ. ಅಂದು 'ರಾಬರ್ಟ್' ಹೆಸರಿನಲ್ಲಿ ಬಂದ ಪುಸ್ತಕ ಮಾರಾಟವಾಗಿದ್ದು ಕೇವಲ ಐನೂರು ಪ್ರತಿಗಳು ಮಾತ್ರ. ಇದು ಅವರ ಕಠಿಣ ಪರಿಶ್ರಮ ಮತ್ತು ಕೌಶಲಕ್ಕೆ ಸಿಕ್ಕ ಪ್ರತಿಫಲವಾಗಿತ್ತು. ಯಾವಾಗ ಒಬ್ಬ ವಕೀಲರು ಈ ಪುಸ್ತಕದ ಹಿಂದೆ ಇರುವುದು ಜೆ.ಕೆ. ರೋಲಿಂಗ್ ಎಂಬ ಸಂಗತಿಯನ್ನು ಸೋರಿಕೆ ಮಾಡಿದರೋ, ಅಲ್ಲಿಂದ ಕಥೆಯೇ ಬದಲಾಯಿತು. ಒಂದೇ ದಿನದಲ್ಲಿ ಪುಸ್ತಕದ ಮಾರಾಟವು ಶೇ.4000ಕ್ಕಿಂತ ಹೆಚ್ಚು ಜಿಗಿತ ಕಂಡಿತು. ಅಮೆಜಾನ್‌ನಂಥ ಜಾಲತಾಣಗಳಲ್ಲಿ ಪುಸ್ತಕವು ರಾತ್ರೋರಾತ್ರಿ ನಂಬರ್ ಒಂದನೇ ಸ್ಥಾನಕ್ಕೆ ಏರಿತು. ಇಲ್ಲಿ ಬದಲಾಗಿದ್ದು ಬರವಣಿಗೆಯಲ್ಲ ಅಥವಾ ಕಥೆಯಲ್ಲ. ಬದಲಾಗಿದ್ದು ಕೇವಲ ಆ ಪುಸ್ತಕದ ಮೇಲಿದ್ದ ಲೇಖಕಿಯ ಹೆಸರು. ಈ ಘಟನೆಯು 'ಜನರು ಕೃತಿಯನ್ನು ನೋಡಿ ಖರೀದಿಸುವುದಿಲ್ಲ, ಬದಲಾಗಿ ಕರ್ತೃವನ್ನು ನೋಡಿ ಖರೀದಿಸುತ್ತಾರೆ' ಎಂಬ ಕಟು ಸತ್ಯವನ್ನು ಎತ್ತಿ ತೋರಿಸಿತು. ನಮ್ಮ ಸಮಾಜದಲ್ಲಿ ಒಂದು ಮಾತಿದೆ – 'ನೀವು ಕಷ್ಟಪಟ್ಟರೆ ಯಶಸ್ಸು ಖಂಡಿತ.' ಆದರೆ ರೋಲಿಂಗ್ ಅವರ ಈ ಪ್ರಯೋಗವು ಆ ಮಾತನ್ನು ಅರ್ಧ ಸತ್ಯ ಎಂದು ಸಾಬೀತುಪಡಿಸಿತು. ರೋಲಿಂಗ್ ಅವರ ಯಶಸ್ಸಿನ ಹಿಂದೆ ಹ್ಯಾರಿ ಪಾಟರ್ ಮೂಲಕ ಅವರು ಗಳಿಸಿದ್ದ 'ಹೆಸರು' ಒಂದು ದೊಡ್ಡ ಬಂಡವಾಳವಾಗಿತ್ತು. ಆ ಹೆಸರು ಇಲ್ಲದಿದ್ದಾಗ ಅವರ ಕೌಶಲವು ಕತ್ತಲೆಯಲ್ಲಿ ಕಳೆದ ಹಣತೆಯಂತಿತ್ತು. ಲೋಕದಲ್ಲಿ ರೋಲಿಂಗ್‌ಗಿಂತ ಅದ್ಭುತವಾಗಿ ಬರೆಯುವ, ಆದರೆ ಯಾವುದೇ ಬೆಂಬಲವಿಲ್ಲದ ಸಾವಿರಾರು ಲೇಖಕರು ಇರಬಹುದು. ಅವರ ಪುಸ್ತಕಗಳು ಎಂದಿಗೂ ಮುನ್ನೆಲೆಗೆ ಬರುವುದಿಲ್ಲ. ಏಕೆಂದರೆ ಅವರ ಹಿಂದೆ 'ಬ್ರ್ಯಾಂಡ್' ಇಲ್ಲ. ಕೌಶಲವು ಒಂದು ಭದ್ರ ಬುನಾದಿಯಾಗಬಹುದು, ಆದರೆ ಆ ಬುನಾದಿಯ ಮೇಲೆ ಸೌಧ ಕಟ್ಟಲು ನಮಗೆ ಅದೃಷ್ಟ, ಸಮಯ ಮತ್ತು ಮಾರುಕಟ್ಟೆಯ ಪ್ರಚಾರದ ಅಗತ್ಯವಿರುತ್ತದೆ. ಒಬ್ಬ ವ್ಯಕ್ತಿ ಶ್ರೀಮಂತನಾಗಲು ಅಥವಾ ಪ್ರಸಿದ್ಧನಾಗಲು ಕೇವಲ ಕಠಿಣ ಪರಿಶ್ರಮ ಮಾತ್ರ ಕಾರಣವಲ್ಲ. ಒಮ್ಮೆ ನೀವು ಒಂದು ಮಟ್ಟದ ಯಶಸ್ಸನ್ನು ತಲುಪಿದರೆ, ನಿಮ್ಮ ಸಾಧಾರಣ ಪ್ರಯತ್ನಗಳನ್ನು ಕೂಡ 'ಮಾಸ್ಟರ್ ಪೀಸ್' ಎಂದು ಕರೆಯಲಾಗುತ್ತದೆ. ಇದನ್ನು 'ಮ್ಯಾಥ್ಯೂ ಎಫೆಕ್ಟ್' (Matthew Effect) ಎಂದು ಕರೆಯಲಾ ಗುತ್ತದೆ–ಅಂದರೆ, ಇರುವವನಿಗೆ ಹೆಚ್ಚು ನೀಡಲಾಗುತ್ತದೆ, ಇಲ್ಲದವನಿಂದ ಇರುವುದನ್ನೂ ಕಿತ್ತುಕೊಳ್ಳಲಾಗುತ್ತದೆ. ಪ್ರತಿಭೆಯನ್ನು ಗುರುತಿಸದಿದ್ದರೆ ಅದು ವ್ಯರ್ಥ. ಲೋಕಕ್ಕೆ ಕಾಣಿಸದ ಪ್ರತಿಭೆಗಿಂತ, ಸಾಧಾರಣವಾಗಿದ್ದರೂ ಜಾಹೀರಾತು ಪಡೆಯುವ ಶ್ರಮಕ್ಕೆ ಹೆಚ್ಚು ಬೆಲೆ ಸಿಗುತ್ತದೆ. ಆ ವಕೀಲರು ರೋಲಿಂಗ್ ಹೆಸರನ್ನು ಸೋರಿಕೆ ಮಾಡದಿದ್ದರೆ, ಇಂದಿಗೂ 'ದಿ ಕುಕ್ಕೂಸ್ ಕಾಲಿಂಗ್' ಒಂದು ವಿಫಲ ಪುಸ್ತಕವಾಗಿಯೇ ಉಳಿಯುತ್ತಿತ್ತು. ಇಲ್ಲಿ ಆಕಸ್ಮಿಕವಾಗಿ ನಡೆದ ಆ ಘಟನೆಯೇ ಅವರ ಯಶಸ್ಸಿಗೆ ಕಾರಣವಾಯಿತು.

ಮಕ್ಕಳು ಹೆತ್ತವರ ಮುಂದೆ ಏಕೆ ಸುಳ್ಳು ಹೇಳುತ್ತಾರೆ?

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಮಕ್ಕಳೇಕೆ ಸುಳ್ಳು ಹೇಳುತ್ತಾರೆ? ಈ ಲೇಖನಕ್ಕೆ ಹೀಗೊಂದು ಹೆಡಿಂಗ್ ಕೊಟ್ಟ ಮರುಕ್ಷಣ ನನಗೆ ಈ ಪ್ರಶ್ನೆಯೇ ಬಹಳ ವಿಚಿತ್ರವೆನಿಸುತ್ತಿದೆ. ಏಕೆಂದರೆ ಭೂಮಿಯ ಮೇಲಿನ ಎಲ್ಲರೂ ಸುಳ್ಳು ಹೇಳುತ್ತಾರೆ. ಹಾಗಿರುವಾಗ ಇದೆಂತಹ ಪ್ರಶ್ನೆ? ಆದರೂ ದೊಡ್ಡವರಾದ ನಮಗೆ ಇದಕ್ಕೆ ಉತ್ತರ ಬೇಕಿದೆ. ಮಕ್ಕಳೇಕೆ ಸುಳ್ಳು ಹೇಳುತ್ತಾರೆ?

ನಾನಾಗ ಪಿಯುಸಿ ಎರಡನೇ ವರ್ಷ. ವರ್ಷದ ಕ್ಲಾಸುಗಳೆಲ್ಲ ಮುಗಿದಿದ್ದವು. ಕಾಲೇಜಿನಲ್ಲಿ ವಾರ್ಷಿಕ ಪರೀಕ್ಷೆಗಿಂತ ಮೊದಲು ಪ್ರಿಪರೇಟರಿ (ಪೂರ್ವ ತಯಾರಿ) ಪರೀಕ್ಷೆ ಇತ್ತು. ಆ ಪರೀಕ್ಷೆ ಕಾಲಹರಣ ಎಂದೇ ನನಗಿದ್ದ ಗಟ್ಟಿ ನಿಲುವು. ವಾರ್ಷಿಕ ಪರೀಕ್ಷೆ ತಯಾರಿ ಹೇಗಿದೆ ಎಂದು ತಿಳಿಯುವ ಉದ್ದೇಶಕ್ಕೇ ಆದರೂ, ಅದರ ಫಲಿತಾಂಶಕ್ಕೆ ಯಾವುದೇ ಪರಿಣಾಮದ ಮಹತ್ವ ಇರಲಿಲ್ಲ. ಪ್ರತಿಫಲವಿಲ್ಲದ ಕೆಲಸ ಎಂದೆನಿಸುತ್ತಿತ್ತು.

ಆದರೆ ಪ್ರಿಪರೇಟರಿ ಪರೀಕ್ಷೆ ತಪ್ಪಿಸಿಕೊಳ್ಳುವಂತಿರಲಿಲ್ಲ. 'ತಪ್ಪಿಸಿಕೊಂಡರೆ ವಾರ್ಷಿಕ ಪರೀಕ್ಷೆಗೆ ಹಾಲ್ ಟಿಕೆಟ್ ಕೊಡುವುದಿಲ್ಲ' ಎಂದು ಪ್ರಾಂಶುಪಾಲರು ಕ್ಲಾಸಿಗೆ ಬಂದು ಹೆದರಿಸಿದ್ದರು. ಹಾಗಾಗಿ ಪರೀಕ್ಷೆಗೆ ಹೋಗುವುದು ಅನಿವಾರ್ಯವಾಗಿತ್ತು. ಆದರೆ ಉತ್ತರ ಪತ್ರಿಕೆಯಲ್ಲಿ ಏನು ಮತ್ತು ಎಷ್ಟು ಉತ್ತರ ಬರೆಯಬೇಕು ಎನ್ನುವುದು ನಮ್ಮ ಕೈಲಿದೆಯಲ್ಲ ! ಪಾಸ್ ಆಗಲು ಎಷ್ಟು ಬೇಕೋ ಅಷ್ಟೇ – ನಲವತ್ತು ಮಾರ್ಕ್ಸಿಗೆ ಆಗುವಷ್ಟು ಬರೆದು ಬರುವುದು ಎಂದು ಸ್ನೇಹಿತರೆಲ್ಲ ಮಾತನಾಡಿಕೊಂಡೆವು. ಪ್ರಿಪರೇಟರಿ ಪರೀಕ್ಷೆ ಒತ್ತಾಯಕ್ಕೆ ಹೀಗೊಂದು ಪ್ರತಿಭಟನೆ. ಉತ್ತರಗಳು ನಲವತ್ತು ಮಾರ್ಕ್ಸ್ ದಾಟುತ್ತಿದ್ದಂತೆ ಪೇಪರ್ ಮರಳಿ ಕೊಟ್ಟು, ಸ್ನೇಹಿತರೆಲ್ಲ ಸೇರಿ ಕ್ರಿಕೆಟ್ ಆಡಲು ಹೊರಟುಬಿಡುತ್ತಿದ್ದೆವು.

ಪ್ರಿಪರೇಟರಿ ಪರೀಕ್ಷೆ ಮುಗಿಯಿತು. ವಾರ್ಷಿಕ ಪರೀಕ್ಷೆಗೆ ಓದಿಕೊಳ್ಳಲು ಬಿಡುವು. ಆ ವೇಳೆ ಕಾಲೇಜಿನಲ್ಲಿ ಉಳಿದ ಡಿಗ್ರಿ, ಬ್ಯಾಕ್ ಲಾಗ್ ಪರೀಕ್ಷೆಗಳು ನಡೆಯುತ್ತಿದ್ದವು. ನನ್ನ ತಂದೆ ಅದೇ ತಾಲೂಕಿನ ಇನ್ನೊಂದು ಕಾಲೇಜಿನಲ್ಲಿ ಪ್ರಾಧ್ಯಾಪಕರು. ಅವರಿಗೆ ಸ್ಕ್ವಾಡ್ ಡ್ಯೂಟಿ – ಜಿಲ್ಲೆಯ ಪರೀಕ್ಷಾ ಮೇಲ್ವಿಚಾರಣೆಯ ಜವಾಬ್ದಾರಿ ಆ ವರ್ಷ. ಸರಕಾರೀ ಜೀಪು ಹತ್ತಿ ಜಿಲ್ಲೆಯ ಬೇರೆ ಬೇರೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕಿತ್ತು.

ಅಂತೆಯೇ ಅವರ ಸ್ಕ್ವಾಡ್ ಡ್ಯೂಟಿಯ ಅಶ್ವಮೇಧದ ಜೀಪು ನಮ್ಮ ಕಾಲೇಜಿಗೂ ಬಂದೇಬಿಟ್ಟಿತು. ಅಲ್ಲಿಯವರೆಗೆ ನಾನೆಂದೂ ಪ್ರಾಧ್ಯಾಪಕರ ಮಗ ಎನ್ನುವ ಗುಟ್ಟು ಯಾರಲ್ಲೂ ಬಿಟ್ಟುಕೊಟ್ಟಿರಲಿಲ್ಲ. ಎಲ್ಲ ಮಾಸ್ತರ್ ಮಕ್ಕಳಂತೆ ನಾನು ಕೂಡ ಈ ವಿಷಯವನ್ನು ಶಾಲೆ, ಕಾಲೇಜಿನಲ್ಲಿ ಗೌಪ್ಯವಾಗಿಟ್ಟರೇ ಒಳ್ಳೆಯದೆಂದು ಪಾಲಿಸಿಕೊಂಡು ಬಂದಿದ್ದೆ. ನಮ್ಮ ಕಿತಾಪತಿ, ಹುಡುಗಾಟಿಕೆಯ ಕೆಲಸಗಳಿಗೆ 'ಪಿತ್ರಾರ್ಜಿತ ಗೌರವ' ತಡೆಯಾಗಬಾರದಲ್ಲ. ಅಪ್ಪ ಆ ದಿನ ಕಾಲೇಜಿಗೆ ಬಂದವರು 'ನನ್ನ ಮಗ ಇಲ್ಲಿಯೇ ಕಲಿಯುವುದು, ಈ ಹೆಸರು' ಎಂದಿರಬೇಕು. ನಮ್ಮ ಪ್ರಾಂಶುಪಾಲರು ಕಾಲೇಜಿನ ಎಲ್ಲಾ 'ಎಕ್ಸ್‌ಟ್ರಾ ಕರಿಕ್ಯುಲಂ' ಪಟ್ಟಿಯಲ್ಲಿ ಇರುತ್ತಿದ್ದ ಹೆಸರನ್ನು ತಕ್ಷಣ ಗುರುತಿಸಿಬಿಟ್ಟರು. ಅಷ್ಟೇ ಆಗಿ ಸುಮ್ಮನಿದ್ದರೆ ಮುಗಿಯುತ್ತಿತ್ತು. ಬದಲಿಗೆ ಎಲ್ಲಿಲ್ಲದ ಹುರುಪಿನಿಂದ ನನ್ನ ಪ್ರಿಪರೇಟರಿ ಪರೀಕ್ಷೆಯ ಫಲಿತಾಂಶದ ಅಂಕಪಟ್ಟಿಯನ್ನು ಅಪ್ಪನ ಕೈಗೆ ಕೊಟ್ಟುಬಿಟ್ಟರು. ಅಲ್ಲಿ ನೋಡಿದರೆ ಒಂದಿಷ್ಟು 35, ಇನ್ನೊಂದಿಷ್ಟು 40. ಯಾವುದೂ ಅರ್ಧಶತಕ ದಾಟಿರಲಿಲ್ಲ!

ಅಪ್ಪ ಮನೆಗೆ ಬಂದವರೇ ನನ್ನನ್ನು ಕರೆದರು. 'ಪರೀಕ್ಷೆ ತಯಾರಿ ಹೇಗೆ ನಡೆಯುತ್ತಿದೆ?' ಎಂದು ಕೇಳಿದರು. 'ಚೆನ್ನಾಗಿ ನಡೆಯುತ್ತಿದೆ' ಎಂದೆ. 'ಎಷ್ಟು ಮಾರ್ಕ್ಸ್ ಬರಬಹುದು?' ನಾನು ಉತ್ತರಿಸಲಿಲ್ಲ, 'ಪ್ರಿಪರೇಟರಿ ಪರೀಕ್ಷೆ ಪ್ರಕಾರ? ಡಿಸ್ಟಿಂಕ್ಷನ್ ಬರಬಹುದಾ?' ಎಂದು ಕೇಳಿದರು. ಏನೋ ಸ್ವಲ್ಪ ಉಲ್ಟಾ ಹೊಡೆಯುತ್ತಿದೆಯಲ್ಲ ಎಂದೆನಿಸಿತು. 'ಹೌದು, ಆ ದಿನವೇ ಹೇಳಿದೆನಲ್ಲ, ಪ್ರಿಪರೇಟರಿ ಪರೀಕ್ಷೆ ಚೆನ್ನಾಗಿ ಮಾಡಿದ್ದೇನೆ ಎಂದು.' 'ಇವತ್ತು ಸ್ಕ್ವಾಡ್ ಡ್ಯೂಟಿ – ನಿನ್ನ ಕಾಲೇಜಿಗೆ ಹೋಗಿದ್ದೆ' ಎಂದರು. ಚಿಕ್ಕ ಚೀಟಿಯನ್ನು ಮೇಜಿನ ಮೇಲಿಟ್ಟರು. ಅದರಲ್ಲಿ ಪ್ರಿನ್ಸಿಪಾಲರು ಬರೆದುಕೊಟ್ಟ ನನ್ನ ಮಾರ್ಕ್ಸ್‌ಗಳಿದ್ದವು! ಪ್ರಿಪರೇಟರಿ ಪರೀಕ್ಷೆಯೆಂಬ ಒತ್ತಾಯಕ್ಕೆ ಮಾಡಿದ ಪ್ರತಿಭಟನೆ ಹೀಗೊಂದು ರೂಪ ತಾಳಿಬಿಡುತ್ತದೆ ಎಂಬ ಅಂದಾಜಿರಲಿಲ್ಲ, ಅಪ್ಪ ಹೇಳಿದರು – ನನಗೆ ಮಾರ್ಕ್ಸ್ ಬಗ್ಗೆ ಚಿಂತೆಯಿಲ್ಲ, ಆದರೆ ನಾನು ನನ್ನ ಮಗನನ್ನು ಸುಳ್ಳು ಹೇಳುವಂತೆ ಬೆಳೆಸಿದೆನಲ್ಲ. ನಾನು ತಪ್ಪಿದ್ದೆಲ್ಲಿ ಎಂದು ಯೋಚಿಸಬೇಕಾಗಿದೆ.. ಅವರು ಮತ್ತೇನ್ನೂ ಮಾತಾಡಲಿಲ್ಲ. ಅವರು ಆಮೇಲೆ ಏನು ಯೋಚಿಸಿದರೋ ಗೊತ್ತಿಲ್ಲ. ಆದರೆ ಆ ದಿನ ನಾನು ಮಾತ್ರ ಸಾವಿರ ಬಾರಿ ನಾನೇಕೆ ಸುಳ್ಳು ಹೇಳಿದೆ ಎಂದು ಪ್ರಶ್ನಿಸಿಕೊಂಡೆ. ಹೌದು, ನಾನು ಆ ದಿನ ಏಕೆ ಸುಳ್ಳು ಹೇಳಿದೆ? ಇಷ್ಟು ದಿನ ಏನೇನೋ ಸುಳ್ಳು ಹೇಳಿದೆನಲ್ಲ. ಏಕೆ?

ಮಕ್ಕಳೇಕೆ ಸುಳ್ಳು ಹೇಳುತ್ತಾರೆ? ಮನೆಯ ಏನೋ ಒಂದು ವಸ್ತು ಹಾಳಾಗಿರುತ್ತದೆ, ಗ್ಲಾಸಿನ ವಸ್ತು ಒಡೆದುಹೋಗಿರುತ್ತದೆ. ಅಮ್ಮ 'ನೀನು ಮಾಡಿದ್ದಾ?' ಎಂದು ಗದರಿಸುತ್ತಾಳೆ. 'ಇಲ್ಲ, ನಾನಲ್ಲ ಮಾಡಿದ್ದು' ಎನ್ನುವಾಗ ಮಗುವಿನೊಳಗೆ ಮೂಡುವ ಗೊಂದಲದಿಂದ ಕಣ್ಣು 'ಕೆಳ ಅಡ್ಡ' ಸರಿಯುತ್ತದೆ. ತಕ್ಷಣ ಅಮ್ಮನಿಗೆ ಸುಳ್ಳು ತಿಳಿದುಬಿಡುತ್ತದೆ. ಅಪ್ಪ, ಅಮ್ಮ ಯಾರೇ ಇರಲಿ, ಮಕ್ಕಳ ಸುಳ್ಳನ್ನು ಮಾತ್ರ ಸಹಿಸುವುದಿಲ್ಲ. ತಾವು ಹೇಗೇ ಇರಲಿ, ಎಷ್ಟೇ ಸುಳ್ಳು ಹೇಳಲಿ, ಮಕ್ಕಳು ಮಾತ್ರ ಸತ್ಯಹರಿಶ್ಚಂದ್ರರಾಗಬೇಕು. ಕೋಟೆ ಲೂಟಿ ಮಾಡುವ ರಾಜಕಾರಣಿಗೂ ಮಗನ ಮೊದಲ ಸುಳ್ಳು ತೀವ್ರವಾಗಿಯೇ ಬಾಧಿಸುತ್ತದೆ!

ಸುಳ್ಳು ಎಂದರೆ ಮೋಸ, ಅಪ್ರಾಮಾಣಿಕತನ ಇತ್ಯಾದಿ. ಸರಿ. ಆದರೆ ಒಂದು ಪ್ರಶ್ನೆ. ದೊಡ್ಡವರು ಹೇಳುವ ಸುಳ್ಳು ಮತ್ತು ಚಿಕ್ಕ ಮಕ್ಕಳು ಹೇಳುವ ಸುಳ್ಳು ಎರಡೂ ಒಂದೇ ತೂಕದ್ದೇ? ದೊಡ್ಡವರ ಪ್ರಪಂಚದಲ್ಲಿ ಸುಳ್ಳೆಂದರೆ ಉದ್ದೇಶವಿಟ್ಟು ಮಾಡಿದ ನಿರ್ಧಾರ. ಹೆಚ್ಚಾಗಿ ಪೂರ್ವ ಯೋಜಿತ ಅಥವಾ ಎದುರಿಗಿರುವವರನ್ನು ದಾರಿತಪ್ಪಿಸಲು ಆಯ್ದುಕೊಂಡ ಮಾರ್ಗ. ಆದರೆ ಮಕ್ಕಳಲ್ಲಿ? 'ಇದನ್ನು ಮಾಡಿದ್ದು ನೀನು ಹೌದಾ?' ಎಂದು ಕೇಳಿದಾಗ ಮಕ್ಕಳಲ್ಲಿ ದೊಡ್ಡವರಷ್ಟು ಮುಂದಿನ ಪರಿಣಾಮವನ್ನು ಗ್ರಹಿಸುವ ಚಾಲಾಕಿತನ ಬೆಳೆದಿರುವುದಿಲ್ಲ. ಇಂತಹ ಪ್ರಶ್ನೆ ಎದುರಾದಾಗ ಅವರಲ್ಲಿ ಮೂಡುವ ಪ್ರಶ್ನೆಗಳೇ ಬೇರೆ. ಈಗ ನಾನು ಬೈಸಿಕೊಳ್ಳಬೇಕಾಗುತ್ತದೆಯೇ? ಸತ್ಯ ಹೇಳಿದರೆ ಪ್ರೀತಿಸುವ ಅಪ್ಪ ಅಮ್ಮನ ಕೋಪಕ್ಕೆ ಕಾರಣವಾಗಬಹುದೇ? ಅವರ ಕಣ್ಣಲ್ಲಿ ಕೆಟ್ಟವನಾಗಿ ಕಾಣಿಸಿಬಿಡುತ್ತೇನೆಯೇ? ಆಗ ಅವರ ಮನಸ್ಸು ಲಭ್ಯವಿರುವ, ಅತ್ಯಂತ ವೇಗದಲ್ಲಿ ಸನ್ನಿವೇಶದಿಂದ ತಪ್ಪಿಸಿಕೊಳ್ಳುವ ಸಾಧ್ಯತೆಯನ್ನು ಹುಡುಕುತ್ತದೆ. ಎಲ್ಲರಿಗೂ ಪ್ರಾಮಾಣಿಕತೆಗಿಂತ ಉಳಿವಿನ ಪ್ರಶ್ನೆ ಯಾವತ್ತೂ ದೊಡ್ಡದು. ಸತ್ಯ ಹೇಳಿದರೆ ಮುಂದಿನ ಸನ್ನಿವೇಶ, ಆಗಬಹುದಾದ ಪರಿಣಾಮ ಮಕ್ಕಳಿಗೆ ಅಂದಾಜಿಸಲು ಬರುವುದಿಲ್ಲ. ಪರಿಣಾಮ ಸುಳ್ಳು ಸರಿಯಾದ ಆಯ್ಕೆಯೆನಿಸುತ್ತದೆ.

ಪ್ರಾಮಾಣಿಕತೆ ಮತ್ತು ಸುಳ್ಳು – ನಮ್ಮ ಪ್ರಕಾರ ಎರಡು ವಿರುದ್ಧ ಧ್ರುವಗಳು. ಆದರೆ ಬೆಳೆಯುವ, ಜೀವನ ಕಲಿಯುವ ಪ್ರಕ್ರಿಯೆಯಲ್ಲಿ ಅವೆರಡು ಒಂದೇ ಸಬ್ಜೆಕ್ಟಿನ ಎರಡು ಪಾಠಗಳು. ಸುಳ್ಳು ಹೇಳಬೇಕೆಂದರೆ ಮಗುವಿಗೆ ಮೊದಲು ಉಳಿದವರಲ್ಲಿ ಮನಸ್ಸು, ಯೋಚನೆಗಳಿವೆ ಎನ್ನುವುದು ತಿಳಿಯಬೇಕು. ನಾನು ಇನ್ನೊಬ್ಬರ ಮನಸ್ಸಿನ ಮೇಲೆ ಪ್ರಭಾವ ಬೀರಬಹುದು, ಅದನ್ನು manipulate ಮಾಡಬಹುದು ಎನ್ನುವುದು ಅರ್ಥವಾದಾಗ ಮಾತ್ರ ಮಗುವಿಗೆ ಸುಳ್ಳೊಂದು ಎಸ್ಕೇಪ್ – ಪಾರಾಗುವ ಮಾರ್ಗ ಎನ್ನುವ ತಿಳುವಳಿಕೆ ಬರುವುದು. ಮೊದಲ ಸುಳ್ಳುಗಳು ಮಗುವಿನ ಆ ಪ್ರಯೋಗ. ಆದರೆ ಅದನ್ನು ಕ್ಷಣಮಾತ್ರದಲ್ಲಿ ಕಂಡುಹಿಡಿಯುವ ಪಾಲಕರಾದ ನಾವು ಅವರ ಜೊತೆ ಸ್ಪರ್ಧೆಗಿಳಿದುಬಿಡುತ್ತೇವೆ. 'ನೀನು ಸುಳ್ಳು ಹೇಳಿದರೆ ನನಗೆ ಗೊತ್ತಾಗಿಬಿಡುತ್ತದೆ, ಹಾಗಾಗಿ ಇನ್ನು ಮುಂದೆ ಸುಳ್ಳು ಹೇಳಬೇಡ' ಎಂದು ಗದರಿಸುತ್ತೇವೆ. ಸುಳ್ಳನ್ನು ಕಂಡುಹಿಡಿದ ನಮ್ಮ ಬುದ್ಧಿವಂತಿಕೆಯನ್ನು ಅವರೆದುರು ಕುಹಕ ಸಂಭ್ರಮಿಸುತ್ತೇವೆ.

ಮೇಜಿನ ಮೇಲಿಟ್ಟ ಚಾಕಲೇಟ್ ಮಾಯವಾದಾಗ, 'ನಾನು ತಿಂದಿಲ್ಲ'ವೆನ್ನುವ ಮಗುವಿನ ಮುಗ್ಧ ಸುಳ್ಳು ಅರಿವಿನ ಬೆಳವಣಿಗೆಯ ಮೊದಲ ಲಕ್ಷಣ. ಮಕ್ಕಳು ಸ್ವಲ್ಪ ದೊಡ್ಡವರಾಗುತ್ತಿದ್ದಂತೆ ತಮ್ಮ ತಪ್ಪುಗಳನ್ನು ಗೌಪ್ಯ ಮಾಡುತ್ತಾರೆ. ದೊಡ್ಡವರಾದ ನಾವು ಸುಳ್ಳನ್ನೇ ಹೇಳುವುದಿಲ್ಲ ಎಂದರೂ ಸತ್ಯವನ್ನೇ ಇನ್ನಷ್ಟು ಮೃದುಮಾಡಿ ಹೇಳುತ್ತೇವೆ. ಕಷ್ಟವೆನಿಸುವ ಮಾತುಕತೆಯನ್ನು ಏನೋ ಒಂದು ಫೋಕ್ಲಾಟ್ ಸುಳ್ಳನ್ನು ಹೇಳಿ ತಪ್ಪಿಸಿಕೊಳ್ಳುತ್ತೇವೆ. ಸನ್ನಿವೇಶಗಳಲ್ಲಿ ವಾಕ್ಯವನ್ನು ಯೋಚಿಸಿ, ತೂಗಿ ಪ್ರಯೋಗಿಸುತ್ತೇವೆ. ಮಕ್ಕಳು ಮಾಡುವುದೂ ಅದನ್ನೇ. ಆದರೆ ಮಕ್ಕಳದ್ದು ಪರಿಷ್ಕೃತವಲ್ಲದ, ಯೋಜಿತವಲ್ಲದ ಸುಳ್ಳು. ಅಪರಿಷ್ಕೃತ, ಬಾಲಿಶ. ಹಾಗಾಗಿಯೇ ಮುಗ್ಧ.

ಮಕ್ಕಳ ಸುಳ್ಳನ್ನು ಅಲಕ್ಷಿಸುವುದು, ನಿರ್ಲಕ್ಷಿಸುವುದು ಕೂಡ ಪರಿಹಾರವಲ್ಲ. ಸುಳ್ಳು ಸಿಕ್ಕಿಬಿದ್ದ ಸನ್ನಿವೇಶದಲ್ಲಿ – ಪಾಲಕರು ಹೇಳಿದ ಮೌಲ್ಯಗಳನ್ನಷ್ಟೇ ಮಕ್ಕಳು ಕೇಳುವುದಿಲ್ಲ. ಜೊತೆಯಲ್ಲಿ 'ನಾನು ಏನನ್ನು ಹೇಳಿದರೆ ಏನಾಗುತ್ತದೆ? ಯಾವ ರೀತಿ, ಹೇಗೆ ಹೇಳಿದರೆ ಯಾವುದಕ್ಕೆ ಯಾವ ಪರಿಣಾಮ?' ಎನ್ನುವುದನ್ನು ಮಕ್ಕಳು ಆಗಲೇ ಕಲಿಯುವುದು. ಸತ್ಯಕ್ಕೆ ಸಿಟ್ಟು, ಅವಮಾನ, ಕಠಿಣ ಶಿಸ್ತುಕ್ರಮ ಎದುರಾದಾಗ ಪ್ರಾಮಾಣಿಕತನ ಎಂದರೆ ಅಪಾಯ ಎಂಬುದು ಸಮೀಕರಣ. ಒಮ್ಮೆ ಕಲಿತ ಈ ಸಮೀಕರಣ ಅಷ್ಟು ಸುಲಭದಲ್ಲಿ ಮಕ್ಕಳು ಮರೆಯುವುದಿಲ್ಲ.

ಮಕ್ಕಳು ಸುಳ್ಳು ಹೇಳಿ ಸಿಕ್ಕಿಬಿದ್ದಾಗ, 'ಸುಳ್ಳೇಕೆ ಹೇಳಿದೆ?' ಎಂದು ಸಿಟ್ಟಿನಿಂದ ಪ್ರತಿಕ್ರಿಯಿಸುವ ಬದಲು 'ಏನಾಯ್ತು?

ವಿವರಿಸುವೆಯಾ?' ಎಂದು ಕುತೂಹಲದಿಂದ, ಶಾಂತತೆಯಿಂದ ಕೇಳಿದಾಗ ಮಾತ್ರ ಸತ್ಯದ ಮೇಲೊಂದು ಭರವಸೆ ಅವರಲ್ಲಿ ಮೂಡುತ್ತದೆ. ಮಕ್ಕಳು ಪ್ರಮಾಣಿಕತೆಯನ್ನು ಕಲಿಯುವುದು ಗದರಿಕೆ ಅಥವಾ ಬೋಧನೆಯಿಂದಲ್ಲ, ಭಾವನಾತ್ಮಕ ರಕ್ಷಣೆಯ ಭರವಸೆ ಇದ್ದಲ್ಲಿ ಮಾತ್ರ ಪ್ರಾಮಾಣಿಕತೆ ಸುಲಭದ ಮಾರ್ಗವೆನಿಸುತ್ತದೆ. ಪ್ರಾಮಾಣಿಕತೆಯ ಮೇಲೆ ನಂಬಿಕೆ ಮೂಡುತ್ತದೆ. 'ಸುಳ್ಳೇಕೆ ಹೇಳಿದೆ?' ಇದು ಪಾಲಕರ ಪ್ರಾಮಾಣಿಕ ಪ್ರಶ್ನೆ. ಆದರೆ ಅದಕ್ಕುತ್ತರ ನೀಡುವ ಪ್ರೌಢತೆ ಮಕ್ಕಳಲ್ಲಿ ಬೆಳೆದಿರುವುದಿಲ್ಲ. ಮಕ್ಕಳೇನಿದ್ದರೂ ನಡೆದ ಘಟನೆಯನ್ನು ಮಾತ್ರ ವಿವರಿಸಬಲ್ಲರು. ಸರಿಯಾಗಿ ಕೇಳಬೇಕಷ್ಟೆ!

ಬಹುತೇಕ ಪಾಲಕರಲ್ಲಿ ಒಂದು ದೊಡ್ಡ ತಪ್ಪು ತಿಳುವಳಿಕೆ ಇದೆ. ಸ್ಟ್ರಿಕ್ಟ್ – ತಂದೆ ತಾಯಿ ಬೇಕಾದಷ್ಟು ಕಟ್ಟುನಿಟ್ಟು ಇದ್ದರೆ ಮಕ್ಕಳು ಪ್ರಾಮಾಣಿಕರಾಗಿಬಿಡುತ್ತಾರೆ, ಪ್ರಾಮಾಣಿಕತೆಯ ಕೊರತೆ ಎಂದರೆ ಅದು ಪಾಲಕರ ಶಿಸ್ತಿನ, ಕಟ್ಟುನಿಟ್ಟಿನ ಕೊರತೆ ಎಂದು. ಕಟ್ಟುನಿಟ್ಟುತನ ಅವಶ್ಯಕ, ಇರಲೇಬೇಕು. ಆದರೆ ಅದರ ಜೊತೆ Emotional Predictability (ಭಾವ ಭರವಸೆ – ಸತ್ಯ ಹೇಳಿದರೆ ಅಪಾಯವಿಲ್ಲ ಎಂಬ ನಂಬಿಕೆ) ಎಲ್ಲಕ್ಕಿಂತ ಮುಖ್ಯ. ಅದುವೆ ಮಕ್ಕಳ ಸತ್ಯ ಸುಳ್ಳಿನ ನಡುವಿನ ಆಯ್ಕೆಯನ್ನು ನಿರ್ದೇಶಿಸುವುದು. ಅತಿಯೆನಿಸುವಷ್ಟು ಶಿಸ್ತಿನಿಂದ ಬೆಳೆಸಿದ ಮಕ್ಕಳು ಚತುರ ಸುಳ್ಳುಗಾರರಾಗುವುದು Emotional Predictability ಕೊರತೆಯಿದ್ದಲ್ಲಿ. ಪಾಲಕರ ಪ್ರತಿಕ್ರಿಯೆಯನ್ನು ಸರಿಯಾಗಿ ಊಹಿಸಲು ಸಾಧ್ಯವಾದಾಗ ಮಾತ್ರ ಸತ್ಯ ಅಪಾಯವಲ್ಲ ಎಂದೆನ್ನಿಸುವುದು. ಸುಳ್ಳು ತಿಳಿದಾಗ ಪಾಲಕರು ಒಮ್ಮೆ ಸಿಟ್ಟು, ಇನ್ನೊಮ್ಮೆ ತಾತ್ಸಾರ, ಮತ್ತೊಮ್ಮೆ ಕ್ಷಮೆ ಈ ರೀತಿ ಒಂದೊಂದು ಬಾರಿ ಒಂದೊಂದು ವ್ಯವಹರಿಸಿದಾಗ ಮಕ್ಕಳು ಗೊಂದಲಕ್ಕೊಳಗಾಗುತ್ತಾರೆ. ಕೇವಲ ದಿನಕ್ಕೊಂದು ನೀತಿ ಕಥೆ ಹೇಳಿದರೆ ಮಕ್ಕಳು ನೀತಿವಂತರಾಗಿ ಬಿಡುವುದಿಲ್ಲ ! 'ಸುಳ್ಳು ಹೇಳಿದೆಯಾ?' ಎಂಬುದು ಮೊಕದ್ದಮೆಯಾಗುವ ಬದಲು ಕುತೂಹಲದ, ಭರವಸೆಯ ಪ್ರಶ್ನೆಯಾದಾಗ ಮಾತ್ರ ಸತ್ಯಕ್ಕೊಂದು ಅವಕಾಶ ನಿರ್ಮಾಣವಾಗುತ್ತದೆ. ಎಲ್ಲ ಮಕ್ಕಳ ಎಲ್ಲಾ ಸುಳ್ಳುಗಳೂ ಒಂದೇ ಅಲ್ಲ. ಕೆಲವು ಅವರ ಪ್ರಯೋಗ, ಕೆಲವು ಅವರ ಕಲ್ಪನೆ, ಕೆಲವೊಮ್ಮೆ ಸಾಂದರ್ಭಿಕ, ತಕ್ಷಣದ ಪರಿಹಾರ ಇತ್ಯಾದಿ. ಪಾಲಕರು ಮಕ್ಕಳ ಸುಳ್ಳಿಗಿಂತ ಗ್ರಹಿಸಬೇಕಾದದ್ದು ಅದು ಮರುಕಳಿಸುವ ರೀತಿಯನ್ನು. ಅಪರೂಪಕ್ಕೆ ಸುಳ್ಳು ಹೇಳುವುದು ಮುಗ್ಧ. ಅದುವೆ ಅಭ್ಯಾಸವಾಗಿದ್ದಲ್ಲಿ, ಸುಳ್ಳು ಭಾವರಹಿತವಾಗಿ ಹೇಳುತ್ತಿದ್ದಲ್ಲಿ ಅದು ಸಮಸ್ಯೆ. ಆಗ ಪಾಲಕರ ಆತ್ಮಾವಲೋಕನವಾಗಬೇಕು.

ಸುಳ್ಳನ್ನೇ ಹೇಳದ ಮಕ್ಕಳನ್ನು ಬೆಳೆಸುವುದು ಪಾಲನೆಯ ಗುರಿಯಾಗಿಸಿಕೊಳ್ಳಬಾರದು. ಎಲ್ಲ ಕಾಲಕ್ಕೂ ಸತ್ಯವನ್ನೇ ಹೇಳುವ ಕಥೆಯಲ್ಲಷ್ಟೇ ಚಂದ, ಸರಿ. ನಿಜ ಜೀವನದಲ್ಲಿ ಸತ್ಯವನ್ನೇ ಹೇಳಿಕೊಂಡಿದ್ದರೆ ಬದುಕು ಹೀಗಾಗುತ್ತದೆ ಎನ್ನುವುದೂ ಸತ್ಯಹರಿಶ್ಚಂದ್ರನ ಕಥೆ ಹೇಳುವ ಸತ್ಯವೇ ಅಲ್ಲವೇ? ಸತ್ಯಹರಿಶ್ಚಂದ್ರನ ಗುಣ ಮಾದರಿ, ಆದರೆ ಅದು ಮಾನವಸಹಜವಲ್ಲ ಅಲ್ಲವೇ? ಪಾಲನೆಯ ಉದ್ದೇಶ ಒಳ್ಳೆಯ ಇನ್ನೊಂದು ಮನುಷ್ಯನನ್ನು ಬೆಳೆಸುವುದು. ಸತ್ಯ ಹೇಳಲು ಹೆದರದ ಮಕ್ಕಳನ್ನು ಬೆಳೆಸುವುದು. ಯಾವುದೇ ತಪ್ಪನ್ನು ರಿಪೇರಿ ಮಾಡಿಕೊಳ್ಳಲು ಸಾಧ್ಯವೆಂಬ ನಂಬಿಕೆ ಬೆಳೆಯಲು ಅವಕಾಶ ಮಾಡಿಕೊಡುವುದು. ಪ್ರಮಾಣಿಕತೆ ಎನ್ನುವುದು ಪರಿಪೂರ್ಣತೆಯಲ್ಲ, ಅದು ನಂಬಿಕೆಯ ವಿಷಯ. ನಾವು ದೊಡ್ಡವರು ಯಾರಲ್ಲಿ ಸುಳ್ಳು ಹೇಳುತ್ತೇವೆ? ಯಾರಲ್ಲಿ ಯಾವಾಗ ಸತ್ಯಹೇಳುತ್ತೇವೆ? ಎಂದು ಒಮ್ಮೆ ಯೋಚಿಸಿ ನೋಡಿ. ಯಾರಲ್ಲಿ ಭಾವಭರವಸೆ ಇರುತ್ತದೆಯೋ, ಅವರಲ್ಲಿಯೇ ನಾವು ಸತ್ಯ ಇದ್ದದ್ದು ಇದ್ದ ಹಾಗೆ ಹೇಳುವುದು ಅಲ್ಲವೇ?

ಪ್ರಾಮಾಣಿಕತೆ, ನೈತಿಕತೆ, ಅಪರಾಧಭಾವ, ಸತ್ಯ– ಸುಳ್ಳು ಇದೊಂದಿಷ್ಟು ವಿಷಯದ ಬಗ್ಗೆ ಹೇಳುವಾಗ, 'ಗಾಂಧೀಜಿ ಹಣ, ಚಿನ್ನ ಕದ್ದು ಬೀಡಿ ಸೇದಿದ ಕಥೆ' ನೆನಪು ಮಾಡಿಕೊಳ್ಳುತ್ತೇವೆ. ಇನ್ನೊಂದು ಅಷ್ಟು ಪ್ರಚಲಿತವಲ್ಲದ ಕಥೆಯಿದೆ. ಇದು ಗಾಂಧೀಜಿ ಮಗ ಮತ್ತು ಮೊಮ್ಮಗನದ್ದು.

ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ವಾಪಸ್ ಭಾರತಕ್ಕೆ ಬಂದಾಗ ಅವರ ಮಗ ಮಣಿಲಾಲ್ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿಯೇ ಉಳಿದುಕೊಳ್ಳುತ್ತಾರೆ. ಅಲ್ಲಿಯೇ ಇದ್ದು 'ಇಂಡಿಯನ್ ಒಪೀನಿಯನ್' ಪತ್ರಿಕೆ ಮತ್ತು ಉಳಿದ ಕೆಲಸ, ವ್ಯವಹಾರವನ್ನು ಮಣಿಲಾಲ್ ಮುಂದುವರಿಸಿಕೊಂಡು ಹೋಗುತ್ತಾರೆ. ಒಮ್ಮೆ ಮಣಿಲಾಲರಿಗೆ ಜೊಹಾನ್ಸ್ ಬರ್ಗ್‌ನಲ್ಲಿ ದಿನವಿಡೀ ಮೀಟಿಂಗ್ ಇರುತ್ತದೆ. ಆಗ ಅವರ ಮಗ ಅರುಣ್ ಗಾಂಧಿಯಲ್ಲಿ ತಮ್ಮನ್ನು ಕಾರಿನಲ್ಲಿ ಡ್ರೈವ್ ಮಾಡಿಕೊಂಡು ಕರೆದುಕೊಂಡು ಹೋಗಲು ಹೇಳುತ್ತಾರೆ. ಅಪ್ಪ ಮೀಟಿಂಗ್‌ನಲ್ಲಿ ಭಾಗವಹಿಸುವ ವೇಳೆ ಕಾರು ಸರ್ವೀಸ್ ಮಾಡಿಸಿದರಾಯ್ತು ಎಂದು ಅವರಿಬ್ಬರು ಹೊರಡುತ್ತಾರೆ.

ಅರುಣ್ ಗಾಂಧಿ ಈ ಘಟನೆಯನ್ನು ಬರೆದುಕೊಂಡದ್ದು ಹೀಗೆ : ನಾನು ತಂದೆಯನ್ನು ಅಲ್ಲಿ ಬಿಟ್ಟು, ಕಾರ್ ಅನ್ನು ರಿಪೇರಿಗೆ ಗ್ಯಾರೇಜ್‌ನಲ್ಲಿ ಬಿಟ್ಟೆ. ಅಪ್ಪನ ಮೀಟಿಂಗ್ ಮುಗಿಯುವುದು ಸಂಜೆ ಐದಕ್ಕೆ. ಅಲ್ಲಿಯವರೆಗೆ ಏನು ಮಾಡುವುದು? ಹಾಗಾಗಿ ಅಲ್ಲಿಯೇ ಇದ್ದ ಸಿನಿಮಾ ಒಂದಕ್ಕೆ ಹೋದೆ. ಆ ದಿನ ಒಂದೇ ಟಿಕೆಟ್– ಒಂದರ ಬೆನ್ನಿಗೆ ಇನ್ನೊಂದು, ಎರಡು ಸಿನಿಮಾ ನೋಡುವ ಡಬಲ್ ಫೀಚರ್ ಇತ್ತು. ಎರಡು ಸಿನಿಮಾ ಮುಗಿಯುವಾಗ ಆರು ಗಂಟೆಯಾಗಿ ಹೋಯ್ತು ! ಬೆಳಗ್ಗೆ ಹೊರಡುವಾಗ ತಂದೆಯಲ್ಲಿ ಇಂತಹ ರಸ್ತೆಯ ಮೂರ್ಕಿಯಲ್ಲಿ ನಿಂತಿರುತ್ತೇನೆ ಎಂದು ಹೇಳಿದ್ದೆ. ಕಾರನ್ನು ಓಡಿಸಿಕೊಂಡು ಗಡಿಬಿಡಿಯಲ್ಲಿ ಹೋದೆ. ಜೋರಾಗಿ ಮಳೆ ಸುರಿಯುತ್ತಿತ್ತು. ಅಪ್ಪ ಅಲ್ಲಿ ಮಳೆಯಲ್ಲಿ ನೆನೆಯುತ್ತ ನಿಂತಿದ್ದರು. ಓಡೋಡಿ ಅವರ ಬಳಿ ಹೋಗಿ, ಅಪ್ಪಾ ಕ್ಷಮಿಸಿ, ಕಾರ್ ಗ್ಯಾರೇಜ್‌ನವನು ಅಂದುಕೊಂಡದ್ದಕ್ಕಿಂತ ಹೆಚ್ಚಿಗೆ ಸಮಯ ತೆಗೆದುಕೊಂಡುಬಿಟ್ಟ ಎಂದೆ. ಅಪ್ಪ ಮಾತಾಡಲಿಲ್ಲ. ಬದಲಿಗೆ ತಲೆತಗ್ಗಿಸಿದರು. ನೀನಿನ್ನೂ ಬರಲಿಲ್ಲವಲ್ಲ ಎಂದು ಗ್ಯಾರೇಜ್‌ನವನಿಗೆ ಫೋನ್ ಮಾಡಿದೆ. ಅವನು ಮೂರು ಗಂಟೆಗೆಲ್ಲ ಕಾರು ರೆಡಿಯಾಗಿದೆ ಎಂದ. ವಿಷಯ ಅದಲ್ಲ – ನಾನೀಗ ಗಂಭೀರವಾಗಿ ಒಂದು ವಿಷಯವನ್ನು ಯೋಚಿಸಬೇಕಾಗಿದೆ. ಸುಳ್ಳು ಹೇಳದ ಮಗನನ್ನು ಬೆಳೆಸುವಲ್ಲಿ ನಾನೆಲ್ಲಿ ಸೋತೆ? ಎಂದು ಧ್ಯಾನಿಸಬೇಕಾಗಿದೆ. ಅಪ್ಪ ಆ ದಿನ ಕಾರು ಹತ್ತಲಿಲ್ಲ, ಮಳೆಯಲ್ಲಿ ನಡೆದುಕೊಂಡೇ ಹೊರಟರು. ನಾನು ಕಾರೊಳಗೆ ಅವರನ್ನು ಮನೆಯವರೆಗೆ ಹಿಂಬಾಲಿಸಿದೆ. ನಾವಿಬ್ಬರು ಮನೆ ಸೇರಿದಾಗ ನನ್ನ ಅಂಗಿ ಅವರಿಗಿಂತ ಹೆಚ್ಚು ತೊಯ್ದಿತ್ತು !

Honesty is not built through instructions. It is built through emotional safety.

ಚುನಾವಣೆ ಗೆಲ್ಲಲು ಆಮಿಷಗಳ ಕಂತೆ, ಯಾರಿಗೂ ಇಲ್ಲ ಚಿಂತೆ!

ಮನಿಮ್ಯಾಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ತಮಿಳುನಾಡಿನ ಪ್ರಾಚೀನ ದೇವಾಲಯಗಳ ಅತ್ಯುನ್ನತ ಗೋಪುರಗಳು, ಸಾವಿರಾರು ವರ್ಷ ಹಿಂದಿನ ಅಣೆಕಟ್ಟೆ, ಕೆರೆ–ಕೊಳಗಳು, ಅಲ್ಲಿನ ವೈವಿಧ್ಯಮಯ ಕಾರ್ಖಾನೆಗಳು ಸಮಸ್ತ ಭಾರತೀಯರಿಗೇ ಹೆಮ್ಮೆಯನ್ನು ಮೂಡಿಸುತ್ತದೆ. ಚೋಳರ ಕಾಲದಲ್ಲಿ, ವಿಶೇಷವಾಗಿ 9ರಿಂದ 13ನೇ ಶತಮಾನದ ತನಕ ತಮಿಳುನಾಡಿನಲ್ಲಿ ಸುಸಜ್ಜಿತವಾದ ನೌಕಾಪಡೆ ಇತ್ತು. ಸಮುದ್ರದಲ್ಲಿ ಚೋಳರ ಪ್ರಾಬಲ್ಯ ಎಷ್ಟಿತ್ತೆಂದರೆ ಬಂಗಾಳ ಕೊಲ್ಲಿಯನ್ನು ಚೋಳರ ಕೆರೆ ಎಂದು ಕರೆಯಲಾಗುತ್ತಿತ್ತು. ರಾಜೇಂದ್ರ ಚೋಳ ತನ್ನ ಬೃಹತ್ ನೌಕಾಪಡೆಯನ್ನು ಸಮುದ್ರದಾಚೆಗಿನ ಶ್ರೀ ವಿಜಯ ಸಾಮ್ರಾಜ್ಯಕ್ಕೆ (ಇಂದಿನ ಇಂಡೊನೇಷ್ಯಾ, ಮಲೇಷ್ಯಾ ಮತ್ತು ಸುಮಾತ್ರಾ) ಕಳಿಸಿ, ದಂಡೆತ್ತಿ ಅಲ್ಲಿನ ರಾಜರುಗಳನ್ನು ಸೋಲಿಸಿ ವ್ಯಾಪಾರ ಮಾರ್ಗಗಳ ಮೇಲೆ ನಿಯಂತ್ರಣ ಸಾಧಿಸಿದ್ದ. ಕೇವಲ ನೌಕಾಪಡೆಯನ್ನು ಕಟ್ಟಿದ್ದು ಮಾತ್ರವಲ್ಲ, ಪ್ರಾಚೀನ ತಮಿಳರ ಎಂಜಿನಿಯರಿಂಗ್ ಕೌಶಲ ಇಂದಿಗೂ ವಿಸ್ಮಯಕಾರಿಯಾಗಿದೆ! ಯಾವುದೇ ಆಧುನಿಕ ಯಂತ್ರೋಪಕರಣಗಳು, ಕ್ರೇನುಗಳು ಇಲ್ಲದೆಯೇ ತಾಂಜಾವೂರಿನ ಬೃಹತ್ ದೇವಾಲಯವನ್ನು ಹೇಗೆ ಕಟ್ಟಿದರು ಎಂಬುದು ಈಗಲೂ ನಿಗೂಢ. ವಾಸ್ತುಶಿಲ್ಪದ ಭವ್ಯತೆಗೆ ಸಾಕ್ಷಿ. ತಮಿಳುನಾಡಿನ ತಾಂಜಾವೂರು ಜಿಲ್ಲೆಯಲ್ಲಿ ಕಳನ್ನೈ ಎಂಬ ಪ್ರಾಚೀನ ಅಣೆಕಟ್ಟೆ ಇದೆ. ಇದನ್ನು 1800 ವರ್ಷಗಳ ಹಿಂದೆ ಚೋಳರ ಕಾಲದಲ್ಲಿ ನಿರ್ಮಿಸಲಾಗಿತ್ತು. ಇಂದಿಗೂ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ! ಬ್ರಿಟಿಷರು ಇದನ್ನೊಮ್ಮೆ ನವೀಕರಣ ಮಾಡಿದ್ದರು ಅಷ್ಟೇ. ಆದರೆ ನೀರಾವರಿಗೆ ಇಂದಿಗೂ ಅಣೆಕಟ್ಟೆ ಬಳಕೆಯಲ್ಲಿರುವುದು ವಿಶೇಷ. ಅಭಿವೃದ್ಧಿಪರ ಯೋಜನೆಗಳು ಶಾಶ್ವತವಾಗಿ ಜನೋಪಕಾರಿಯಾಗಿರುತ್ತವೆ ಎಂಬುದಕ್ಕೆ ಇದು ನಿದರ್ಶನ.

ಆದರೆ ಸ್ವಾತಂತ್ರ್ಯಾನಂತರ ಅಲ್ಲಿ ಡಿಎಂಕೆ ಮತ್ತು ಇತರ ದ್ರಾವಿಡ ಪಕ್ಷಗಳು ಪರಿಚಯಿಸಿದ ಪುಕ್ಕಟೆ ಯೋಜನೆಗಳು ಕೆಟ್ಟ ಚಾಳಿಯಾಗಿ ಹರಡಿರುವುದು ದುರ್ದೈವವೇ ಸರಿ. ಭಾರತದ ರಾಜಕೀಯ ರಂಗದಲ್ಲಿ ಉಚಿತ ಕೊಡುಗೆಗಳು ಮತ್ತು ಆಮಿಷಗಳನ್ನು ಘೋಷಿಸುವ ಮೂಲಕ ಅಧಿಕಾರದ ಗದ್ದುಗೆಯನ್ನು ಸುಲಭವಾಗಿ ಹೇಗೆ ಏರಬಹುದು? ಎಂಬುದಕ್ಕೆ ಕಳೆದ ಹಲವು ದಶಕಗಳಿಂದಲೂ ಪ್ರಯೋಗಶಾಲೆಯಂತಿರುವ ರಾಜ್ಯ ಯಾವುದಾದರೂ ಇದ್ದರೆ ಅದು ನಿಸ್ಸಂದೇಹವಾಗಿ ತಮಿಳುನಾಡು. ಆಮ್ ಆದ್ಮಿಯ ಕೇಜ್ರಿವಾಲರೂ ಇದರಿಂದ ಉತ್ತೇಜಿತರಾಗಿ ದಿಲ್ಲಿಯಲ್ಲಿ ಜಾರಿಗೊಳಿಸಿದ್ದರು. ನಟ ಜೋಸೆಫ್ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ಇವೆಲ್ಲಕ್ಕೂ ಕಲಶಪ್ರಾಯದಂತೆ ಭರ್ಜರಿ ಪುಕ್ಕಟೆ ಸ್ಕೀಮುಗಳನ್ನು ಘೋಷಿಸಿ, ಇತಿಹಾಸ ನಿರ್ಮಿಸಿದ್ದಾರೆ. ಉಳಿದ ದ್ರಾವಿಡ ಪಕ್ಷಗಳನ್ನು ಬೆಚ್ಚಿಬೀಳಿಸಿದ್ದಾರೆ.

ಉದಾಹರಣೆಗೆ ಮಹಿಳೆಯರಿಗಾಗಿ ಟಿವಿಕೆಯ ಪುಕ್ಕಟೆ ಸ್ಕೀಮ್‌ಗಳ ವೈಭವವನ್ನು ನೋಡಿ!

ಪ್ರತಿ ತಿಂಗಳು ಕುಟುಂಬದ ಮಹಿಳಾ ಮುಖ್ಯಸ್ಥರಿಗೆ 2,500 ರುಪಾಯಿ ನೇರ ನಗದು ವರ್ಗಾವಣೆ. ರಾಜ್ಯಾದ್ಯಂತ ಸರಕಾರಿ ಬಸ್ ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ. ಪ್ರತಿ ಕುಟುಂಬಕ್ಕೆ ವರ್ಷಕ್ಕೆ 6 ಅಡುಗೆ ಅನಿಲ ಸಿಲಿಂಡರ್ ಉಚಿತ. ಬಡ ಕುಟುಂಬದ ವಧುವಿಗೆ ಮದುವೆಯ ಸಂದರ್ಭದಲ್ಲಿ 8 ಗ್ರಾಮ್ ಚಿನ್ನ (ಒಂದು ಗ್ರಾಮ್‌ಗೆ 1 ಲಕ್ಷದ 10 ಸಾವಿರ ರುಪಾಯಿ ದರ ಇದೆ), ರೇಷ್ಮೆ ಸೀರೆ ಉಚಿತ, ಮಗು ಜನಿಸಿದಾಗ ಚಿನ್ನದ ಉಂಗುರ, ಬೇಬಿ ವೆಲ್ಕಂ ಕಿಟ್ ಸಿಗಲಿದೆ.

ಉಳಿದಂತೆ ಪ್ರತಿ ಮನೆಗೆ ಮಾಸಿಕ 200 ಯುನಿಟ್ ಉಚಿತ ವಿದ್ಯುತ್, ಹಿರಿಯ ನಾಗರಿಕರು, ವಿಧವೆಯರು, ವಿಕಲಚೇತನರಿಗೆ 3,000 ರುಪಾಯಿ ಪಿಂಚಣಿ, ರೈತರಿಗೆ ಸಾಲ ಮನ್ನಾ, ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ಹೀಗೆ ಲಿಸ್ಟ್ ಇನ್ನೂ ದೊಡ್ಡದಿದೆ. ಚುನಾವಣೆಯನ್ನು ಗೆಲ್ಲಲು ಆಮಿಷಗಳೇ ಈಗ ಪಕ್ಷಗಳಿಗೆ ಸುಲಭದ ತಂತ್ರವಾಗಿದೆ. ಏನಾದರೂ ಆಗುವುದಿದ್ದರೆ ಗೆದ್ದ ನಂತರ ನೋಡೋಣ ಎಂಬ ಹುಂಬತನ. ಇವುಗಳ ದೂರಗಾಮಿ ಪರಿಣಾಮಗಳ ಬಗ್ಗೆ ಯೋಚಿಸಲು ಯಾವುದೇ ಪಕ್ಷಗಳಿಗೆ ಈಗ ಪುರುಸೊತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಹಿಂದಿನಿಂದಲೂ ಇಂಥಾ ಆಮಿಷಗಳನ್ನು ಬಲವಾಗಿ ಖಂಡಿಸುತ್ತಿದ್ದರು. 'ರೇವಡಿ ಸಂಸ್ಕೃತಿ' ಒಳ್ಳೆಯದಲ್ಲ, ದೇಶದ ಅಭಿವೃದ್ಧಿಗೆ ಅತ್ಯಂತ ಮಾರಕ ಎನ್ನುತ್ತಿದ್ದರು. ಆದರೆ ಚುನಾವಣೆಯ ತಂತ್ರಗಾರಿಕೆಯ ವಿಚಾರಕ್ಕೆ ಬಂದಾಗ ಬಿಜೆಪಿ ಕೂಡ ಆಮಿಷಗಳನ್ನು ಒಡ್ಡಿದೆ. ಚುನಾವಣೆ ಸಮೀಪದಲ್ಲಿರುವಾಗ ನೇರ ನಗದು ವರ್ಗಾವಣೆಯನ್ನು ಹೆಚ್ಚಿಸುವುದು ಮತ್ತೊಂದು ತಂತ್ರ. ಬಿಹಾರದಲ್ಲಿ ಎನ್‌ಡಿಎ ಎಲೆಕ್ಷನ್ ಹತ್ತಿರವಿದ್ದಾಗ 75 ಲಕ್ಷ ಮಹಿಳೆಯರಿಗೆ ತಲಾ 10,000 ರುಪಾಯಿಗಳನ್ನು ವಿತರಿಸಿತ್ತು. ಮಹಿಳೆಯರ ಉದ್ಯಮಶೀಲತೆ ಹೆಚ್ಚಿಸಲು ಇದು ಸಹಾಯಕ ಎಂದು ಸಮರ್ಥಿಸಿಕೊಳ್ಳಲಾಗಿತ್ತು. ಆದರೆ ಈ ವಿಚಾರದಲ್ಲಿ ತಮಿಳುನಾಡಿನ ಪಕ್ಷಗಳು ಎಲ್ಲಕ್ಕಿಂತ ಒಂದು ಕೈ ಮೇಲು. ಡಿಎಂಕೆ ಇತ್ತೀಚಿನ ಅಸೆಂಬ್ಲಿ ಚುನಾವಣೆಗೆ ಮುನ್ನ 1.31 ಕೋಟಿ ಮಹಿಳೆಯರಿಗೆ 5,000 ರುಪಾಯಿಗಳನ್ನು ವಿತರಿಸಿತ್ತು.

ತಮಿಳುನಾಡಿನಲ್ಲಿ 1967ರ ವಿಧಾನಸಭೆ ಚುನಾವಣೆ ಸಂದರ್ಭ ಡಿಎಂಕೆ ಸ್ಥಾಪಕರಾದ ಸಿಎನ್ ಅಣ್ಣಾದುರೈ ಅವರು, ರೇಷನ್ ಅಂಗಡಿಗಳಲ್ಲಿ 1 ರುಪಾಯಿಗೆ ಅಕ್ಕಿ ನೀಡುವುದಾಗಿ ಘೋಷಿಸಿದ್ದರು. ಆಗ ರಾಜ್ಯದಲ್ಲಿ ಭೀಕರ ಬರಗಾಲವಿದ್ದರಿಂದ ಜನರ ಮೇಲೆ ಪ್ರಭಾವ ಬೀರಿತ್ತು. ಇದರ ಪರಿಣಾಮ ಡಿಎಂಕೆಯು ಕಾಂಗ್ರೆಸ್ ಅನ್ನು ಸೋಲಿಸಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿತ್ತು. ಅಣ್ಣಾ ದೊರೈ ಮುಖ್ಯಮಂತ್ರಿಯಾದರು. ಚುನಾವಣೆಯಲ್ಲಿ ಗೆದ್ದ ಬಳಿಕ ಕೆಲಕಾಲ ನಡೆಸಿ ಬಳಿಕ ಸ್ಥಗಿತಗೊಳಿಸಿದರು. ಎಐಎಡಿಎಂಕೆ ಸ್ಥಾಪಕ ಎಂಜಿ ರಾಮಚಂದ್ರನ್ 1982ರಲ್ಲಿ ಐತಿಹಾಸಿಕ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೊಳಿಸಿದರು. ಇದರ ಉದ್ದೇಶ ಅರ್ಥಪೂರ್ಣವಾಗಿತ್ತು. ಬಡ ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಸಹಕಾರಿಯಾಯಿತು. 2006ರಲ್ಲಿ ಡಿಎಂಕೆ ಉಚಿತ ಟಿವಿ, 2 ರುಪಾಯಿಗೆ ಕೆಜಿ ಅಕ್ಕಿ, ಉಚಿತ ವಿದ್ಯುತ್, ಗ್ಯಾಸ್, ಸಾಲ ಮನ್ನಾ ಘೋಷಿಸಿತು. 2011ರಲ್ಲಿ ಎಐಎಡಿಎಂಕೆ ಮತ್ತು ಡಿಎಂಕೆ ಪಕ್ಷಗಳು ಪೈಪೋಟಿಗೆ ಬಿದ್ದು ಮಿಕ್ಸರ್, ಗ್ರೈಂಡರ್, ಲ್ಯಾಪ್‌ಟಾಪ್, ಯುನಿಫಾರ್ಮ್ಸ್, ಕೇಬಲ್ ಟಿವಿ ಕೊಟ್ಟವು. 2013ರಲ್ಲಿ ಅಮ್ಮಾ ಕ್ಯಾಂಟೀನ್ ಬಂತು.

ಬಡವರು, ಜನ ಸಾಮಾನ್ಯರಿಗೆ ತಾತ್ಕಾಲಿಕ ನೆರವು ನೀಡುವುದು ಸ್ವಾಗತಾರ್ಹ. ಆದರೆ ಇದರಿಂದ ದೂರಗಾಮಿಯಾಗಿ ರಾಜ್ಯಗಳ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಸಾಲ ಹೆಚ್ಚುತ್ತದೆ. ಅಭಿವೃದ್ಧಿ ಪರ ಯೋಜನೆಗಳು ಹಿಂದುಳಿಯುತ್ತವೆ. ತಮಿಳುನಾಡು ಸರಕಾರದ ಸಾಲ 2026ರ ವೇಳೆಗೆ 9.52 ಲಕ್ಷ ಕೋಟಿ ರುಪಾಯಿಗೆ ಏರಿಕೆಯಾಗಿದೆ.

ಆಮ್ ಆದ್ಮಿ, ಕಾಂಗ್ರೆಸ್ ಎಂಬ ಭೇದವಿಲ್ಲದೆ ಎಲ್ಲ ಪಕ್ಷಗಳೂ ಆಮಿಷಗಳನ್ನು ಮುಂದಿಟ್ಟು ಮತ ಯಾಚಿಸಿವೆ. ಕರ್ನಾಟಕದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿ ಸ್ಕೀಮ್‌ಗಳು ದೇಶಾದ್ಯಂತ ಸುದ್ದಿಯಾಗಿತ್ತು. ಈಗ ನಟ ಜೋಸೆಫ್ ವಿಜಯ್ ಅವರ ಟಿವಿಕೆ ಪಕ್ಷದ ಸರದಿ. ಇರುವುದರಲ್ಲಿ ಬಿಜೆಪಿ ಮಾತ್ರ ಅಭಿವೃದ್ಧಿ ರಾಜಕಾರಣವನ್ನು ಜನರ ಮುಂದಿಡುತ್ತದೆ. ಪ್ರಧಾನಿಯವರ ಯಾವುದೇ ಭಾಷಣವನ್ನು ಆಲಿಸಿ, ದೇಶದ ಅಭಿವೃದ್ಧಿಯ ವಿಚಾರ ಇಲ್ಲದೆ ಮುಗಿಯುವುದಿಲ್ಲ.



ಫ್ರೆಂಚ್ ತತ್ತ್ವಜ್ಞಾನಿ ರುಸ್ಸೋ ಒಮ್ಮೆ ಹೀಗೆಂದಿದ್ದ– 'ಮತದಾರರು ಸಂಸತ್ ಸದಸ್ಯರ ಆಯ್ಕೆಯ ಚುನಾವಣೆಯ ವೇಳೆ ಮಾತ್ರ ಸ್ವತಂತ್ರರು. ಸಂಸತ್ತಿನ ಸದಸ್ಯರ ಆಯ್ಕೆ ಮುಕ್ತಾಯವಾದ ಬಳಿಕ ಜನರು ಗುಲಾಮರು.' ಇದು ತಮಿಳುನಾಡು ಮತ್ತು ಇತರ ಕೆಲ ರಾಜ್ಯಗಳ ಚುನಾವಣೆಗಳಲ್ಲಿ ರಿಯಾಲಿಟಿ ಆಗಿದೆ. ಅಭ್ಯರ್ಥಿಗಳು ಖರ್ಚು ಮಾಡುವ ಕೋಟ್ಯಂತರ ಹಣವನ್ನು ಗೆದ್ದ ಬಳಿಕ, ಹೇಗಾದರೂ ಮಾಡಿ ಮರು ವಸೂಲು ಮಾಡಬೇಕಾದ ಹೂಡಿಕೆಯಾಗಿ ಪರಿಗಣಿಸುತ್ತಾರೆ.

ತಮಿಳುನಾಡಿನ ಪ್ರಕರಣವೊಂದಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ಕೆಲ ತಿಂಗಳುಗಳ ಹಿಂದೆಯಷ್ಟೇ, ರಾಜ್ಯ ಸರಕಾರಗಳಿಗೆ ಎಚ್ಚರಿಸಿತ್ತು. ಚುನಾವಣೆಗೆ ಮುನ್ನ ಈ ರೀತಿ ಉಚಿತ ಕೊಡುಗೆಗಳನ್ನು ಘೋಷಿಸುವುದರಿಂದ ಭವಿಷ್ಯದಲ್ಲಿ ಅಭಿವೃದ್ಧಿ ಯೋಜನೆಗಳಿಗೆ ನಯಾಪೈಸೆ ಉಳಿಯದು ಎಂದು ಕಳವಳ ವ್ಯಕ್ತಪಡಿಸಿತ್ತು. 'ಭಾರತದಲ್ಲಿ ಎಂಥಾ ಸಂಸ್ಕೃತಿಯನ್ನು ರಾಜಕೀಯ ಪಕ್ಷಗಳು ಬೆಳೆಸುತ್ತಿವೆ? ನೀವು ಬೆಳಗ್ಗೆ ಉಚಿತ ಆಹಾರದಿಂದ ಆರಂಭಿಸಿ ಸೈಕಲ್, ವಿದ್ಯುತ್, ನೇರ ನಗದು, ಚಿನ್ನ ಎಂದು ವಿಸ್ತರಿಸಿದರೆ ಕಥೆ ಏನು? ಸಾಮಾಜಿಕ ಕಲ್ಯಾಣ ಯೋಜನೆಯ ಭಾಗವಾಗಿ ಅಶಕ್ತರಿಗೆ ನೆರವು ನೀಡುವುದು ಸರಿ. ಆದರೆ ಆರ್ಥಿಕವಾಗಿ ದುರ್ಬಲರು–ಶ್ರೀಮಂತರು ಎಂಬ ವ್ಯತ್ಯಾಸವೇ ಇಲ್ಲದೆ ಉಚಿತ ಕೊಡುಗೆಗಳನ್ನು ಬೇಕಾಬಿಟ್ಟಿ ವಿತರಿಸಿದರೆ ಹೇಗೆ? ರಾಜ್ಯ ಸರಕಾರದ ಆದಾಯದಲ್ಲಿ ಕನಿಷ್ಠ 25 ಪರ್ಸೆಂಟ್‌ನಷ್ಟು ಹಣವನ್ನಾದರೂ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಬೇಕು' ಎಂದು ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್ ಹೇಳಿದ್ದರು.

ನಮ್ಮ ಜನರೂ ಅಷ್ಟೇ, ಉಚಿತವಾಗಿ ಸಿಗುವುದಿದ್ದರೆ ಬೇರೆ ಎಲ್ಲ ಕೆಲಸಗಳನ್ನೂ ಬಿಟ್ಟು ಹೊರಡುತ್ತಾರೆ. ಉದಾಹರಣೆಗೆ ಕರ್ನಾಟಕದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಜಾರಿಯಾದ ಬಳಿಕ ಸಾರ್ವಜನಿಕ ಸಾರಿಗೆ ಬಸ್‌ಗಳು, ಬಸ್ ನಿಲ್ದಾಣಗಳಲ್ಲಿ ಜನಸಂದಣಿಯ ರಗಳೆ ಹೆಚ್ಚಿದೆ. ಕಾರಣವೇನು ಎಂದು ಯಾರನ್ನು ಕೇಳಿದರೂ, ಟಿಕೆಟ್ ಉಚಿತದ ಎಫೆಕ್ಟ್ ಎಂಬ ಉತ್ತರ ಸಿಗುತ್ತದೆ. ಫ್ರೀ ಸ್ಕೀಮ್‌ಗಳಿಂದ ವೆಚ್ಚ ಹೆಚ್ಚುತ್ತದೆ. ಆದರೆ ಗುಣಮಟ್ಟ ಕಳಪೆಯಾಗುತ್ತದೆ. ಸರಕಾರಗಳಿಗೆ ಬಂಡವಾಳ ವೆಚ್ಚಕ್ಕೆ ಕೊರತೆಯಾಗುತ್ತದೆ. ಸಾಲದ ಹೊರೆಯೂ ಏರುತ್ತದೆ. ಆಗ ರಾಜ್ಯ ಸರಕಾರಗಳೂ ನಾನಾ ಬಗೆಯ ಹೊಸ ತೆರಿಗೆಯನ್ನು ವಿಧಿಸುವ ಮೂಲಕ ಮತ್ತೆ ಜನರನ್ನು ಕಾಡಿಸುತ್ತವೆ.

ಕೆಲ ರಾಜ್ಯಗಳಲ್ಲಿ ಆದಾಯ ಹೆಚ್ಚಿರಬಹುದು. ಜಿಎಸ್‌ಟಿ ಕಲೆಕ್ಷನ್ ಕೂಡ ಸಮೃದ್ಧವಾಗಿರಬಹುದು. ಆದರೆ ಎಲ್ಲ ರಾಜ್ಯಗಳಿಗೂ ಒಟ್ಟಾರೆ ಸಾರ್ವಜನಿಕ ಮೂಲಸೌಕರ್ಯಗಳ ಅಭಿವೃದ್ಧಿ ಅನಿವಾರ್ಯವಾಗಿರುತ್ತದೆ. ಆಸ್ಪತ್ರೆ, ಶಾಲೆ, ಕಾಲೇಜು, ರಸ್ತೆಗಳು, ನೀರಾವರಿಯ ಅವಶ್ಯಕತೆ ಇರುತ್ತದೆ. ಅವುಗಳಿಗೆ ಬದಲು ಉಚಿತ ಸ್ಕೀಮ್‌ಗಳಿಗೆ ವಿತರಿಸಿದರೆ ಹೇಗೆ?

ತಮಿಳುನಾಡಿನಲ್ಲಿ ಉಚಿತ ಕೊಡುಗೆಗಳ ಮೂಲಕ ಇಲ್ಲಿಯವರೆಗೆ ಅಧಿಕಾರದ ಗದ್ದುಗೆಯನ್ನು ಪರ್ಯಾಯದಂತೆ ಏರುತ್ತಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳಿಗೆ ಈ ಸಲ ಮತದಾರರು ಭಾರಿ ಆಘಾತ ಕೊಟ್ಟಿದ್ದಾರೆ. ಅವರದ್ದೇ ಅಸ್ತ್ರವನ್ನು ಬಳಸಿದ ಹೊಸ ನಟ ಜೋಸೆಫ್ ವಿಜಯ್ ಗೆದ್ದಿದ್ದಾರೆ. ಒಂದುವೇಳೆ ವಿಜಯ್ ಕೂಡ ಅಭಿವೃದ್ಧಿಯನ್ನು ಕಡೆಗಣಿಸಿದರೆ ಮತ್ತೆ ಹೊಸ ಬದಲಾವಣೆಯಾದರೂ ಅಚ್ಚರಿಯಿಲ್ಲ. ದಿಲ್ಲಿಯಲ್ಲೂ ಉಚಿತ ವಿದ್ಯುತ್, ನೀರು, ಬಸ್ ಪ್ರಯಾಣದಂಥ ಪುಕ್ಕಟೆ ಯೋಜನೆಗಳನ್ನು ಕೊಟ್ಟಿದ್ದರೂ, 2025ರ ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಸೋತು ಹೋಗಿತ್ತು. ಹತ್ತು ವರ್ಷಗಳಿಂದ ಆಡಳಿತದಲ್ಲಿದ್ದ ಕೇಜ್ರಿವಾಲರ ಪಕ್ಷದ ವಿರುದ್ಧ ಜನರ ಅಸಮಾಧಾನ ಹೆಚ್ಚಿತ್ತು. ದಿಲ್ಲಿಯ ರಸ್ತೆಗಳ ದುಸ್ಥಿತಿ, ಪರಿಸರ ಮಾಲಿನ್ಯ, ಕುಡಿಯುವ ನೀರಿನ ಕೊರತೆ, ಭ್ರಷ್ಟಾಚಾರ ಪ್ರಕರಣಗಳು ನಿರಾಸೆಗೊಳಿಸಿತ್ತು. ಹೀಗಾಗಿ ಅಭಿವೃದ್ಧಿಯನ್ನು ಕಡೆಗಣಿಸಿ, ಕೇವಲ ಉಚಿತಗಳನ್ನು ಘೋಷಿಸಿದರೆ ಕ್ರಮೇಣ ಮತದಾರ ಎಚ್ಚೆತ್ತುಕೊಂಡು ಮನೆಗೆ ಕಳಿಸುತ್ತಾನೆ ಎನ್ನುವುದಕ್ಕೆ ದಿಲ್ಲಿ, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳ ಎಲೆಕ್ಷನ್ ರಿಸಲ್ಟ್ ತಾಜಾ ಉದಾಹರಣೆಯಾಗಿದೆ. ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿಯವರೂ ಲಕ್ಷ್ಮೀ ಭಂಡಾರ್, ಬಾಂಗ್ಲಾರ್ ಯುವ ಶಕ್ತಿ, ಎಲ್ಲರಿಗೂ ಪಕ್ಕಾ ಮನೆ, ನೀರು ಘೋಷಿಸಿದ್ದರೂ, ಸ್ವಕ್ಷೇತ್ರ ಭವಾನಿಪುರದಲ್ಲೇ ಪರಾಭವಗೊಂಡಿದ್ದಾರೆ. ಅಂದರೆ ಪಶ್ಚಿಮ ಬಂಗಾಳದ ಮತದಾರರು ತಾತ್ಕಾಲಿಕ ಲಾಭಕ್ಕಿಂತ ರಾಜ್ಯದ ದೀರ್ಘಕಾಲೀನ ಹಿತಾಸಕ್ತಿ, ಆಂತರಿಕ ಭದ್ರತೆ, ಉದ್ಯಮಸ್ನೇಹಿ ಸರಕಾರಕ್ಕೆ ಒತ್ತು ನೀಡಿದರು. ಯುವಜನರು ಕೆಲವು ಸಾವಿರ ರುಪಾಯಿ ಚಿಲ್ಲರೆಯ ನಿರುದ್ಯೋಗ ಭತ್ಯೆಗಿಂತ, ಉದ್ಯಮ ಮತ್ತು ಕೈಗಾರಿಕೀಕರಣದ ಭರವಸೆ ನೀಡಿದ್ದ ಬಿಜೆಪಿಯ ಭರವಸೆಗೆ ಮತ ನೀಡಿದರು.

ಭಟ್ಟರ್ ಸ್ನಾಕ್

- **ರಮೇಶ ಗೌಡ, ಮಳವಳ್ಳಿ**
  ಭಟ್ರೇ, ಟಿವಿ ನ್ಯೂಸ್ ಚರ್ಚೆಗಳಲ್ಲಿ ಎಲ್ಲರೂ ಒಟ್ಟಿಗೇ ಕಿರುಚಾಡುವುದು ಯಾಕೆ?
  – **ಅಲ್ಲಿ ಯಾರು ಸರಿ ಎಂದು ಸಾಬೀತುಪಡಿಸುವುದಕ್ಕಿಂತ, ಯಾರ ಶಬ್ದ ಜಾಸ್ತಿ ಎಂದು ಪರೀಕ್ಷೆ ನಡೆಯುತ್ತಿರುತ್ತದೆ!**
- **ಚಿದಾನಂದ ಸಿ.ಹಾವೇರಿ, ಧಾರವಾಡ**
  ಭಟ್ರೇ, ಈಗಿನ ಕಾಲದಲ್ಲಿ ಏನಿಲ್ಲದಿದ್ದರೆ ಜೀವನವೇ ಅಸಾಧ್ಯ?
  – **ಮೊಬೈಲ್ ಚಾರ್ಜರ್!**
- **ನವೀನ ಪಲ್ಲೇದ, ದಾವಣಗೆರೆ**
  ಭಟ್ರೇ, ಸಿಗ್ನಲ್ ಹಸಿರು ಆದ ತಕ್ಷಣ ಹಿಂದಿರುವವರು ಯಾಕೆ ಹಾರ್ನ್ ಮಾಡುತ್ತಾರೆ?
  – **ಮುಂದೆ ನಿಂತವರು ಅಲ್ಲಿಯೇ ಸಂಸಾರ ಹೂಡಿ ಸೆಟಲ್ ಆಗಿಬಿಡುತ್ತಾರೇನೋ ಎಂಬ ಭಯ!**
- **ಗಣಪತಿ ಮನಸೂಳಿ, ಖಾನಾಪುರ**
  ಭಟ್ರೇ, ಮ್ಯಾರೇಜಸ್ ಆರ್ ಮೇಡ್ ಇನ್ ಹೆವೆನ್, ಬಟ್?
  – **ರಿಜಿಸ್ಟ್ರೇಷನ್ಸ್ ಆರ್ ಮೇಡ್ ಆನ್ ಅರ್ಥ್!**
- **ಅಮಾಸೆ ಸುಬ್ಬು, ಮೈಸೂರು**
  ಭಟ್ರೇ, ವಿಮಾನದಲ್ಲಿ 'ಇಕನಾಮಿಕ್ ಕ್ಲಾಸ್'ನಲ್ಲಿ ಪ್ರಯಾಣಿಸುವುದು ಅಂದರೆ ಹೇಗಿರುತ್ತದೆ?
  – **ಅದು ಹಣ ಕೊಟ್ಟು ಇಕ್ಕಟ್ಟಾದ ಜಾಗದಲ್ಲಿ ಕುಳಿತುಕೊಂಡು, ನಮಗಿಂತ ಮುಂಚೆ ಯಾರು ಹೊರಗೆ ಹೋಗುತ್ತಾರೆ ಎಂದು ಕಾದು ನೋಡುವ ಒಂದು ತಾಳ್ಮೆಯ ಪರೀಕ್ಷೆ!**
- **ಸಂಧ್ಯಾ, (ಇಮೇಲ್ ಮೂಲಕ)**
  ಭಟ್ರೇ, ಸೊಳ್ಳೆಗಳು ಮನುಷ್ಯರಿಗೆ ಕಚ್ಚಿದ ಮೇಲೆ ಯಾಕೆ ಹಾರಿ ಹೋಗುತ್ತವೆ?
  – **ಯಾಕಂದ್ರೆ 'ರಕ್ತದಾನ' ಮಾಡಿದ ಮೇಲೆ ಅಲ್ಲಿ ಹೆಚ್ಚು ಹೊತ್ತು ಇರಬಾರದು ಅನ್ನೋದು ಅವುಗಳ ನಂಬಿಕೆ!**
- **ರಮೇಶ, ರಟ್ಟಿಹಳ್ಳಿ**
  ಭಟ್ರೇ, ಹೋಟೆಲ್‌ಗೆ ಹೋದಾಗ ಮೊದಲು ಮೆನು ಕಾರ್ಡ್ ಯಾಕೆ ನೋಡಬೇಕು?
  – **ಅದರಲ್ಲಿರುವ ಬೆಲೆಯನ್ನು ನೋಡಿ ಹಸಿವು ಎಷ್ಟು ಬೇಗ ಕಡಿಮೆಯಾಗುತ್ತದೆ ಎಂದು ತಿಳಿದುಕೊಳ್ಳಲು!**
- **ರಾಜು ಕಡವೇರಿ, ಬೆಂಗಳೂರು**
  ಭಟ್ರೇ, ಲವ್ ಮ್ಯಾರೇಜ್ ಅಂದರೆ ಏನು?
  – **ತಾನೇ ಗುಂಡಿ ಅಗೆದು, ತಾನೇ ಅದಕ್ಕೆ ಹಾರಿ, ತಾನೇ ಮಣ್ಣು ಹಾಕಿಕೊಳ್ಳುವ ಒಂದು ಧೈರ್ಯದ ಕೆಲಸ!**
- **ಚೈತ್ರಾ, (ಇಮೇಲ್ ಮೂಲಕ)**
  ಭಟ್ರೇ, ಮೊಬೈಲ್ ಫೋನ್ ಮತ್ತು ಹೆಂಡತಿ ನಡುವಿನ ಹೋಲಿಕೆ ಏನು?
  – **ಎರಡಕ್ಕೂ ಪ್ರತಿದಿನ ಚಾರ್ಜ್ ಮಾಡಬೇಕು, ಸ್ವಲ್ಪ ಗಮನ ಕೊಡದಿದ್ದರೆ 'ನೆಟ್‌ವರ್ಕ್' ಕಟ್ ಆಗಿಬಿಡುತ್ತದೆ!**

ಕಾಡು ಹಣ್ಣುಗಳ ಸವಿ ರುಚಿಯ ತಖ್ತೆ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಹೆಚ್ಚಿನ ತಾಪಮಾನವಿರುವ ಬೇಸಗೆಯ ದಿನಗಳು ಬಂದಾಗಲೆಲ್ಲಾ, ನೆನಪಾಗುವುದು ನಮ್ಮ ಹಳ್ಳಿಯಲ್ಲಿ ಕಳೆದ ಬೇಸಗೆಯ ದಿನಗಳು. ಕರಾವಳಿಯ ಕುಗ್ರಾಮವಾದ, ಮುಖ್ಯ ರಸ್ತೆಯಿಂದ ಮೂರು ಕಿ.ಮೀ. ದೂರದಲ್ಲಿದ್ದ ನಮ್ಮ ಹಳ್ಳಿಯಲ್ಲಿ, ಬೇಸಗೆಯ ದಿನನಿತ್ಯದ ಬದಲಾವಣೆಗಳು, ವಾತಾವರಣದ ಏರುಪೇರುಗಳು, ಆಗಾಗ ಆಗಸದಲ್ಲಿ ಕಪ್ಪನೆಯ ಗೂಳಿಗಳಂತೆ ಸಾಗುತ್ತಿದ್ದ ಮೋಡಗಳು, ಗುಡುಗು ಮಿಂಚುಗಳು – ಇವೇ ಎಲ್ಲರಿಗೂ ಪ್ರಮುಖ ಸುದ್ದಿ; ಇಂದಿನಂತೆ ರಾಜಕೀಯ ಮತ್ತು ಇತರ ವಿದ್ಯಮಾನಗಳ ಕುರಿತು ಮಾತನಾಡಲು ಅವಕಾಶವಿಲ್ಲದ, ಮಾಹಿತಿ ಇಲ್ಲದ ಅಂದಿನ ಗ್ರಾಮೀಣರಿಗೆ, ಬೇಸಗೆಯ ಸೆಕೆ ಮತ್ತು ಆ ದಿನಗಳಲ್ಲಿ ಕಾಣಬರುತ್ತಿದ್ದ ಮೋಡ, ಮಳೆ, ದೂಳು, ಗಾಳಿ, ಕಾಡಿನ ಹಣ್ಣುಗಳು, ಕೃಷಿಯ ಸಮಸ್ಯೆಗಳು ಇವೇ ಚರ್ಚಿಸುವ, ಲೋಕಾಭಿರಾಮ ಹರಟೆಯ 'ಸುದ್ದಿಗಳು'.

ಬೇಸಗೆಯ ದಿನಗಳಲ್ಲಿ ನಮ್ಮ ಮನೆ ಸುತ್ತಲಿದ್ದ ಪುಟ್ಟ ಕಾಡು, ಹಕ್ಕಲು, ಹಾಡಿಗಳಲ್ಲಿ ಮಾಗುತ್ತಿದ್ದ ಹಣ್ಣುಗಳ ವೈವಿಧ್ಯವೂ ನಮ್ಮ ಚರ್ಚೆಯ ಸುದ್ದಿ, ವಿಷಯಗಳಾಗುತ್ತಿದ್ದವು! ಆ ಹಕ್ಕಲಿನಲ್ಲಿ ಮುರಿನ ಹಣ್ಣು ತುಂಬಾ ಆಗಿದೆ, ಈ ಹಾಡಿಯಲ್ಲಿನ ಕಾಟು ಮಾವಿನ ಮರದಲ್ಲಿ ರಾಶಿ ರಾಶಿ ಕಾಯಿಗಳಿವೆ, ಹಣ್ಣಾಗಿ ನೆಲಕ್ಕೆ ಬೀಳುತ್ತದೆ, ಆ ತೋಡಿನ ಅಂಚಿನಲ್ಲಿರುವ ಚೇಂಪಿ ಮರದಲ್ಲಿ ಹಣ್ಣುಬಿಟ್ಟಿವೆ ಮೊದಲಾದ ಸುದ್ದಿಗಳು ಚರ್ಚೆಗೆ ಒಳಗಾಗಿ, ಅವನ್ನು ಅರಸುತ್ತಾ ಹೋಗುವುದು ಮಕ್ಕಳ ಕೆಲಸ! ಅಷ್ಟಕ್ಕೂ, ನಮ್ಮ ಸುತ್ತಲೂ ಇದ್ದ ಹಕ್ಕಲು, ಹಾಡಿಗಳಲ್ಲಿ, ಕುರುಚಲು ಗಿಡಗಳಿದ್ದ ಬೋಳುಗುಡ್ಡಗಳಲ್ಲಿ ಬೇಸಗೆಯಲ್ಲಿ ಕಾಣಿಸುತ್ತಿದ್ದ ಕಾಡು ಹಣ್ಣುಗಳಾದರೂ ಸ್ವಲ್ಪವೇ! ಬಿರು ಬಿಸಿಲು ತಣಿದು, ಸಂಜೆಯ ಹೊತ್ತಿನಲ್ಲಿ ಪ್ರತಿ ದಿನ ಅಲ್ಲೆಲ್ಲಾ ಅಲೆದಾಡಿದರೂ, ಎಲ್ಲಾ ಮಕ್ಕಳಿಗೆ, ಕೆಲವು ಬಾರಿ ಮನೆಗೂ ಆಗುವಷ್ಟು ಹಣ್ಣುಗಳು ದೊರಕುತ್ತಿದ್ದವು. ಕಾಟು ಮಾವಿನ ಮರಗಳು ದಂಡಿಯಾಗಿ ಬೆಳೆಯುತ್ತಿದ್ದ ಅಂದಿನ ಕಾಲದಲ್ಲಿ, ಮಾವಿನ ಕಾಯಿ ಮತ್ತು ಹಣ್ಣುಗಳ ಸಂಗ್ರಹಕ್ಕೆ ಹೋದವರಿಗೆ ಯಾರಿಗೂ ಕೊರತೆಯಾಗದಷ್ಟು ಹಣ್ಣುಗಳು, ಕಾಯಿಗಳು ದೊರಕುತ್ತಿದ್ದವು. ಹೇರಳವಾಗಿ ತಮ್ಮಷ್ಟಕ್ಕೆ ಬೆಳೆದಿದ್ದ ಅಂತಹ ಬೃಹದಾಕಾರದ ಕಾಟುಮಾವಿನ ಮರಗಳು, ಇಪ್ಪತ್ತೊಂದನೆಯ ಶತಮಾನ ಉದಯವಾಗುವಷ್ಟರಲ್ಲಿ ಬಹುಪಾಲು ಕಣ್ಮರೆಯಾಗಿದ್ದೂ ಒಂದು ಕಹಿ ಸತ್ಯ.

'ಅಂಗಾರ ಅಂಗಾರ ಅಪ್ಪಯ್ಯ, ತಗ್ಗಿಗೆ ಬಿದ್ದರೆ ಕುಪ್ಪಯ್ಯ, ಒತ್ತಿ ಕಂಡರೆ ಕೆಂಪಯ್ಯ' ಇದು ಹೆಬ್ಬಲಸಿನ ಹಣ್ಣಿನ ಬಗ್ಗೆ ಇರುವ ಒಂದು ಎದುರುಕಥೆ (ಒಗಟು). ಹೆಬ್ಬಲಸು ಗೊತ್ತು ತಾನೆ? ದಟ್ಟ ಕಾಡಿನಲ್ಲಿ ಮತ್ತು ಕಾಡಂಚಿನ ಊರುಗಳಲ್ಲಿ ಇರುವ ಬೃಹತ್ ಮರ. ನಮ್ಮ ಮನೆ ಹತ್ತಿರ, ದರೆಗೆ ತಾಗಿಕೊಂಡು ಐದು ದೊಡ್ಡ ಗಾತ್ರದ ಹೆಬ್ಬಲಸಿನ ಮರಗಳಿದ್ದವು. ಹೆಸರು 'ಹಿರಿದಾದ ಹಲಸು' ಆದರೂ, ಇದು ಕೊಡುವ ಕಾಯಿಯ ಗಾತ್ರ ಮಾತ್ರ ಹೆಸರಿಗೆ ವ್ಯತಿರಿಕ್ತ. ಪುಟಾಣಿ ಹಣ್ಣು ಇದು. ಹಲಸಿನ ಹಣ್ಣಿನ ಮಿನಿಯೇಚರ್ ಎನಿಸುವ ಹೆಬ್ಬಲಸಿನ ಹಣ್ಣನ್ನು, ನಗರದವರು, ಬಯಲುಸೀಮೆಯವರು ನೋಡಿರುವ ಸಾಧ್ಯತೆ ಕಡಿಮೆ. ಎತ್ತರವಾದ ಹೆಬ್ಬಲಸಿನ ಮರದ ತುದಿಯಲ್ಲಿ ಬಿಡುವ ನೂರಾರು ಹಣ್ಣುಗಳು ಬೆಳಗಿನ ಬಿಸಿಲಿಗೆ ಹೊಳೆಯುವ ಸೊಗಸನ್ನು ಕಂಡೇ, ಜನಪದರು ಮೇಲಿನ ಎದುರುಕಥೆಯನ್ನು ಕಟ್ಟಿರಬೇಕು. 'ಮರದ ತುದಿಯಲ್ಲಿ, ಬಹು ಎತ್ತರದಲ್ಲಿರುವ ಆ ಬಣ್ಣ ಬಣ್ಣದ ಹಣ್ಣುಗಳು, ಕೆಳಗೆ ಬಿದ್ದರೆ ಮುದ್ದೆಯಾಗುತ್ತವೆ, ಒಳಗೆ ಹೊಳೆವ ಬಣ್ಣದ ತೊಳೆಗಳಿವೆ' ಎಂಬುದೇ ಆ ಒಗಟಿನ ಅರ್ಥ.

ಬೇಸಿಗೆ ಕಾಲಿಡುವ ಸಮಯದಲ್ಲಿ, ಹೆಬ್ಬಲಸಿನ ಮರಗಳಲ್ಲಿ ನೂರಾರು ಹಣ್ಣುಗಳು ಮಾಗುತ್ತವೆ. ಎರಡು ಮುಷ್ಟಿ ಗಾತ್ರದ ಈ ಹಣ್ಣೊಂದರಲ್ಲಿ ಐವತ್ತರಿಂದ ನೂರು ತೊಳೆಗಳು. ಚಿನ್ನದ ಬಣ್ಣದ ಒಂದೊಂದೇ ತೊಳೆಯನ್ನು ಬಾಯಿಗೆ ಹಾಕಿಕೊಂಡು, ರುಚಿ ಸವಿದು, ಬೀಜ ಉಗಿಯಬೇಕು. ಸಾಮಾನ್ಯವಾಗಿ ಎತ್ತರವಾಗಿ ಬೆಳೆಯುವ ಹೆಬ್ಬಲಸಿನ ಮರದ ತುದಿಯಿಂದ ಬಲಿತ, ರುಚಿಕರ ಹಣ್ಣುಗಳನ್ನು ಸಂಗ್ರಹಿಸುವುದೇ ಒಂದು ಕಲೆ. ಏಕೆಂದರೆ, ಮರ ಹತ್ತಿ ಹಣ್ಣನ್ನು ಕೊಯ್ದು ಕೆಳಕ್ಕೆ ಎಸೆದರೆ, ಮಿದುವಾದ ಆ ಹಣ್ಣು ಮುದ್ದೆಯಾಗಿ ತೊಳೆಗಳೆಲ್ಲ ಮಣ್ಣು ಸೇರುತ್ತವೆ. ಬುಟ್ಟಿ ಅಥವಾ ಗೋಣಿಚೀಲ ಹಿಡಿದು ಮರಹತ್ತಿ ಕಾಯಿ ಕೊಯ್ದು ಕೆಳಗಿಳಿಸಿದರೆ ಮಾತ್ರ ರುಚಿ ರುಚಿಯಾದ ಹಣ್ಣನ್ನು ತಿನ್ನಬಹುದು. ನಮ್ಮೂರಿನ ಕೆಲವು ಸಾಹಸಿ ಯುವಕರು, ಬಳ್ಳಿಗಳನ್ನು ಒಂದಕ್ಕೊಂದು ಬಿಗಿದು, ಮೂವತ್ತು ಅಡಿ ಉದ್ದದ ದಾರ ಮಾಡಿ, ಅದರ ಒಂದು ತುದಿಗೆ ಹಣ್ಣನ್ನು ಕಟ್ಟಿ, ಕೆಳಗೆ ನಿಂತವರ ಕೈಗೆ ಸಿಗುವಂತೆ ನಿಧಾನವಾಗಿ ಕೆಳಗಿಳಿಸುತ್ತಿದ್ದರು!

ಹೆಬ್ಬಲಸಿನ ಕಾಯಿಗಳನ್ನು ತಂದು, ಮನೆ ಎದುರಿನ ಹುಲ್ಲುಕುತ್ರಿಯ ಅಡಿ ಇಟ್ಟರೆ, ನಾಲ್ಕಾರು ದಿನಗಳಲ್ಲಿ ಹಣ್ಣಾಗುತ್ತದೆ. ಆದರೆ ಮರದಲ್ಲೇ ಬಲಿತು, ಹಣ್ಣಾದಾಗ ಇರುವ ರುಚಿ ಇದಕ್ಕೆ ಬರುವುದಿಲ್ಲ. ಪ್ರತಿ ಬೇಸಿಗೆಯಲ್ಲೂ ಹತ್ತಾರು ಹೆಬ್ಬಲಸಿನ ಹಣ್ಣುಗಳನ್ನು ತಿಂದ ಸವಿರುಚಿಯ ನೆನಪು ಮನದಲ್ಲಿ ಸದಾ ಹಸಿರು. ಈ ಹಣ್ಣಿನ ಬೀಜ ಬುಟ್ಟಿಗಳಲ್ಲಿ ಸಂಗ್ರಹಿಸಿ, ಚೆನ್ನಾಗಿ ಕುದಿಸಿ, ಎಣ್ಣೆಯನ್ನು ತಯಾರಿಸುತ್ತಿದ್ದರೆಂದು ನಮ್ಮ ಅಮ್ಮಮ್ಮ ಹೇಳುತ್ತಿದ್ದರು. ಅದನ್ನು ದೀಪ ಬೆಳಗಲೂ ಉಪಯೋಗಿಸಬಹುದಿತ್ತು. ಇದೇ ರೀತಿ, ಹಿಂದಿನ ದಿನಗಳಲ್ಲಿ, ನಮ್ಮ ಹಳ್ಳಿಯ ಅಂಗಡಿಗಳಲ್ಲಿ ಸೀಮೆ ಎಣ್ಣೆ ದೊರೆಯುವ ಮುಂಚೆ, ತೋಡಿನ ಸಾಲಿನಲ್ಲಿ ಬೆಳೆಯುವ ಹೊನ್ನೆಮರದ ಕಾಯಿಯಿಂದಲೂ ಎಣ್ಣೆ ಮಾಡಿ, ದೀಪ ಹಚ್ಚುತ್ತಿದ್ದರಂತೆ.

ಕಾಡಿನ ನಡುವೆ, ಗದ್ದೆಯಂಚಿನಲ್ಲಿ, ಹಕ್ಕಲಿನ ಮೂಲೆಯಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿದ್ದ ಹಲವು ಕಾಟುಮಾವಿನ ಮರಗಳ ಕಥೆಯಂತೂ ಇನ್ನೂ ರುಚಿಕರ. ಒಂದೊಂದು ಮರದ ಹಣ್ಣು ಒಂದೊಂದು ರುಚಿ. ಆ ಪುಟಾಣಿ ಹಣ್ಣುಗಳಲ್ಲಿ, ಕೆಲವು ಈಗಿನ ಮಲ್ಲಿಕಾ ಹಣ್ಣಿನ ರುಚಿ! ಬೇಸಗೆಯ ಬಿಸಿಲಿನಲ್ಲಿ ನೆರಳು ನೀಡುವ ಆ ಬೃಹತ್ ಮಾವಿನ ಮರದ ಅಡಿ ಹೋದರೆ, ಒಂದಾದರೂ ಹಣ್ಣು ಸಿಗದಿದ್ದರೆ ಹೇಳಿ! ಕೆಲವು ಮರಗಳ ಬುಡದಲ್ಲಿ ನೂರಾರು ಕಾಟು ಮಾವಿನ ಹಣ್ಣುಗಳು ಬಿದ್ದಿರುತ್ತಿದ್ದುದೂ ಇದೆ. ಈ ಕಾಟು ಹಣ್ಣುಗಳಲ್ಲಿ ಮಾಂಸಲ ಭಾಗ ಕಡಿಮೆ, ಗೊರಟನ್ನು ಚೀಪುತ್ತಾ, ಬಹು ರುಚಿಕರ ಎನಿಸುವ ಆ ಹಣ್ಣುಗಳನ್ನು ತಿಂದು, ಗೊರಟನ್ನು ಎಸೆಯುವಾಗ ಒಂದು ನುಡಿಗಟ್ಟು 'ಏ ಅಣ್ಣಾ, ಗೊರಟಿನ ಬೆನ್ನರ ಓಡು!' ಎಂದು ಪಕ್ಕದಲ್ಲಿದ್ದವರಿಗೆ ಹೇಳುವ ಹಾಸ್ಯ. ಅವರು ಅದನ್ನು ಕೇಳಿ ಸುಮ್ಮನಿರುತ್ತಾರಾ? ಇನ್ನೊಂದು ಹಾಸ್ಯಚಟಾಕಿ ಹಾರಿಸುತ್ತಾರೆ! 'ಹೆಣ್ತಿನ ಮಾರಿ ಕುದುರೆ ತಂದುಕೊಡು!'

ಬೇಸಗೆಯ ಈ ದಿನಗಳಲ್ಲೇ ಶಾಲೆಗೆ ಒಂದೆರಡು ತಿಂಗಳುಗಳ ರಜೆ; ಮಕ್ಕಳು ತಮ್ಮ ಮನೆಯ ಫಾಸಲೆಯ ಯಾವ ಯಾವ ಮರಗಳಲ್ಲಿ ಹಣ್ಣಾಗಿದೆ, ಯಾವ ಮರದ ಹಣ್ಣಿನ ರುಚಿ ಜಾಸ್ತಿ, ಯಾವ ಮರದ ಹಣ್ಣು ಹುಳಿ, ಯಾವ ಮರದ ಅಡಿ ಹೋದರೆ ತಕ್ಷಣ ಹಣ್ಣು ಸಿಗುತ್ತದೆ ಎಂದು ತಮ್ಮ ಮನದಲ್ಲೇ ಪಟ್ಟಿ ತಯಾರು ಮಾಡಿಕೊಂಡಿರುತ್ತಿದ್ದರು. ಬೆಳಗಿನ ಹೊತ್ತೋ, ಮಧ್ಯಾಹ್ನ ಊಟವಾದ ಮೇಲೋ ಅಂತಹ ಮರಗಳ ಬುಡದಲ್ಲಿ ಠಳಾಯಿಸಿ, ಮರದ ಕೆಳಗೆ ಬಿದ್ದಿರುವ ಹಣ್ಣನ್ನು ಆಯ್ದು, ಸೊನೆಯನ್ನು ಮರಕ್ಕೆ ಉಜ್ಜಿ, ಹಣ್ಣನ್ನು ಚೀಪಿ ತಿನ್ನುತ್ತಿದ್ದರು. ಇನ್ನೂ ಜಾಸ್ತಿ ಇದ್ದರೆ ಮನೆಗೆ ತರುತ್ತಿದ್ದುದೂ ಇದೆ. ಬೃಹತ್ ಮಾವಿನ ಮರದ ಅಡಿ ಹಣ್ಣು ಬಿದ್ದಿರದೇ ಇದ್ದರೆ, ಮರದ ಮೇಲಿರುವ ಅಳಿಲನ್ನು ಕೇಳಿಕೊಳ್ಳುವ ನುಡಿಗಟ್ಟೂ ಉಂಟು! 'ಚಣಿಲಣ್ಣ, ಮಣಿಲಣ್ಣ, ನಂಗೊಂದು ಹಣ್, ನಿಂಗೊಂದು ಹಣ್ ದಡ್ಡೋ ಬುಡ್ಡೋ'. ಮರದ ಮೇಲೆ ಓಡಾಡುವ ಅಳಿಲುಗಳು, ಹಣ್ಣುಗಳನ್ನು ಗುರುತಿಸಿ, ಅದನ್ನು ಅರ್ಧ ತಿಂದು ಕೆಳಗೆ ಎಸೆಯುತ್ತವೆ ಎಂಬ ಆಸೆ, ಈ ನುಡಿಗಟ್ಟಿನಲ್ಲಿದೆ. ಅಳಿಲುಗಳಿಂದಾಗಿ ತುದಿಯಲ್ಲಿರುವ ಹಣ್ಣುಗಳು ಅಲುಗಾಡಿ ಕೆಳಗೆ ಬೀಳುತ್ತವೆ.



ಮೇ ತಿಂಗಳಲ್ಲಿ ಆಗಾಗ ಬರುವ ಬೀಸುಗಾಳಿಯ ಸಮಯದಲ್ಲಿ ಇಂತಹ ದೊಡ್ಡ ಕಾಟುಮಾವಿನ ಮರಗಳ ಅಡಿ ಹೋಗಿ, ಗಾಳಿಗೆ ಬಿದ್ದಿದ್ದ ನೂರಾರು ಹಣ್ಣುಗಳನ್ನು ಬುಟ್ಟಿಯಲ್ಲಿ ಆಯ್ದು ತಂದು, ಅದರ ಗೊರಟುಗಳನ್ನು ಬೇರ್ಪಡಿಸಿ, ಅರೆಯುವ ಕಲ್ಲಿನಲ್ಲಿ ಹಾಕಿ ಅರೆದು, ರಸ ಮಾಡಿ, ಬೆತ್ತದ ಗೆರಸಿಯ ಮೇಲೆ ಹರಡಿ, ಒಣಗಿಸಿದರೆ, ಮಾವಿನ ಹಣ್‌ಚಟ್ ತಯಾರಾಗುತ್ತಿತ್ತು. ಹತ್ತಾರು ದಿನ ಈ ರೀತಿ ರಸವನ್ನು ಹಲವು ಪದರಗಳಾಗಿ ಹರಡಿ, ಒಣಗಿಸಿದರೆ, ಎರಡು ಅಥವಾ ಮೂರು ಸೆಂಟಿ ಮೀಟರ್ ದಪ್ಪದ ಹಣ್‌ಚಟ್ ಸಿದ್ಧ. ಮಳೆಗಾಲದಲ್ಲಿ ಇದರ ಚಟ್ನಿ, ಗೊಜ್ಜು ಮಾಡಿದರೆ, ಬಹು ರುಚಿಕರ. ಒಂದೆರಡು ಅಡಿ ಅಗಲ ಇರುವ ಈ ಹಣ್‌ಚಟ್‌ನ್ನು ದೂಪದ ಎಲೆಯಲ್ಲಿ ಸುತ್ತಿ, ಚೆನ್ನಾಗಿ ಒಣಗಿಸಿ ಇಡಬೇಕು. ಇಲ್ಲವಾದರೆ, ಎರಡು ಮೂರು ತಿಂಗಳುಗಳಲ್ಲಿ ಅದರಲ್ಲಿ ಪುಟಾಣಿ ಹುಳಗಳಾಗುತ್ತಿದ್ದವು!

ಅಂದ ಹಾಗೆ, ಹಣ್ಣುಗಳಲ್ಲಿ ಕಾಣಿಸುವ ಪುಟಾಣಿ ಹುಳಗಳ ಕುರಿತು ಬಲೇ ಮಜವಾದ ಒಂದು ನಂಬಿಕೆ ನಮ್ಮೂರಿನಲ್ಲಿದೆ! ಗೋಡಂಬಿ ಹಣ್ಣು (ಗೋಯ್ ಹಣ್ಣು) ಹೆಚ್ಚು ಮಾಗಿದರೆ, ಅದರಲ್ಲಿ ಪುಟಾಣಿ ಗಾತ್ರದ, ಬಿಳಿ ಬಣ್ಣದ ಹುಳಗಳಿರುವುದು ತುಸು ಸಾಮಾನ್ಯ. ಅಂತಹ ಗೋಯ್ ಹಣ್ಣು ಅಥವಾ ಅಪರೂಪಕ್ಕೆ ಮಾವಿನ ಹಣ್ಣಿನಲ್ಲಿ ಕಾಣಸಿಗುವ ಬಿಳಿ ಪುಟಾಣಿ ಹುಳಗಳೆಂದರೆ, ರೈತ ಮಕ್ಕಳಿಗೆ ತೀರ ರೇಜಿಗೆ ಇಲ್ಲ! ಏಕೆಂದರೆ 'ಹಣ್ಣಿನ ಹುಳ ಕಣ್ಣಿಗೆ ತಂಪು' ಎಂಬ ಗಾದೆಯನ್ನು ಹೇಳುತ್ತಾ, ಕಣ್ಣಿಗೆ ಕಾಣಿಸಿದ ಹುಳವನ್ನು ಬಿಸಾಕಿ, ಹಣ್ಣನ್ನು ಸ್ವಾಹಾ ಮಾಡುವವರೂ ನಮ್ಮೂರಲ್ಲಿದ್ದಾರೆ. ಕಣ್ಣಿಗೆ ಕಾಣಿಸದ ಇನ್ನೂ ಪುಟಾಣಿ ಹುಳಗಳಿದ್ದರೆ, ಗೊತ್ತೇ ಆಗುತ್ತಿರಲಿಲ್ಲ! ಆ ರೀತಿಯ ನಿರುಪದ್ರವಕಾರಿ ಹುಳಗಳಿರುವ ಹಣ್ಣುಗಳನ್ನು ತಿಂದರೆ, ಅಕಸ್ಮಾತ್ ಆ ಹುಳವನ್ನೂ ಸಹ ಹಣ್ಣಿನ ಜತೆ ಹೊಟ್ಟೆ ಸೇರಿಸಿದರೆ, ಕಣ್ಣಿನ ದೃಷ್ಟಿಗೆ ಉತ್ತಮ ಎಂಬ ನಂಬಿಕೆ ಈ ಗಾದೆಯಲ್ಲಿದೆ! ಅದು ಅನುಭವ ಜನ್ಯವೂ ಇರಬಹುದು; ಕೆಲವು ಪ್ರಭೇದದ ಕೀಟಗಳನ್ನು, ಗೆದ್ದಲು ಹುಳದ ರಾಣಿಹುಳವನ್ನು ನಮ್ಮ ಹಳ್ಳಿಯ ಕೆಲವು ಪಂಗಡಗಳವರು ಆಗಾಗ ತಿನ್ನುವ ಹಿನ್ನೆಲೆಯಲ್ಲಿ, ಇಂತಹ ಗಾದೆಗಳು ಹುಟ್ಟಿಕೊಂಡಿರಬಹುದು. ನಮ್ಮೂರಿನ ಶ್ರಮಿಕ ವ್ಯಕ್ತಿಗಳು, ವರ್ಷಕ್ಕೆ ಒಮ್ಮೆಯಾದರೂ ಗೆದ್ದಲು ಹುಳುವಿನ ರಾಣಿಯನ್ನು ತಿನ್ನಬೇಕು ಎಂದು ತವಕಿಸುವುದಿದೆ; ಅದರಿಂದಾಗಿ, ಅವರ ಅಪಾರ ದೈಹಿಕ ಶ್ರಮದ ಕೆಲಸಕ್ಕೆ ಶಕ್ತಿ ಕೂಡಿಬರುತ್ತದಂತೆ!

ನಮ್ಮ ಹಳ್ಳಿ ಮನೆ ಹಿಂದಿನ ಸೇಡಿಮಣ್ಣಿನ ದರೆಯನ್ನು ಹತ್ತಿ ಹೋದರೆ, ಒಂದು ಹಕ್ಕಲು ಇದೆ. ಒಂದೆರಡು ಎಕರೆ ವಿಸ್ತೀರ್ಣವಿರುವ ಆ ಜಾಗದಲ್ಲಿ ನೂರಾರು ಗಿಡಮರಬಳ್ಳಿಗಳ ಸಂತೆ. ಹಕ್ಕಲು ಎಂದರೆ, ದೊಡ್ಡ ಮರಗಳಿಲ್ಲದ, ಮಧ್ಯಮ ಗಾತ್ರದ ಮರಗಳ ತಾಣ. ಇಲ್ಲಿದ್ದ ಗೋಯ್ ಮರದಲ್ಲಿ (ಗೋಡಂಬಿ) ನೂರಾರು ಹಣ್ಣುಗಳಾಗುತ್ತಿದ್ದವು. ಬೇಸಗೆಯಲ್ಲಿ ಅವು ಹಣ್ಣು ಬಿಟ್ಟಾಗ, ಅದರ ರಸವನ್ನು ಹೀರಿ ಕುಡಿದಾಗ, ಗಂಟಲಿನಲ್ಲಿ ಒಂದು ರೀತಿಯ ನವೆ, ಕೆರತ. ಆದರೂ ಗೋವೆ ಹಣ್ಣು ಎಂದರೆ ಮಕ್ಕಳಿಗೆ ಇಷ್ಟ. ಆ ಗೋಯ್ ಹಣ್ಣುಗಳಲ್ಲಿ ಕೆಲವನ್ನು ಮಾತ್ರ ತಿಂದು, ಉಳಿದವನ್ನು ಜಾನುವಾರುಗಳಿಗೆ ಹಾಕುವ ಪದ್ಧತಿ; 1980ರ ದಶಕದಲ್ಲಿ ನಮ್ಮ ಹಳ್ಳಿಯ ಹಲವು ಮನೆಗಳಲ್ಲಿ ಗೋಬರ್ ಗ್ಯಾಸ್ ಅನಿಲ ಸ್ಥಾವರ ಸ್ಥಾಪನೆಯಾದ ನಂತರ, ಅದರ ಡ್ರಮ್‌ಗೆ ಗೋಯ್ ಹಣ್ಣನ್ನು ಜಜ್ಜಿ ಹಾಕುವ ಪದ್ಧತಿ ಬಂತು; ಅದನ್ನು ಸಗಣಿಯ ಜತೆ ಸೇರಿಸಿ ಹಾಕಿದರೆ, ಹೆಚ್ಚು ಗೋಬರ್ ಗ್ಯಾಸ್ ಉತ್ಪತ್ತಿಯಾಗುತ್ತದೆ ಎನ್ನುತ್ತಿದ್ದರು ಹಳ್ಳಿಯ ಜನರು; ಇಂದಿನ ಸಿಲಿಂಡರ್ ಗ್ಯಾಸ್ ರೀತಿಯೇ, ಗ್ಯಾಸ್ ಸ್ಟೌನಲ್ಲಿ ಉರಿಯುತ್ತಿದ್ದ ಆ ಗೋಬರ್ ಗ್ಯಾಸ್, ಹಳ್ಳಿಯ ಜನರಿಗೆ ಅಡುಗೆಯನ್ನು ಬಹಳ ಸುಲಭ ಮಾಡಿದ್ದಂತೂ, ಅಂದಿನ ಸತ್ಯ. ಅದಕ್ಕೆ ಗೋಯ್ ಹಣ್ಣಿನ ಕೊಡುಗೆಯೂ ಇರುವುದು ವಿಶೇಷ.

ನಮ್ಮ ಮನೆ ಹಿಂದಿನ ಹಕ್ಕಲಿನ ತುದಿಯಲ್ಲಿ ಕೆಲವು ಮಧ್ಯಮ ಗಾತ್ರದ ಮರಗಳಿದ್ದವು. ನಮ್ಮ ಪಿಯು ಮತ್ತು ಪದವಿ ಪರೀಕ್ಷೆಗಳ ಸಮಯದಲ್ಲಿ, ಹಿಂದೆ ಮತ್ತು ಮುಂದೆ, ಹಲವು ವಾರಗಳ ಕಾಲ ರಜೆ ಇರುತ್ತಿತ್ತು; ಆ ಪರೀಕ್ಷೆಗಳಿಗೆ ಅಧ್ಯಯನ ಮಾಡಲೆಂದು, ಬೆಳಿಗ್ಗೆ ತಿಂಡಿ ಮುಗಿಸಿ, ಹಕ್ಕಲಿಗೆ ಬಂದು 15 ಅಡಿ ಎತ್ತರವಿದ್ದ ಒಂದು ಮರವನ್ನು ಹತ್ತಿ ಕುಳಿತರೆ, ಮಧ್ಯಾಹ್ನದ ಊಟದ ತನಕವೂ ಅದೇ ನನ್ನ ಸ್ಟಡಿ ಟೇಬಲ್. ಆ ರೀತಿ ಮರ ಹತ್ತಿ ಕುಳಿತು ಓದಿ, ಬೋರ್ ಆದಾಗ, ಇಳಿದು, ಆ ಹಕ್ಕಲಿನ ಯಾವ ಮರಗಳಲ್ಲಿ ಹಣ್ಣುಗಳಾಗಿವೆ ಎಂದು ಹುಡುಕುವ ಕೆಲಸ! ಅಲ್ಲೇ ಸನಿಹದಲ್ಲಿರುವ ವೈವಿಧ್ಯಮಯ ಮರಗಳಲ್ಲಿ, ಗೋಯ್ ಹಣ್ಣು, ಕಾಟು ಮಾವಿನ ಹಣ್ಣು, ಪುನರ್ಪುಳಿ ಹಣ್ಣು, ಹೆಬ್ಬಲಸಿನ ಹಣ್ಣುಗಳು ಬಣ್ಣ ಬಣ್ಣದಿಂದ ಅಂಬರದಲ್ಲಿ ಕಂಗೊಳಿಸುವಾಗ, ದೀರ್ಘಕಾಲ ಪುಸ್ತಕದಲ್ಲಿ ಮುಖ ಹುದುಗಿಸಿಕೊಂಡು ಕುಳಿತಿರಲು ಹೇಗೆ ತಾನೆ ಸಾಧ್ಯ? ಆಗಾಗ ಕುಳಿತ ಮರದಿಂದ ಕೆಳಗಿಳಿದು ಬಂದು, ಯಾವುದಾದರೂ ಒಂದು ಹಣ್ಣನ್ನು ಸ್ವಾಹಾ ಮಾಡಿ, ಪುನಃ ಅಧ್ಯಯನ. ಈ ರೀತಿ ಅಧ್ಯಯನ ಮಾಡಿದ ನಂತರ, ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಅಷ್ಟಕ್ಕಷ್ಟೇ! ಆದರೆ, ಆ ಸುತ್ತಲೂ ಯಾವ ಯಾವ ತಿಂಗಳುಗಳಲ್ಲಿ, ಅದರಲ್ಲೂ ಬೇಸಗೆಯಲ್ಲಿ, ಯಾವ ಯಾವ ಮರಗಳಲ್ಲಿ ಯಾವ ರೀತಿಯ ಹಣ್ಣುಗಳು ಬಿಡುತ್ತಿವೆ, ಅದರಲ್ಲಿ ಯಾವ ಹಣ್ಣು ಹೆಚ್ಚು ರುಚಿಕರ ಎಂದು ಪತ್ತೆ ಮಾಡಿ, ನೆನಪಿನಲ್ಲಿಟ್ಟುಕೊಳ್ಳಲು ಈ ಚಟುವಟಿಕೆಯಿಂದ ಸಾಧ್ಯವಾಯಿತು!

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕನಿಷ್ಠ ಮಾತ್ರ ಲಜ್ಜೆ ಬೇಡವೇ...?

ಕೆಎಎಸ್ 384 ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಯ ಮುಖ್ಯ ಪರೀಕ್ಷೆಯಲ್ಲಿ ಸುಮಾರು 36 ಸಾವಿರ ಅಭ್ಯರ್ಥಿಗಳು 2025 ಮೇ ತಿಂಗಳಲ್ಲಿ ಪರೀಕ್ಷೆ ಬರೆದಿದ್ದು, ಮೌಲ್ಯಮಾಪನ ಮುಗಿದು ಫಲಿತಾಂಶ ಪ್ರಕಟಿಸಲಾಗಿದೆ. ಆದರೆ, ರಾಜ್ಯಲೆಕ್ಕಪರಿಶೋಧನ ಇಲಾಖೆಯ ಎಸಿ ಮತ್ತು ಎಎ ಒಟ್ಟು 87 ಹುದ್ದೆಗಳಿಗೆ 2025 ಏಪ್ರಿಲ್‌ನಲ್ಲಿ 12 ಸಾವಿರ ಅಭ್ಯರ್ಥಿಗಳು ಮುಖ್ಯ ಪರೀಕ್ಷೆ ಬರೆದಿದ್ದಾರೆ. ಆದರೆ, ಈತನಕ ಫಲಿತಾಂಶ ಪ್ರಕಟಿಸಿಲ್ಲ, ಕೆಪಿಎಸ್‌ಸಿ ಕಚೇರಿಗೆ ದೂರವಾಣಿ ಮೂಲಕ ವಿಚಾರಿಸಿದರೆ ವಿಚಾರಣಾ ಕೇಂದ್ರದ ಸಿಬ್ಬಂದಿಯವರು ಮೌಲ್ಯಮಾಪನ ಕಾರ್ಯ ಪ್ರಾರಂಭವೇ ಆಗಿಲ್ಲ ಎನ್ನುತ್ತಾರೆ. ದಿನಪತ್ರಿಕೆಗಳಲ್ಲಿ ಧಾರಾವಾಹಿಯಂತೆ ಟೀಕೆ ಅಸಮಾಧಾನ ಪ್ರಕಟವಾಗಿದೆ. ಆದರೆ, ಈ ಭ್ರಷ್ಟ ಕೆಪಿಎಸ್‌ಸಿ ಸಂಸ್ಥೆಯ ಕಾರ್ಯದರ್ಶಿ, ಅಧ್ಯಕ್ಷರು, ಸದಸ್ಯರಿಗೆ ಕನಿಷ್ಠ ಮಾತ್ರದ ಲಜ್ಜೆಯಾದರೂ ಬೇಡವೇ...?

– ಎಸ್.ಎನ್. ರಮೇಶ್, ಸಾತನೂರು, ಮಂಡ್ಯ

ಗೌರವ ಕಳೆದುಕೊಂಡ ಸಾಹಿತಿ

ಪತ್ನಿಯ ಗೌರವಕ್ಕಾಗಿ ಪೆಟ್ಟು ತಿಂದ ಸಾಹಿತಿ, ವಿಷಯ ಬಹಳ ಆಸಕ್ತಿದಾಯಕ ಅನಿಸಿದರೂ, ಈ ಬರಹದಲ್ಲಿ ರಾಜಕೀಯ ಇಲ್ಲದ ಕ್ಷೇತ್ರದ ಕುರಿತೂ ಚರ್ಚಿಸಲಾಗಿದೆ. ರಾಜಕೀಯ ಇಲ್ಲದ ಕ್ಷೇತ್ರ ಹುಡುಕುವುದೂ ಒಂದೇ, ಸಾವಿಲ್ಲದ ಮನೆಯ ಸಾಸಿವೆ ಹುಡುಕುವುದೂ ಒಂದೇ. ಎರಡೂ ವ್ಯರ್ಥ ಪ್ರಯತ್ನ. ಕಾರಣ, ಇಂದು, ಪವಿತ್ರ ಕ್ಷೇತ್ರ ಅಂದುಕೊಂಡ ಶಿಕ್ಷಣ ಕ್ಷೇತ್ರವೂ ರಾಜಕೀಯದಿಂದ ಹೊರತಲ್ಲ, ಅದರಂತೆ, ಸಾಹಿತ್ಯ ಕ್ಷೇತ್ರ.

ಸಾಹಿತ್ಯ ವಲಯದಲ್ಲಿ ಬಹುಮುಖ್ಯವಾಗಿ ಕೇಳಿಬರುವುದೇ 'ಕೃತಿ ಚೌರ್ಯ'. ಆದರೆ, ಒಂದು ಕೃತಿಯಲ್ಲಿ ಬಳಸಿದ ಪದಗಳು ಇನ್ನೊಂದು ಕೃತಿಯಲ್ಲಿ ಬಳಸಲ್ಪಟ್ಟರೆ ಅದೂ ಕೃತಿ ಚೌರ್ಯವೇ? ಲೇಖಕರು ಉದಾಹರಿಸಿದ ಘಟನೆಯಲ್ಲಿ ಇದೇ ಎದ್ದು ಕಾಣುವಂತಿದೆ. ಒಂದೇ ಘಟನೆ ನಡೆದಾಗ, ಬರೆಯುವವರ ಬರಹದ ತಾಕತ್ತು, ವಸ್ತುವನ್ನು ಗ್ರಹಿಸುವ ರೀತಿ, ಆಲೋಚನಾ ಮತ್ತು ವಿಮರ್ಶಾತ್ಮಕ ಶಕ್ತಿಗಳಿಗನುಸಾರ ಬರಹ ಅಂತಿಮ ರೂಪು ತಾಳುತ್ತದೆ ಎಂಬುದು ಎಷ್ಟು ಸರಿ? ಅವನ್ನು ವಿವರಿಸುವಾಗ ಕೆಲ ಪದಗಳು ಒಂದೇ ರೀತಿ ಇದ್ದರೆ ಅದು ಸಾಹಿತ್ಯ ಕಳ್ಳತನವಾದೀತೆ? ವಿಷಯ ಮಂಡನೆ ಭಿನ್ನವಿದ್ದರೂ, ಇರುವುದನ್ನು ಇದ್ದಹಾಗೆ ವರ್ಣಿಸುವಲ್ಲಿ ಕೆಲವೊಂದು ನಿರ್ದಿಷ್ಟ ಪದ ಬಳಕೆ ಆದರೇನೇ ಅದಕ್ಕೊಂದು ಅರ್ಥ ಬರುವುದು. ಆದರೆ, ಇದನ್ನೇ ದೊಡ್ಡ ವಿಷಯವಾಗಿಸಿ ಕಪಾಳ ಮೋಕ್ಷ ಮಾಡುವಲ್ಲಿಗೆ ತಲುಪುತ್ತದೆ ಅಂದರೆ, ಬದುಕು-ಬರಹಗಳ ಮಧ್ಯ ಯಾವುದೇ ಹೊಂದಾಣಿಕೆ ಇಲ್ಲ ಅಂತಲೇ ಅಲ್ಲವೇ? ಆ ಇಬ್ಬರೂ ಮಹಾಶಯರು, ಅಂದಿನ ರಷ್ಯಾ ಪರಿಸ್ಥಿತಿಯನ್ನು ವಿವರಿಸುವಾಗ, ಕೆಲ ಸಲಹೆ-ಸೂಚನೆಗಳನ್ನೂ ಕೊಟ್ಟಿರಲು ಸಾಕು. ಆದರೆ, ಅವುಗಳನ್ನು ತಾವೇ ಅಳವಡಿಸಿಕೊಳ್ಳಲು ವಿಫಲರಾದರೆ ಬರಹದ ಮಹತ್ವ ಏನಾಯಿತು. ನಮ್ಮಲ್ಲಿ ಹೆಚ್ಚಿನ ಸಂದರ್ಭ ಇದೇ ಆಗುವುದು. ಕೇವಲ ಬರಹ, ಭಾಷಣ, ಉಪನ್ಯಾಸಗಳಲ್ಲಿ ದೊಡ್ಡ ದೊಡ್ಡ ತತ್ವ, ಸಿದ್ಧಾಂತ, ಸಂಸ್ಕೃತಿ, ಆಚರಣೆ ವಿಷಯ ಮಾತಾಡುವುದು. ಆದರೆ ಅವರ ವೈಯಕ್ತಿಕ ಬದುಕಿನಲ್ಲೇ ಅವಾವುದೂ ಇರುವುದಿಲ್ಲ, ಹೀಗಾಗಿ, ಒಳ್ಳೆಯ ವಿಚಾರ ಮಂಡಿಸುವವರ ನಡತೆಯೂ ಒಳ್ಳೆಯದೇ ಇರುತ್ತದೆ ಎಂಬ ತೀರ್ಮಾನಕ್ಕೂ ಬರಲಾಗದು. ಅದಕ್ಕೇ ಅನ್ನುವುದು Preaching is easy not to practice ಅಂತ.

ಆದರೊಂದು, ನೊಬೆಲ್ ಪುರಸ್ಕೃತರ ಬಾಯಿಂದಲೂ ಎಂತೆಂಥ ಕೀಳುಮಟ್ಟದ ಮಾತುಗಳು ಹೊರಹೊಮ್ಮುತ್ತವೆ ಅಂದರೆ, ನಡತೆಗೂ ಬರಹಕ್ಕೂ ಸಂಬಂಧವೇ ಇಲ್ಲ ಅನ್ನುವಷ್ಟು, ಇದು ನಮ್ಮ ನಿಜ ಜೀವನದಲ್ಲೂ ಕಾಣಬಹುದಾದ ಸಂಗತಿ. ಅದೆಷ್ಟೋ 'ಸುಶಿಕ್ಷಿತರು' ಅಂದುಕೊಂಡವರ ಬಾಯಿಂದ ಬರುವ ಪದಗಳನ್ನು ಕೇಳಿದರೇ ಅಸಹ್ಯವೆನಿಸಿಬಿಡುತ್ತದೆ. ಇಂಥವರನ್ನು ನಿಜಕ್ಕೂ ಶಿಕ್ಷಣವಂತರು ಅನ್ನಬಹುದೆ ಎನ್ನುವಷ್ಟು, ಇಷ್ಟಾದರೂ, ಗೌರವ, ಸನ್ಮಾನ, ಪ್ರಶಸ್ತಿಗಳು ಮಾತ್ರ ಅಂಥವರ ಕೊರಳಿಗೇ?

– ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ.

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಸೋಮನಾಥ ಮತ್ತು ಭಾರತದ ಅಜೇಯ ಚೈತನ್ಯ!

ಭಕ್ತಿ - ಭಾವ
ನರೇಂದ್ರ ಮೋದಿ
vveditoped@gmail.com

2026ರ ಆರಂಭದಲ್ಲಿ, ಸೋಮನಾಥ ದೇವಾಲಯದ ಮೇಲಿನ ಮೊದಲ ದಾಳಿಗೆ ಸಾವಿರ ವರ್ಷಗಳು ತುಂಬಿದ ನೆನಪಿಗಾಗಿ ನಡೆದ 'ಸೋಮನಾಥ ಸ್ವಾಭಿಮಾನ ಪರ್ವ'ದಲ್ಲಿ ನಾನು ಭಾಗವಹಿಸಿದ್ದೆ. ಈಗ, ಭಾರತದ ಅಂದಿನ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರು ಪುನರ್ನಿರ್ಮಿತ ದೇವಾಲಯವನ್ನು ಉದ್ಘಾಟಿಸಿ 75 ವರ್ಷಗಳಾದ ಸಂದರ್ಭದಲ್ಲಿ, ಮೇ 11ರಂದು ನಾನು ಮತ್ತೆ ಸೋಮನಾಥಕ್ಕೆ ಭೇಟಿ ನೀಡಲಿದ್ದೇನೆ. ಅರ್ಧ ವರ್ಷದೊಳಗೆ, ಸೋಮನಾಥಕ್ಕೆ ಸಂಬಂಧಿಸಿದ ಎರಡು ಪ್ರಮುಖ ಮೈಲಿಗಲ್ಲುಗಳಿಗೆ ಮತ್ತು ಅದರ ವಿನಾಶದಿಂದ ಪುನರುತ್ಥಾನದವರೆಗೆ ಅಥವಾ ನಾವು 'ವಿಧ್ವಂಸದಿಂದ ಸೃಜನೆ'ಯತ್ತ ಎಂದು ಕರೆಯುವ ಪಯಣಕ್ಕೆ ಸಾಕ್ಷಿಯಾಗುತ್ತಿರುವುದು ನನ್ನ ಸೌಭಾಗ್ಯವಾಗಿದೆ.

ಸೋಮನಾಥವು ನಮಗೆ ನಾಗರಿಕತೆಯ ಸಂದೇಶ ನೀಡುತ್ತದೆ. ಅದರ ಮುಂದಿರುವ ವಿಶಾಲ ಸಮುದ್ರವು ಕಾಲಾತೀತತೆಯ ಭಾವವನ್ನು ಮೂಡಿಸುತ್ತದೆ. ಎಂತಹ ಭೀಕರ ಬಿರುಗಾಳಿಗಳೇ ಇರಲಿ ಅಥವಾ ಸಮುದ್ರದ ಅಲೆಗಳು ಎಷ್ಟೇ ಪ್ರಕ್ಷುಬ್ಧವಾಗಿರಲಿ, ಮನುಷ್ಯ ಯಾವಾಗಲೂ ಘನತೆ ಮತ್ತು ಶಕ್ತಿಯೊಂದಿಗೆ ಮರಳಿ ಮೇಲೆದ್ದು ಬರಬಹುದು ಎಂದು ಆ ಅಲೆಗಳು ನಮಗೆ ಸಾರುತ್ತಿವೆ. ಕಡಲ ಅಲೆಗಳು ಮತ್ತೆ ತೀರಕ್ಕೆ ಮರಳುವ ರೀತಿ, ಜನರ ಚೈತನ್ಯವನ್ನು ದೀರ್ಘಕಾಲದವರೆಗೆ ಹತ್ತಿಕ್ಕಲು ಸಾಧ್ಯವಿಲ್ಲ ಎಂಬುದನ್ನು ಪ್ರತಿ ಪೀಳಿಗೆಗೂ ನೆನಪಿಸುವಂತಿದೆ.

ನಮ್ಮ ಪುರಾತನ ಗ್ರಂಥಗಳು ಹೇಳುವಂತೆ: ಪ್ರಭಾಸಂ ಚ ಪರಿಕ್ರಮ್ಯ ಪೃಥಿವೀಕ್ರಮಸಂಭವಮ್. ಇದರರ್ಥ, ಪವಿತ್ರ ಪ್ರಭಾಸ ಕ್ಷೇತ್ರದ (ಸೋಮನಾಥ) ಪ್ರದಕ್ಷಿಣೆಯು ಇಡೀ ಭೂಮಂಡಲದ ಪ್ರದಕ್ಷಿಣೆಗೆ ಸಮಾನವಾದುದು! ಇಲ್ಲಿಗೆ ಜನರು ಪ್ರಾರ್ಥನೆ ಸಲ್ಲಿಸಲು ಬಂದಾಗಲೆಲ್ಲಾ, ಎಂದಿಗೂ ಆರಿಹೋಗದ ನಾಗರಿಕತೆಯ ಜ್ವಾಲೆಯ ನಿರಂತರತೆಯನ್ನು ಅನುಭವಿಸಿದ್ದಾರೆ. ಸಾಮ್ರಾಜ್ಯಗಳು ಉದಯಿಸಿದವು ಮತ್ತು ಪತನಗೊಂಡವು, ಕಾಲದ ಅಲೆಗಳು ಬದಲಾದವು, ಇತಿಹಾಸವು ಆಕ್ರಮಣ ಮತ್ತು ಏರುಪೇರುಗಳ ನಡುವೆ ಸಾಗಿತು. ಆದರೂ, ಸೋಮನಾಥವು ನಮ್ಮ ಪ್ರಜ್ಞೆಯಲ್ಲಿ ಚಿರಸ್ಥಾಯಿಯಾಗಿ ಉಳಿದುಬಂದಿದೆ.

ದಬ್ಬಾಳಿಕೆಯ ಮುಂದೆ ಎದೆಯುಬ್ಬಿಸಿ ನಿಂತ ಅಸಂಖ್ಯಾತ ಮಹನೀಯರನ್ನು ಸ್ಮರಿಸುವ ಸಮಯವಿದು. ಲಕುಲೀಶ ಮತ್ತು ಸೋಮ ಶರ್ಮನ್ ಅವರು ಪ್ರಭಾಸ ಕ್ಷೇತ್ರವನ್ನು ತತ್ವಶಾಸ್ತ್ರದ ಮಹಾನ್ ಕೇಂದ್ರವಾಗಿ ಪರಿವರ್ತಿಸಿದ್ದರು. ವಲ್ಲಭಿಯ ಚಕ್ರವರ್ತಿ ಮಹಾರಾಜ ನಾಲ್ಕನೇ ಧರ್ಮಸೇನ ಶತಮಾನಗಳ ಹಿಂದೆ ಇಲ್ಲಿ ಎರಡನೇ ದೇವಾಲಯವನ್ನು ನಿರ್ಮಿಸಿದನು. ಆಕ್ರಮಣಗಳ ವಿರುದ್ಧ ನಾಗರಿಕತೆಯ ಗೌರವವನ್ನು ರಕ್ಷಿಸಿದ್ದಕ್ಕಾಗಿ ಭೀಮದೇವ, ಜಯಪಾಲ ಮತ್ತು ಆನಂದಪಾಲರನ್ನು ಯಾವಾಗಲೂ ಸ್ಮರಿಸಲಾಗುತ್ತದೆ. ರಾಜ ಭೋಜ ಕೂಡ ಪುನರ್ನಿರ್ಮಾಣ ಕಾರ್ಯದಲ್ಲಿ ನೆರವಾಗಿದ್ದನೆಂದು ಹೇಳಲಾಗುತ್ತದೆ. ಗುಜರಾತ್‌ನ ರಾಜಕೀಯ ಮತ್ತು ಸಾಂಸ್ಕೃತಿಕ ಶಕ್ತಿಯನ್ನು ಮರುಸ್ಥಾಪಿಸುವಲ್ಲಿ ಕರ್ಣ ದೇವ ಮತ್ತು ಸಿದ್ಧರಾಜ ಜಯಸಿಂಹ ಪ್ರಮುಖ ಪಾತ್ರ ವಹಿಸಿದ್ದರು. ಭಾವ ಬೃಹಸ್ಪತಿ, ಕುಮಾರಪಾಲ ಸೋಲಂಕಿ ಮತ್ತು ಪಾಶುಪತ ಆಚಾರ್ಯರು ಈ ಕ್ಷೇತ್ರವನ್ನು ಮಹಾನ್ ಆರಾಧನಾ ಮತ್ತು ಕಲಿಕಾ ಕೇಂದ್ರವಾಗಿ ಮರುನಿರ್ಮಿಸಿ, ಪೋಷಿಸಿದರು. ವಿಶಾಲದೇವ ವಘೇಲಾ ಮತ್ತು ತ್ರಿಪುರಾಂತಕರು ಇದರ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಂಪ್ರದಾಯಗಳನ್ನು ರಕ್ಷಿಸಿದರು. ವಿನಾಶದ ನಂತರ ಪೂಜಾ ಕೈಂಕರ್ಯಗಳನ್ನು ಪುನಶ್ಚೇತನಗೊಳಿಸುವಲ್ಲಿ ಮಹಿಪಾಲದೇವ ಮತ್ತು ರಾ ಖೆಂಗಾರ್ ಅವರು ಕಾರಣಕರ್ತರಾದರು. ಕಠಿಣ ಸಂದರ್ಭಗಳಲ್ಲೂ ಭಕ್ತಿಯ ನಿರಂತರತೆಯನ್ನು ಖಚಿತಪಡಿಸಿದ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜನ್ಮ ಶತಮಾನೋತ್ಸವವನ್ನು ಈಗ ಆಚರಿಸಲಾಗುತ್ತಿದೆ. ಯಾತ್ರಾರ್ಥಿಗಳ

ಹಕ್ಕುಗಳನ್ನು ರಕ್ಷಿಸಿದ ಬರೋಡಾದ ಗಾಯಕ್ವಾಡ್‌ಗಳೂ ಇದ್ದರು ಮತ್ತು ಮುಖ್ಯವಾಗಿ, ಸೋಮನಾಥದ ಜೀವಂತ ಸ್ಮೃತಿಯ ಭಾಗವಾಗಿರುವ ತಮ್ಮ ತ್ಯಾಗ ಮತ್ತು ಸಾಹಸಕ್ಕಾಗಿ ವೀರ ಹಮೀರ್ಜಿ ಗೋಹಿಲ್ ಮತ್ತು ವೀರ ವೆಗ್ಡಾಜಿ ಭೀಲ್ ಅವರಂತಹ ಶೂರ ವ್ಯಕ್ತಿಗಳನ್ನು ಪೋಷಿಸಿದ ನಮ್ಮ ಮಣ್ಣು ಧನ್ಯವಾದುದು.

1940ರ ದಶಕದಲ್ಲಿ, ಭಾರತದಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹರಡಿದ್ದಾಗ ಮತ್ತು ಸರ್ದಾರ್ ಪಟೇಲರಂತಹ ಮಹೋನ್ನತ ನಾಯಕರ ನೇತೃತ್ವದಲ್ಲಿ ಹೊಸ ಗಣರಾಜ್ಯಕ್ಕೆ ಅಡಿಪಾಯ ಹಾಕುವಾಗ, ಒಂದು ವಿಷಯವು ಅವರನ್ನು ಗಾಢವಾಗಿ ಕಾಡುತ್ತಲೇ ಇತ್ತು... ಅದು ಸೋಮನಾಥದ ಸ್ಥಿತಿ. 1947ರ ನವೆಂಬರ್ 13ರಂದು, ದೀಪಾವಳಿಯ ಸಮಯದಲ್ಲಿ, ಅವರು ದೇವಾಲಯದ ಶಿಥಿಲಗೊಂಡ ಅವಶೇಷಗಳ ಪಕ್ಕದಲ್ಲಿ ನಿಂತು, ಕೈಯಲ್ಲಿ ಸಮುದ್ರದ ನೀರನ್ನು ಹಿಡಿದು ಹೀಗೆ ಹೇಳಿದರು– ಹೊಸ ವರ್ಷದ ಈ ಶುಭ ದಿನದಂದು, ಸೋಮನಾಥವನ್ನು ಪುನರ್ನಿರ್ಮಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಸೌರಾಷ್ಟ್ರದ ಜನರೇ, ನೀವು ನಿಮ್ಮ ಕೈಲಾದಷ್ಟು ಶ್ರಮಿಸಬೇಕು. ಇದು ಎಲ್ಲರೂ ಪಾಲ್ಗೊಳ್ಳಬೇಕಾದ ಪವಿತ್ರ ಕಾರ್ಯವಾಗಿದೆ. ಸರ್ದಾರ್ ಪಟೇಲರ ಈ ಒಂದು ಸ್ಪಷ್ಟ ಕರೆಗೆ, ಕೇವಲ ಗುಜರಾತ್‌ನ ಜನತೆ ಮಾತ್ರವಲ್ಲದೆ ಇಡೀ ಭಾರತದ ಜನತೆಯೂ ಉತ್ಸಾಹದಿಂದ ಸ್ಪಂದಿಸಿದರು.

ದುರದೃಷ್ಟವಶಾತ್, ಸರ್ದಾರ್ ಪಟೇಲರು ಅತೀವ ಆಸಕ್ತಿಯಿಂದ ಕಂಡ ಕನಸಿನ ಸಾಕಾರವನ್ನು ಕಣ್ಣಾರೆ ಕಾಣಲು ವಿಧಿ ಅವರಿಗೆ ಅವಕಾಶ ನೀಡಲಿಲ್ಲ. ಪುನರ್ನಿರ್ಮಿತ ಸೋಮನಾಥ ದೇವಾಲಯವು ಭಕ್ತರಿಗಾಗಿ ತನ್ನ ಬಾಗಿಲುಗಳನ್ನು ತೆರೆಯುವ ಮೊದಲೇ ಅವರು ಈ ಲೋಕವನ್ನು ಅಗಲಿದ್ದರು. ಆದರೂ, ಅವರ ಪ್ರಭಾವವು ಪ್ರಭಾಸ ಪಟ್ಟಣದ ಪವಿತ್ರ ತೀರಗಳಲ್ಲಿ ಅನುರಣಿಸುತ್ತಲೇ ಇತ್ತು. ಅವರ ದೃಷ್ಟಿಕೋನವನ್ನು ಕೆ.ಎಂ. ಮುನ್ಶಿಯವರು ಮುಂದುವರಿಸಿದರು ಮತ್ತು ಅವರಿಗೆ ನವನಗರದ ಜಾಮ್‌ಸಾಹೇಬರು ಸಮರ್ಥ ಬೆಂಬಲ ನೀಡಿದರು. 1951ರಲ್ಲಿ ದೇವಾಲಯದ ನಿರ್ಮಾಣ ಪೂರ್ಣಗೊಂಡಾಗ, ಉದ್ಘಾಟನಾ ಸಮಾರಂಭಕ್ಕೆ ಭಾರತದ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್ ಅವರನ್ನು ಆಹ್ವಾನಿಸಲು ನಿರ್ಧರಿಸಲಾಯಿತು. ಅಂದಿನ ಪ್ರಧಾನಮಂತ್ರಿ ಪಂಡಿತ್ ನೆಹರೂ ಅವರ ತೀವ್ರ ವಿರೋಧವನ್ನೂ ಮೀರಿ, ಡಾ. ಪ್ರಸಾದ್ ಅವರು ಸಮಾರಂಭದಲ್ಲಿ ಭಾಗವಹಿಸಿದರು. ತನ್ಮೂಲಕ ಆ ಕ್ಷಣವನ್ನು ಮತ್ತಷ್ಟು ವಿಶೇಷ ಮತ್ತು ಐತಿಹಾಸಿಕವಾಗಿಸಿದರು.

ನನ್ನ ಮನಸ್ಸು 2001ರ ಅಕ್ಟೋಬರ್ ತಿಂಗಳಿಗೂ ಮರಳುತ್ತಿದೆ, ಆಗಷ್ಟೇ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೆ. 2001ರ ಅಕ್ಟೋಬರ್ 31, ಸರ್ದಾರ್ ಪಟೇಲರ ಜಯಂತಿಯ ದಿನದಂದು, ಸೋಮನಾಥ ದೇವಾಲಯವು ತನ್ನ ಬಾಗಿಲುಗಳನ್ನು ತೆರೆದು 50 ವರ್ಷಗಳಾದ ಸವಿನೆನಪಿಗಾಗಿ ಕಾರ್ಯಕ್ರಮವೊಂದನ್ನು ಆಯೋಜಿಸುವ ಗೌರವ ಗುಜರಾತ್ ಸರ್ಕಾರಕ್ಕೆ ಲಭಿಸಿತ್ತು. ಇದು ಸರ್ದಾರ್ ಪಟೇಲರ 125ನೇ ಜನ್ಮ ಜಯಂತಿಯ ಆಚರಣೆಯ ಸಮಯವೂ ಆಗಿತ್ತು. ಅಂದಿನ ಪ್ರಧಾನಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಅಂದಿನ ಗೃಹ ಸಚಿವರಾದ ಎಲ್.ಕೆ. ಆಡ್ವಾಣಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

1951ರ ಮೇ 11ರಂದು ನೀಡಿದ ತಮ್ಮ ಭಾಷಣದಲ್ಲಿ, ಡಾ. ರಾಜೇಂದ್ರ ಪ್ರಸಾದ್ ಅವರು ಸೋಮನಾಥ ದೇವಾಲಯವು ಜಗತ್ತಿಗೆ ಸಾರುವುದೇನೆಂದರೆ, ಅಪ್ರತಿಮ ನಂಬಿಕೆ ಮತ್ತು ಪ್ರೀತಿಯನ್ನು ಹೊಂದಿರುವ ಯಾವುದನ್ನೇ ಆಗಲಿ ನಾಶಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಈ ದೇವಾಲಯವು ಜನರ ಹೃದಯಗಳಲ್ಲಿ ನೆಲೆಸಲಿದೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು. ದೇವಾಲಯದ ಪುನರ್ನಿರ್ಮಾಣವು ಸರ್ದಾರ್ ಪಟೇಲರ ಕನಸಿನ ಸಾಕಾರವಾಗಿದೆ. ಆದರೆ, ಅದೇ ಸ್ಫೂರ್ತಿಯನ್ನು ಮುಂದಕ್ಕೆ ಕೊಂಡೊಯ್ಯುತ್ತಾ, ಜನರ ಜೀವನದಲ್ಲಿ ಸಮೃದ್ಧಿಯನ್ನು ಮರಳಿ ತರುವುದು ಮುಖ್ಯ, ಎಂದು ಅವರು ಹೇಳಿದರು. ಇವು ಅವರು ನೀಡಿದ ಪ್ರಮುಖ ಮತ್ತು ಸ್ಫೂರ್ತಿದಾಯಕ ಸಂದೇಶಗಳಾಗಿವೆ.

ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ನಾವು ಇದೇ ಹಾದಿಯಲ್ಲಿ ಸಾಗುತ್ತಿದ್ದೇವೆ. 'ವಿಕಾಸದ ಜೊತೆಗೆ ಪರಂಪರೆ' (ವಿಕಾಸ್ ಭಿ, ವಿರಾಸತ್ ಭಿ) ಎಂಬ ತತ್ವದಿಂದ ಸ್ಫೂರ್ತಿ ಪಡೆದು, ಸೋಮನಾಥದಿಂದ ಕಾಶಿಯವರೆಗೆ, ಕಾಮಾಖ್ಯದಿಂದ ಕೇದಾರನಾಥದವರೆಗೆ, ಅಯೋಧ್ಯೆಯಿಂದ ಉಜ್ಜಯಿನಿಯವರೆಗೆ ಹಾಗೂ ತ್ರಯಂಬಕೇಶ್ವರದಿಂದ ಶ್ರೀಶೈಲದವರೆಗೆ, ನಮ್ಮ ಆಧ್ಯಾತ್ಮಿಕ ಕೇಂದ್ರಗಳ ಸಾಂಪ್ರದಾಯಿಕ ಸ್ವರೂಪವನ್ನು ಸಂರಕ್ಷಿಸುತ್ತಲೇ ಅವುಗಳನ್ನು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸುವ ಅವಕಾಶ ನಮ್ಮ ತಂಡಕ್ಕೆ ಲಭಿಸಿರುವುದನ್ನು ನಾನು ನನ್ನ ಸೌಭಾಗ್ಯವೆಂದು ಪರಿಗಣಿಸುತ್ತೇನೆ. ಇದರೊಂದಿಗೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನಗಳು ಹೆಚ್ಚಿನ ಜನರು ಈ ಸ್ಥಳಗಳಿಗೆ ಭೇಟಿ ನೀಡುವುದನ್ನು ಖಚಿತಪಡಿಸುತ್ತವೆ. ಇದು ಸ್ಥಳೀಯ ಆರ್ಥಿಕತೆಯನ್ನು ಉತ್ತೇಜಿಸುತ್ತದೆ, ಜೀವನೋಪಾಯವನ್ನು ಭದ್ರಪಡಿಸುತ್ತದೆ ಮತ್ತು 'ಏಕ್ ಭಾರತ, ಶ್ರೇಷ್ಠ ಭಾರತ'ದ ಸ್ಫೂರ್ತಿಯನ್ನು ಗಾಢವಾಗಿಸುತ್ತದೆ.

ಸೋಮನಾಥವನ್ನು ರಕ್ಷಿಸಲು ಪ್ರಾಣ ಅರ್ಪಿಸಿದವರ ಮತ್ತು ಅದನ್ನು ಪದೇ ಪದೇ ಪುನರ್ನಿರ್ಮಿಸಿದವರ ಹೋರಾಟಗಳು ಮತ್ತು ತ್ಯಾಗಗಳನ್ನು ಎಂದಿಗೂ ಮರೆಯಲಾಗುವುದಿಲ್ಲ. ಭಾರತದ ವಿವಿಧ ಮೂಲೆಗಳಿಂದ ಬಂದ ಅಸಂಖ್ಯಾತ ವ್ಯಕ್ತಿಗಳು ಅದರ ವೈಭವವನ್ನು ಮರುಸ್ಥಾಪಿಸಲು ಕೊಡುಗೆ ನೀಡಿದ್ದಾರೆ. ಅವರು ಭಾರತದ ಪ್ರತಿಯೊಂದು ಭಾಗವನ್ನೂ ಪವಿತ್ರವೆಂದು ಕಂಡರು, ಭೌಗೋಳಿಕತೆಯನ್ನು ಮೀರಿದ ಏಕತೆಯ ಭಾವನೆಯಿಂದ ಅವರು ಒಂದಾಗಿದ್ದರು. ವಿಭಜನೆಗಳಿಂದ ಕೂಡಿದ ಇಂದಿನ ಜಗತ್ತಿನಲ್ಲಿ, ಈ ಏಕತೆಯ ಮನೋಭಾವವು ಎಂದಿಗಿಂತಲೂ ಹೆಚ್ಚು ಪ್ರಸ್ತುತವಾಗಿದೆ. ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಏಕತೆಯ ಭಾವನೆ ಮತ್ತು ಸಾಮೂಹಿಕ ನಾಗರಿಕ ಪ್ರಜ್ಞೆ ಜೀವಂತವಾಗಿರುವುದರಿಂದ, ಸೋಮನಾಥವು ತನ್ನೆಲ್ಲಾ ವೈಭವದೊಂದಿಗೆ ಅಚಲವಾಗಿ ನಿಲ್ಲುವುದನ್ನು ಮುಂದುವರಿಸುತ್ತದೆ. ಇದಕ್ಕೆ ಗೌರವ ಸಲ್ಲಿಸುವ ಸಲುವಾಗಿ, ಸಾವಿರ ವರ್ಷಗಳ ಅಸಾಧಾರಣ ಶೌರ್ಯವನ್ನು ಸ್ಮರಿಸುತ್ತಾ, ಮುಂದಿನ ಸಾವಿರ ದಿನಗಳ ಕಾಲ ಸೋಮನಾಥದಲ್ಲಿ ವಿಶೇಷ ಪೂಜೆಗಳು ನಡೆಯಲಿವೆ. ಈ ಪೂಜೆಗಳಿಗಾಗಿ ಅನೇಕ ಜನರು ದೇಣಿಗೆ ನೀಡುತ್ತಿರುವುದು ಸಂತಸ ತಂದಿದೆ.

ಈ ವಿಶೇಷ ಸಮಯದಲ್ಲಿ ಸೋಮನಾಥಕ್ಕೆ ಪ್ರಯಾಣಿಸಬೇಕೆಂದು ನಾನು ಭಾರತೀಯರಲ್ಲಿ ವಿನಂತಿಸುತ್ತೇನೆ. ನೀವು ಸೋಮನಾಥದ ತೀರದಲ್ಲಿ ನಿಂತಾಗ, ಅಲ್ಲಿನ ಪ್ರಾಚೀನ ಪ್ರತಿಧ್ವನಿಗಳು ನಿಮ್ಮೊಂದಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನೀವು ಕೇವಲ ಭಕ್ತಿಪರವಶರಾಗುವುದು ಮಾತ್ರವಲ್ಲದೆ, ಎಂದಿಗೂ ಮಾಸದ, ಅಖಂಡವಾದ ಮತ್ತು ಅಚಲವಾದ ನಾಗರಿಕತೆಯ ಚೇತನದ ಬಲಿಷ್ಠ ನಾಡಿಮಿಡಿತವನ್ನು ಅನುಭವಿಸುವಿರಿ. ನೀವು ಭಾರತದ ಅಜೇಯ ಚೇತನವನ್ನು ಅನುಭವಿಸುವಿರಿ ಮತ್ತು ಎಷ್ಟೇ ಪ್ರಯತ್ನಗಳ ಹೊರತಾಗಿಯೂ ನಮ್ಮ ಸಂಸ್ಕೃತಿಯು ಏಕೆ ಪರಾಜಯಗೊಳ್ಳದೆ ಉಳಿಯಿತು ಎಂಬುದನ್ನು ಅರ್ಥಮಾಡಿಕೊಳ್ಳುವಿರಿ; ಅಷ್ಟೇ ಅಲ್ಲದೆ, ಶಾಶ್ವತ ವಿಜಯದ ದರ್ಶನವನ್ನು ಪಡೆಯುವ ಅವಕಾಶ ನಿಮ್ಮದಾಗಲಿದೆ. ಇದು ಖಂಡಿತವಾಗಿಯೂ ಮರೆಯಲಾಗದ ಅನುಭವವಾಗಲಿದೆ.

ಜೈ ಸೋಮನಾಥ.

(ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀ ಸೋಮನಾಥ ಟ್ರಸ್ಟ್‌ನ ಅಧ್ಯಕ್ಷರೂ ಆಗಿದ್ದಾರೆ.)

ದ್ರಾವಿಡ ಕಾಳಗ

ರಾ. ರಾಮಾರಾಧ್ಯ, ಮೈಸೂರು

ಕಾಮರಾಜ್ ನಂತರದ ತಮಿಳುನಾಡು ರಾಜಕೀಯ

ಕಾಮರಾಜ್ ಕಾಲದ ಕಾಂಗ್ರೆಸ್ ಪ್ರಭಾವದಿಂದ ದ್ರಾವಿಡ ಪಕ್ಷಗಳ ಉದಯದವರೆಗೆ ತಮಿಳುನಾಡು ರಾಜಕೀಯವು ಬದಲಾವಣೆಗಳನ್ನು ಕಂಡಿದೆ. ಕೆ. ಕಾಮರಾಜ್ ಅವರು ಬಲಿಷ್ಠ ನಾಯಕನಾಗಿದ್ದರು. ಅವರ ಆಡಳಿತ ಸಾಮರ್ಥ್ಯ ಮತ್ತು ಶಿಕ್ಷಣಾಭಿವೃದ್ಧಿಗೆ ಒತ್ತು ರಾಜ್ಯದಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸಿತು. ಆದರೆ, 1967ರ ಚುನಾವಣೆಯೊಂದಿಗೆ ಕಾಂಗ್ರೆಸ್ ಆಳ್ವಿಕೆಗೆ ತೆರೆ ಬಿದ್ದು, ದ್ರಾವಿಡ ಚಳವಳಿಯ ರಾಜಕೀಯ ಉದಯವಾಯಿತು.

ಈ ಸಂದರ್ಭದಲ್ಲಿ ಸಿ.ಎನ್.ಅಣ್ಣಾದೊರೈ ಅವರ ಡಿಎಂಕೆ ಅಧಿಕಾರಕ್ಕೆ ಬಂದು ತಮಿಳುನಾಡಿನ ದಿಕ್ಕನ್ನು ಬದಲಿಸಿತು. ಸಾಮಾಜಿಕ ನ್ಯಾಯ, ಭಾಷಾ ಗೌರವ ಮತ್ತು ಪ್ರಾದೇಶಿಕ ಅಸ್ತಿತ್ವವನ್ನು ಒತ್ತಿಹೇಳಿದ ಡಿಎಂಕೆ ಜನಮನ ಗೆದ್ದಿತು. ಅಣ್ಣಾದೊರೈ ನಂತರ ಕರುಣಾನಿಧಿ ಪಕ್ಷವನ್ನು ಮುಂದುವರಿಸಿ ದೀರ್ಘಕಾಲ ಪ್ರಭಾವ ಬೀರಿದರು. ಇದೇ ಸಮಯದಲ್ಲಿ ನಟ ಎಂ. ಜಿ. ರಾಮಚಂದ್ರನ್ ಡಿಎಂಕೆಯಿಂದ ಬೇರ್ಪಟ್ಟು ಎಐಡಿಎಂಕೆ ಸ್ಥಾಪಿಸಿದರು. ಮಧ್ಯಾಹ್ನದ ಬಿಸಿ ಊಟ ಯೋಜನೆ ಮತ್ತು ಇತರೆ ಕಾರ್ಯಕ್ರಮಗಳು ಅವರನ್ನು ತುತ್ತತುದಿಗೇರಿಸಿದವು. ಡಿಎಂಕೆ–ಎಐಎಡಿಎಂಕೆ ಎಂಬ ಪ್ರಮುಖ ಶಕ್ತಿಗಳ ನಡುವೆ ರಾಜಕೀಯ ಸ್ಪರ್ಧೆ ಆರಂಭವಾಯಿತು.

ಎಂಜಿಆರ್ ನಂತರ ಜೆ.ಜಯಲಲಿತಾ ಎಐಎಡಿಎಂಕೆ ಪಕ್ಷವನ್ನು ಮುನ್ನಡೆಸಿ ಬಲಿಷ್ಠ ನಾಯಕಿಯಾಗಿ ಹೊಮ್ಮಿದರು. ಅವರ ಅಮ್ಮಾ ಕ್ಯಾಂಟೀನ್ ಪ್ರಸಿದ್ಧಿಯಾಗಿ ಜನಪ್ರಿಯರಾದರು. ಹಲವು ವರ್ಷಗಳ ಕಾಲ ತೀವ್ರ ರಾಜಕೀಯ ಪೈಪೋಟಿ ನಡೆಯಿತು. 2016ರಲ್ಲಿ ಜಯಲಲಿತಾ ಮತ್ತು 2018ರಲ್ಲಿ ಕರುಣಾನಿಧಿ ನಿಧನದ ನಂತರ ತಮಿಳುನಾಡಲ್ಲಿ ಹೊಸ ಹಂತ ಆರಂಭವಾಯಿತು. ಎಂ.ಕೆ. ಸ್ಟಾಲಿನ್ ಡಿಎಂಕೆ ನಾಯಕತ್ವವನ್ನು ಸ್ವೀಕರಿಸಿ 2021ರಲ್ಲಿ ಅಧಿಕಾರಕ್ಕೆ ಬಂದರು. ಎಐಎಡಿಎಂಕೆಯಲ್ಲಿ ನಾಯಕತ್ವದ ಸಮಸ್ಯೆಗಳು ಕಾಣಿಸಿಕೊಂಡವು.

ಇದೇ ವೇಳೆ, ಭಾರತೀಯ ಜನತಾ ಪಾರ್ಟಿ ತನ್ನ ನೆಲೆ ವಿಸ್ತರಿಸಲು ಪ್ರಯತ್ನಿಸುತ್ತಿದ್ದು, ಚಿತ್ರರಂಗದ ಹೊಸ ಮುಖಗಳು ರಾಜಕೀಯ ಪ್ರವೇಶ ಮಾಡುತ್ತಿರುವುದು ಗಮನಾರ್ಹ. ಕಮಲ್ ಹಾಸನ್ ಹಾಗೂ ವಿಜಯ್ ಪರ್ಯಾಯ ರಾಜಕೀಯದ ಬಗ್ಗೆ ಯೋಚಿಸತೊಡಗಿದರು. ಕಮಲ್ ವಿಫಲತೆ ಹೊಂದಿದರು. ರಜನಿಕಾಂತ್ ರಾಜಕೀಯ ಅಡಿಯಿಟ್ಟು ಕೆಲವೇ ದಿನದಲ್ಲಿ ಹಿಂದಡಿ ಇಟ್ಟು ತೆರೆಮರೆಗೆ ಸರಿದರು. ವಿಜಯಕಾಂತ್ ಅವರ ಪಕ್ಷ ಸಹ ಮುಗ್ಗರಿಸಿತು.

ವಿಜಯ್ 2009ರಲ್ಲಿ ತಮ್ಮದೇ ಅಭಿಮಾನಿ ಸಂಘ ಸ್ಥಾಪನೆ ಮೂಲಕ ರಾಜಕೀಯಕ್ಕೆ ಅಡಿಯಿಟ್ಟರು. ಮಾಸ್ಟರ್ ಮೈಂಡ್ ಪ್ರಶಾಂತ್ ಕಿಶೋರ್ ಪ್ರವೇಶವಾಯಿತು. ದ್ರಾವಿಡ ಪಕ್ಷಗಳೊಂದಿಗೆ ಯಾವುದೇ ಒಪ್ಪಂದ ಮಾಡಿಕೊಳ್ಳದೇ ಸ್ಪರ್ಧೆ ಮಾಡಲಾಯಿತು. ಪಕ್ಷಕ್ಕೆ ಕೆಲಹಂತದಿಂದ ಪದಾಧಿಕಾರಿಗಳನ್ನು ನೇಮಿಸಿ ಸಂಘಟನೆ ಮಾಡಲಾಯಿತು. ಕಾಮನ್ ಮ್ಯಾನ್ ರೂಪದಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಾಯಿತು. ಈ ಎಲ್ಲ ಸ್ಟ್ರಾಟೆಜಿಗಳ ಪ್ರತಿಫಲವೇ ಟಿವಿಕೆ ಪಕ್ಷದ ಜಯಭೇರಿ. ಈ ಸಂದರ್ಭದಲ್ಲಿ ಪ್ರಣಾಳಿಕೆಯ ಕೆಲವು ಅಂಶಗಳ ಬಗ್ಗೆ ತುರ್ತು ತೀರ್ಮಾನ ಮಾಡಬೇಕಾದ ಅಗತ್ಯ ಇದೆ. ಮ್ಯಾಜಿಕ್ ನಂಬರ್ ತಲುಪುವ ಹಾದಿ ಸಹ ದುರ್ಗಮವಾಗಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 294

ಸಮಾಚಾರ ಸಣ್ಣದಲ್ಲ

ಬಿಆರ್‌ಎಸ್ ಕಚೇರಿಗೆ ಬಿಜೆಪಿ ಗುಂಪು ದಾಳಿ

ಹೈದರಾಬಾದ್: ಕೇಂದ್ರ ಗೃಹ ಖಾತೆ ಸಹಾಯಕ ಸಚಿವ, ತೆಲಂಗಾಣ ಮೂಲದ ಬಂಡಿ ಸಂಜಯ್ ಕುಮಾರ್ ಅವರ ವಿರುದ್ಧ ಭಾರತ ರಾಷ್ಟ್ರೀಯ

ಸಮಿತಿ(ಬಿಆರ್‌ಎಸ್) ಶಾಸಕ ಕೌಶಿಕ್ ರೆಡ್ಡಿ ವಿವಾದಾತ್ಮಕ ಹೇಳಿಕೆ ನೀಡಿದ್ದರಿಂದ ಕರೀಂನಗರದಲ್ಲಿರುವ ಬಿಆರ್‌ಎಸ್ ಶಾಸಕರ ಕಚೇರಿಗೆ ದಾಳಿ ನಡೆಸಿ ಹಾನಿ ಮಾಡಿದ್ದಾರೆ. ಬಿಆರ್‌ಎಸ್ ಪಕ್ಷದ ಶಾಸಕ ಕೌಶಿಕ್ ರೆಡ್ಡಿ ಅವರು ಶಾಸಕ ಗಂಗುಲ ಕಮಲಾಕರ್ ಅವರ ಕ್ಯಾಂಪ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸುತ್ತಿದ್ದಾಗ ಅಲ್ಲಿಗೆ ನುಗ್ಗಿದ ಬಿಜೆಪಿ ಕಾರ್ಯಕರ್ತರು, ಕೇಂದ್ರ ಸಚಿವರ ಬೆಂಬಲಿಗರು ಪೀಠೋಪಕರಣ ಧ್ವಂಸಗೊಳಿಸಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ದಾವಿಸಿದ ಪೊಲೀಸರು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದ್ದಾರೆ. 'ಕೆಟಿಆರ್‌ಗೆ ಡ್ರಗ್ ಟೆಸ್ಟ್ ಮಾಡಿಸಬೇಕು' ಎಂದು ಬಂಡಿ ಸಂಜಯ್ ಅವರ ಹೇಳಿಕೆಗೆ ಕೌಶಿಕ್ ರೆಡ್ಡಿ ಅವರು, 'ಬಂಡಿ ಸಂಜಯ್ ಕೂಡ ಡ್ರಗ್ ಟೆಸ್ಟ್ ಮಾಡಿಸಿಕೊಳ್ಳಲಿ' ಎಂದು ಪ್ರತಿಕ್ರಿಯಿಸಿದ್ದರು. ಅಲ್ಲದೆ, ಮಾದಕ ವಸ್ತು ಮಿಶ್ರಿತ ತಂಬಾಕು ಸೇವನೆಯ ಪರಿಣಾಮವಾಗಿಯೇ ಬಂಡಿ ಸಂಜಯ್ ಅವರ ಕೂದಲು ಉದುರಿದೆ ಎಂದು ಟೀಕಿಸಿದ್ದರು. ಇದು ಬಿಜೆಪಿ ಕಾರ್ಯಕರ್ತರ ಸಿಟ್ಟಿಗೆ ಕಾರಣವಾಗಿತ್ತು.

ರಾಜಸ್ಥಾನ ಮಾಜಿ ಸಚಿವ ಮಹೇಶ್ ಜೋಶಿ ಸೆರೆ

ಜೈಪುರ: 'ಜಲಜೀವನ್ ಮಿಷನ್'ಗೆ ಸಂಬಂಧಿಸಿದ 900 ಕೋಟಿ ರು.ಗಳ ದೊಡ್ಡ ಹಗರಣದಲ್ಲಿ ರಾಜಸ್ಥಾನದ ಮಾಜಿ ಸಚಿವ ಮಹೇಶ್ ಜೋಶಿ ಅವರನ್ನು ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಅಧಿಕಾರಿಗಳು ಜೈಪುರದಲ್ಲಿ

ಗುರುವಾರ ಬಂಧಿಸಿದ್ದಾರೆ. ಜೈಪುರ ರೈಲು ನಿಲ್ದಾಣ ಸಮೀಪದ ಸ್ಯಾನ್ ಕಾಲೋನಿಯಲ್ಲಿರುವ ಜೋಶಿ ಅವರ ನಿವಾಸಕ್ಕೆ ಗುರುವಾರ ನಸುಕಿನ 5 ಗಂಟೆಗೇ 'ಎಸಿಬಿ'ಯ ವಿಶೇಷ ತನಿಖಾ ತಂಡ ದಾಳಿ ನಡೆಸಿ ಬಂಧಿಸಿದೆ. ಮಹೇಶ್ ಜೋಶಿ ಈ ಹಿಂದೆ ಕಾಂಗ್ರೆಸ್ ಸರಕಾರದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸಂಪುಟದಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ಇಂಜಿನಿಯರಿಂಗ್ ಖಾತೆ ಸಚಿವರಾಗಿದ್ದಾಗ ಅಧಿಕಾರ ದುರುಪಯೋಗಪಡಿಸಿಕೊಂಡು ಟೆಂಡರ್ ಹಂಚಿಕೆಗೆ ಲಂಚ ಪಡೆದಿದ್ದರು ಎಂಬ ಆರೋಪವಿದೆ. ಈ ಸಂಬಂಧ 2024ರ ವರ್ಷಾಂತ್ಯದಲ್ಲಿ ಎಸಿಬಿ ಎಫ್‌ಐಆರ್ ದಾಖಲಿಸಿತ್ತು. ಪ್ರಕರಣದಲ್ಲಿ ಹಲವು ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ಈ ಮೊದಲೇ ಬಂಧಿಸಲಾಗಿದೆ. ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದು ಶೋಧ ನಡೆದಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಪ್ರಕರಣದಲ್ಲಿನ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜೋಶಿ ಅವರನ್ನು 2025ರ ಏಪ್ರಿಲ್‌ನಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ಬಂಧಿಸಿತ್ತು. ಆಗ 7 ತಿಂಗಳು ಜೈಲಿನಲ್ಲಿದ್ದ ಜೋಶಿ ಬಳಿಕ ಸುಪ್ರೀಂಕೋರ್ಟ್‌ನಿಂದ ಜಾಮೀನು ಪಡೆದಿದ್ದರು. ಈಗ ಅವರನ್ನು ಎಸಿಬಿ ಬಂಧಿಸಿದೆ.

ಗಡಿಯಲ್ಲಿ ಕಾವಲು: ಬಾಂಗ್ಲಾ ಗೃಹಸಚಿವ

ಢಾಕಾ: ಭಾರತದ ಗಡಿಯಂಚಿನ ರಾಜ್ಯ ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ(ಬಿಜೆಪಿ) ಭರ್ಜರಿ ಜಯ ದಾಖಲಿಸಿದ್ದು, ಸದ್ಯದಲ್ಲೇ ಸರಕಾರ ರಚನೆ ಮಾಡಲಿದೆ. ಆ ಬಳಿಕ ಅಕ್ರಮ ವಲಸಿಗರು ಎಂದು

ಯಾರನ್ನಾದರೂ ಬಾಂಗ್ಲಾದೇಶಕ್ಕೆ ದೂಡಲು ಯತ್ನಿಸಿದರು ಸುಮ್ಮನಿರಲಾಗುವುದಿಲ್ಲ, ಭಾರತ ಹಾಗೆ ಯಾರನ್ನೂ ಬಾಂಗ್ಲಾದೇಶದೊಳಕ್ಕೆ ದೂಡುವುದಿಲ್ಲ ಎಂಬ ವಿಶ್ವಾಸವಿದೆ. ಹಾಗಿದ್ದೂ ದೇಶದ ಗಡಿಯಲ್ಲಿ ಕಾವಲು ಬಿಗಿಗೊಳಿಸಲಾಗಿದೆ ಎಂದು ಬಾಂಗ್ಲಾದೇಶದ ಗೃಹ ಸಚಿವ ಸಲಾಹುದ್ದೀನ್ ಅಹಮದ್ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಇದಕ್ಕೂ ಮುನ್ನ ಬಾಂಗ್ಲಾದೇಶದ ವಿದೇಶಾಂಗ ಸಚಿವ ಖಲೀಲ್ ಉಲ್ ರೆಹಮಾನ್, ಅಕ್ರಮ ವಲಸಿಗರು ಎಂದು ಯಾರನ್ನಾದರೂ ಬಾಂಗ್ಲಾದೇಶಕ್ಕೆ ದೂಡಲು ಯತ್ನಿಸಿದರೆ ನಮ್ಮ ಸರಕಾರ ಖಂಡಿತಾ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದ್ದರು. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ವೇಳೆ ಬಿಜೆಪಿ ಪ್ರಕಟಿಸಿದ ಪ್ರಣಾಳಿಕೆಯಲ್ಲಿ, ಸರಕಾರ ರಚನೆ ಬಳಿಕ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ದೇಶದಿಂದಾಚೆಗೆ ದೂಡಲಾಗುವುದು ಎಂಬುದೇ ಪ್ರಮುಖ ಅಂಶವಾಗಿದೆ ಎಂಬುದು ಉಲ್ಲೇಖಾರ್ಹ.

{ ಅಸಾದುದ್ದೀನ್ ಒವೈಸಿ } ಎಐಎಂಐಎಂ ಸಂಸದ

ಭಾರತದ ಮುಸ್ಲಿಮರು ಜಾತ್ಯತೀತ ಪಕ್ಷಗಳ ಮತಬ್ಯಾಂಕ್ ಆಗಿರುವುದಕ್ಕಿಂತ ಸ್ವತಂತ್ರ ರಾಜಕೀಯ ನಾಯಕತ್ವ ಬೆಳೆಸಬೇಕು. ಮುಸ್ಲಿಂ ಮತಗಳು ಹಂಚಿಹೋಗಿ ವ್ಯರ್ಥವಾಗದಿರಲಿ. ಈಗಿನ ಜಾತ್ಯತೀತ ಪಕ್ಷಗಳು ಬಿಜೆಪಿಯನ್ನು ಸೋಲಿಸಲಾರವು. ಬದಲಾವಣೆ ಅಗತ್ಯ. ರಾಷ್ಟ್ರ ರಾಜಕಾರಣದಲ್ಲಿ ಪ್ರತ್ಯೇಕ ಮುಸ್ಲಿಂ ನಾಯಕತ್ವ ಸೃಷ್ಟಿಸಲಿದು ಸಕಾಲ.

ವಿ

ಸಿಸಿಟಿವಿ ಪರಿಶೀಲನೆ, ಹಂತಕರ ಶೋಧಕ್ಕೆ ಎಸ್‌ಐಟಿ | ನಕಲಿ ನಂಬರ್ ಪ್ಲೇಟ್ ಬೈಕ್, ಫುಲ್‌ಫೇಸ್ ಹೆಲ್ಮೆಟ್ | ಹತ್ಯೆಗೆ ಗ್ಲಾಕ್ 47 ಎಕ್ಸ್ ಆಧುನಿಕ ಪಿಸ್ತೂಲ್ ಬಳಕೆ | ಉತ್ತರ 24 ಪರಗಣ ಉದ್ವಿಗ್ನ, ಬಿಜೆಪಿ ಪ್ರತಿಭಟನೆ

ಸುವೇಂದು ಆಪ್ತ ಚಂದ್ರನಾಥ ರಥ್ ಹಂತಕರಿಗಾಗಿ ಶೋಧ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಸದ್ಯ ರಚನೆ ಆಗಲಿರುವ ಬಿಜೆಪಿ ಸರಕಾರದ ಸಂಭಾವ್ಯ ಸಿಎಂ ಅಭ್ಯರ್ಥಿ ಎನಿಸಿಕೊಂಡಿರುವ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ, ರಾಜಕೀಯ ತಂತ್ರಗಾರ ಚಂದ್ರನಾಥ ರಾಥ್ ಅವರ ಹತ್ಯೆಯಾಗಿದ್ದು, ಹಂತಕರಿಗಾಗಿ ರಾಜ್ಯ ಪೊಲೀಸರು ತೀವ್ರ ಶೋಧ ಆರಂಭಿಸಿದ್ದಾರೆ.

ಹಂತಕರನ್ನು ಬಂಧಿಸಲು ಹಲವು ವಿಶೇಷ ತಂಡಗಳನ್ನು ರಚಿಸಿದ್ದಾರೆ. ಅದರಲ್ಲೊಂದು ತಂಡ ಉತ್ತರ 24 ಪರಗಣ ಜಿಲ್ಲೆಯಲ್ಲಿ ಹತ್ಯೆ ನಡೆದ ಸ್ಥಳದ ಸಮೀಪದಲ್ಲಿನ ಎಲ್ಲಾ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದೆ. ಬುಧವಾರ ರಾತ್ರಿ 10.30ರಲ್ಲಿ ಚಂದ್ರನಾಥ್ ರಥ್ ಅವರು ಕೊಲ್ಕತ್ತ ನಗರದಿಂದ ಮಧ್ಯಮ ಗ್ರಾಮದಲ್ಲಿರುವ ತಮ್ಮ ಮನೆಗೆ ಕಾರಿನಲ್ಲಿ ಮರಳುತ್ತಿದ್ದಾಗ ಮಾರ್ಗಮಧ್ಯೆ ದೋಲ್ತಾಲಾ ಪ್ರದೇಶದಲ್ಲಿ 4 ಬೈಕ್‌ಗಳಲ್ಲಿ ಬಂದ 8 ದುಷ್ಕರ್ಮಿಗಳು ರಥ್ ಅವರ ಕಾರನ್ನು ಅಡ್ಡಗಟ್ಟಿ ಸಮೀಪದಿಂದಲೇ ಗುಂಡಿನ ದಾಳಿ ನ್ಡೆಸಿ ಹತ್ಯೆ ಮಾಡಿದ್ದಾರೆ. ಚಂದ್ರನಾಥ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆಯೇ ಸಾವನ್ನಪ್ಪಿದರು. ಕಾರು ಚಾಲಕ ಬುದ್ಧದೇವ್ ಬೆರಾ ಗುಂಡೇಟಿನಿಂದ ತೀವ್ರವಾಗಿ ಗಾಯಗೊಂಡಿದ್ದು, ಕೊಲ್ಕತ್ತದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಹಂತಕರು ಗ್ಲಾಕ್ 47 ಎಕ್ಸ್ ಮಾದರಿಯ ಅತ್ಯಾಧುನಿಕ ಪಿಸ್ತೂಲ್‌ಗಳನ್ನು ಬಳಸಿ 6ರಿಂದ 10 ಸುತ್ತು ಗುಂಡು ಹಾರಿಸಿರುವ ಸಾಧ್ಯತೆ ಇದೆ. ಘಟನಾ ಸ್ಥಳದಲ್ಲಿ ಕೆಲವು ಗುಂಡುಗಳು ನೆಲ್ಲದಲ್ಲಿ ಬಿದ್ದಿದ್ದವು. ವೃತ್ತಿಪರ ಶೂಟರ್‌ಗಳು ಮಾತ್ರವೇ ಇಂತಹ ಶಸ್ತ್ರಾಸ್ತ್ರಗಳನ್ನು

ಬಳಸುವುದು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಮುಖವನ್ನು ಪೂರ್ಣ ಮುಚ್ಚುವಂತಹ ಹೆಲ್ಮೆಟ್ ಧರಿಸಿದ್ದರು. ಅಲ್ಲದೇ ನಕಲಿ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿದ್ದ ಮೋಟಾರ್ ಬೈಕ್‌ಗಳಲ್ಲಿ ಬಂದಿದ್ದರು ಎಂಬುದು ಪ್ರಾಥಮಿಕ ತನಿಖೆಗೆ ವೇಳೆ ತಿಳಿದು ಬಂದಿದೆ. ಸಿಆರ್‌ಪಿಎಫ್ ಮಹಾನಿರ್ದೇಶಕ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹಲವು ದಿಕ್ಕುಗಳಲ್ಲಿ ತನಿಖೆ ಮಾಡಲಾಗುತ್ತಿದೆ. ಸಿಸಿಟಿವಿ ದೃಶ್ಯಾವಳಿ ಮತ್ತು ಇತರ ಸಾಕ್ಷ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಡಿಜಿಪಿ ತಿಳಿಸಿದ್ದಾರೆ.

ಪ್ರಮಾಣವಚನಕ್ಕೆ ಸಿದ್ಧತೆ: ಚಂದ್ರನಾಥ ರಥ್, ಕಳೆದ ಕೆಲವು ದಿನಗಳಿಂದ ಬಹಳ ಬಿಜಿಯಾಗಿದ್ದರು. ಸುವೇಂದು ಅಧಿಕಾರಿ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುವುದರಲ್ಲಿ ಪೂರ್ಣ ಮಗ್ನರಾಗಿದ್ದರು. ಅವರಿಗೆ ಊಟ-ನಿದ್ರೆಯ ಬಗ್ಗೆ ಕಾಳಜಿಯೇ ಇರಲಿಲ್ಲ. ಅವರ ಬಾಸ್ ಸಿಎಂ ಆಗುವುದನ್ನು ನೋಡುವುದಕ್ಕೆ ಬಹಳ ಕಾತರರಾಗಿದ್ದರು. ಇಂಥ ಸಮಯದಲ್ಲೇ ಹಂತಕರು ಅವರನ್ನು ಹತ್ಯೆ ಮಾಡಿಬಿಟ್ಟರು ಎಂದು ಚಂದ್ರನಾಥ್ ರಥ್ ಕುಟುಂಬದವರು ಸುದ್ದಿಗಾರರ ಬಳಿ ಹೇಳಿಕೊಂಡು ಕಣ್ಣೀರಾಗಿದ್ದಾರೆ.

ರಾಜಕೀಯ ದ್ವೇಷ ಹತ್ಯೆ ಆರೋಪ-ಪ್ರತಿಭಟನೆ

ಮಧ್ಯಮಗ್ರಾಮ, ದೋಹಾರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಹಂತಕರನ್ನು ತಕ್ಷಣವೇ ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ. ಪ್ರದೇಶದಲ್ಲಿ ಉದ್ವಿಗ್ನತೆ ನೆಲೆ ಸಿದ್ದು, ಪರಿಸ್ಥಿತಿ ನಿಯಂತ್ರಿಸಲು ಹೆಚ್ಚುವರಿ ಪೊಲೀಸ್ ಪಡೆಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ಟಿಎಂಸಿಯ ಪ್ರತೀಕಾರ ರಾಜಕೀಯ ಕ್ರಮವಾಗಿ ಈ ಹತ್ಯೆ ನಡೆಸಿರುವಂತೆ ಕಾಣಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ಇದಕ್ಕೆ ಪ್ರತಿಯಾಗಿ, ಟಿಎಂಸಿ ಕೂಡ ಬಿಜೆಪಿ ಮೇಲೆ ಆರೋಪ ಮಾಡಿದೆ. ಟಿಎಂಸಿ ಪಕ್ಷದ ಕಾರ್ಯಕರ್ತರ ಮೇಲೆಯೂ ಹಲವು ಜಿಲ್ಲೆಗಳಲ್ಲಿ ದಾಳಿಯಾಗಿದೆ ಎಂದು ಆರೋಪಿಸಿದೆ.

ಸೇನೆ ಬಿಟ್ಟು ರಾಜಕೀಯಕ್ಕೆ ಬಂದಿದ್ದ ಚಂದ್ರನಾಥ ರಥ್

ಸುವೇಂದು ಅಧಿಕಾರಿಯ ಪ್ರಮುಖ ರಾಜಕೀಯ ತಂತ್ರಗಾರ | ಬಂಗಾಳದ ರಾಜಕೀಯದಲ್ಲಿ ಭಾರೀ ಸಂಚಲನ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿನ ಬಿಜೆಪಿ ನಾಯಕ, ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್ (41), ಉತ್ತರ 24 ಪರಗಣ ಜಿಲ್ಲೆಯಲ್ಲಿ ಬುಧವಾರ ರಾತ್ರಿ ರಾಜಕೀಯ ವೈಷಮ್ಯದ ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿದ್ದಾರೆ.

ಈ ಹತ್ಯೆ ಬಂಗಾಳದ ರಾಜಕೀಯದಲ್ಲಿ ಭಾರೀ ಸಂಚಲನ ಮೂಡಿಸಿದೆ. ಈ ಘಟನೆಯು ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು

ಐಎಎಫ್ ಸಮವಸ್ತ್ರದಲ್ಲಿ ಚಂದ್ರನಾಥ್ ರಥ್.

ಹುಟ್ಟು ಹಾಕಿದ್ದು, ಪೊಲೀಸರು ತೀವ್ರ ತನಿಖೆ ನಡೆಸುತ್ತಿದ್ದಾರೆ.

ಚಂದ್ರನಾಥ ಮೂಲತಃ ಪೂರ್ಬಾ ಮೇದಿನಿಪುರ ಭಾಗದ ಚಾಂಡಿಪುರ ಗ್ರಾಮದವರು. ರಹರಾ ರಾಮಕೃಷ್ಣ ಮಿಷನ್ ಶಾಲೆ-ಕಾಲೇಜಿನಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದರು. ರಾಮಕೃಷ್ಣ ಮಿಷನ್‌ನ ಆಧ್ಯಾತ್ಮಿಕ ನೀತಿಗಳಿಂದ ಆಳವಾಗಿ ಪ್ರಭಾವಿತರಾಗಿ ದ್ದರು. ಯೌವನದ ಒಂದು ಹಂತದಲ್ಲಿ ಆಧ್ಯಾತ್ಮಿಕ ಜೀವನವನ್ನೇ ಆಯ್ಕೆ ಮಾಡಿಕೊಳ್ಳಲು ಯೋಚಿಸಿದ್ದರು.

ಆ ಬಳಿಕ ಭಾರತೀಯ ವಾಯುಪಡೆಗೆ

ಆಯ್ಕೆಯಾಗಿದ್ದರಿಂದ ಅಲ್ಲಿ 20 ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾ ದೇಶದ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಐಎಎಫ್‌ನಿಂದ ನಿವೃತ್ತಿ ಪಡೆದ ಬಳಿಕ ಕಾರ್ಪೊರೇಟ್ ವಲಯದಲ್ಲಿ ಸ್ವಲ್ಪ ಕಾಲ ಕೆಲಸ ಮಾಡಿದರು.

ನಂತರದಲ್ಲಿ ಸುವೇಂದು ಅಧಿಕಾರಿ ಅವರ ರಾಜಕೀಯ ಪ್ರಚಾರ ತಂಡಕ್ಕೆ ಸೇರ್ಪಡೆಗೊಂಡರು. 2019 ರಲ್ಲಿ ಸುವೇಂದು ಅವರು ಸಚಿವರಾಗಿದ್ದಾಗ ಅವರ ತಂಡವನ್ನು ಅಧಿಕೃತವಾಗಿ ಸೇರುವ ಮೂಲಕ ರಾಜಕೀಯ ಸಮನ್ವಯದ ಜವಾಬ್ದಾರಿ ವಹಿಸಿಕೊಂಡರು. ರಾಜಕೀಯ ವ್ಯೂಹ ರಚನಾಕಾರನಾಗಿ ಸೇವೆ ಸಲ್ಲಿಸಲಾರಂಭಿಸಿದರು.

ಸುವೇಂದು ಅಧಿಕಾರಿ ಅವರು ತೃಣಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷವನ್ನು ಬಿಟ್ಟು ಬಿಜೆಪಿಗೆ ಸೇರ್ಪಡೆಯಾದಾಗಲೂ, ಚಂದ್ರನಾಥ ರಥ್ ಅವರ ಕುಟುಂಬ(ತಾಯಿ ಹಸಿ ರಥ್ ಸೇರಿದಂತೆ) ಪಕ್ಷ ನಿಷ್ಠೆಯನ್ನು ಬದಲಿಸಿತು. ಇಡೀ ಕುಟುಂಬ ಬಿಜೆಪಿ ಜತೆಗೆ ಗುರುತಿಸಿಕೊಂಡಿತು.

ಮೃಧುಭಾಷಿ, ಸರಳ ವ್ಯಕ್ತಿತ್ವ

ಮೃಧುಭಾಷಿ ಮತ್ತು ಸರಳ ವ್ಯಕ್ತಿತ್ವದ ಚಂದ್ರನಾಥ ರಥ್ ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳದೇ ಇದ್ದರೂ, ಸುವೇಂದು ಅಧಿಕಾರಿ ಅವರ ರಾಜಕೀಯ ಕಾರ್ಯಚಟುವಟಿಕೆಗಳ ಮಾಸ್ಟರ್ ಮೈಂಡ್ (ಪ್ರಮುಖ ತಂತ್ರಗಾರ) ಆಗಿದ್ದರು. ಸಾಂಸ್ಥಿಕ ಕೆಲಸಗಳ ಸಮನ್ವಯ ಮತ್ತು ಸಂಚಾರ ವ್ಯವಸ್ಥೆಗಳ ನಿರ್ವಹಣೆಯಲ್ಲಿ ಅವರು ಸಿದ್ಧಹಸ್ತರಾಗಿದ್ದರು, ಬಲುಶಿಸ್ತಿನ ಕೆಲಸಗಾರರಾಗಿದ್ದರು. ಸುವೇಂದು ಅಧಿಕಾರಿ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯ ತೀವ್ರ ಹೋರಾಟದ ಕದನ ಕಣವಾದ ಭವಾನಿಪುರ ಕ್ಷೇತ್ರದಲ್ಲಿನ ಪ್ರಚಾರ ತಂಡದಲ್ಲಿ ಚಂದ್ರನಾಥ ರಥ್ ಪ್ರಮುಖ ಪಾತ್ರ ವಹಿಸಿದ್ದರು. ಸುವೇಂದು ಅಧಿಕಾರಿ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಚಂದ್ರನಾಥ ಅವರಿಗೆ ದೊಡ್ಡ ಮಟ್ಟದ ಆಡಳಿತಾತ್ಮಕ ಜವಾಬ್ದಾರಿ ನೀಡುವ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬರುತ್ತಿದ್ದವು.

ಜನರ ತೀರ್ಪು ಗೌರವಿಸಿ ಸರಕಾರ ರಚನೆಗೆ ಟಿವಿಕೆ ಆಹ್ವಾನಿಸಿ: ಕಮಲಹಾಸನ್

ಚೆನ್ನೈ: ಚಿತ್ರನಟ, ತಮಿಳಿಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ ಅಧ್ಯಕ್ಷ ಸಿ.ಜೋಸೆಫ್ ವಿಜಯ್ ಅವರ ಪಕ್ಷವು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಗರಿಷ್ಠ ಸ್ಥಾನಗಳನ್ನು ಪಡೆದು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಆ ಪಕ್ಷದವರನ್ನು ಸರಕಾರ ರಚಿಸಲು ಆಹ್ವಾನಿಸದೇ ಇದ್ದರೆ ಅದು ತಮಿಳುನಾಡಿನ ಜನಾದೇಶಕ್ಕೆ ಅಗೌರವ ತೋರಿದಂತೆ ಎಂದು ಹಿರಿಯ ಚಿತ್ರನಟ-ರಾಜ್ಯಸಭಾ ಸದಸ್ಯ ಕಮಲ ಹಾಸನ್ ಅಭಿಪ್ರಾಯಪಟ್ಟಿದ್ದಾರೆ.

ದಳಪತಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ 108 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಅತಿ ದೊಡ್ಡ ಪಕ್ಷದ ನಾಯಕರಾಗಿರುವ ವಿಜಯ್ ಅವರಿಗೆ ಹೊಸದಾಗಿ ಸರಕಾರ ರಚಿಸಲು ಅನುವು ಮಾಡಿಕೊಡಬೇಕು ಎಂದು 'ಎಕ್ಸ್' ಸಂದೇಶದಲ್ಲಿ ಕಮಲಹಾಸನ್ ಬರೆದಿದ್ದಾರೆ.

ತಮಿಳುನಾಡು ಜನತೆ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿಲ್ಲ. ಇಂತಹ ತೀರ್ಪು ತಮಿಳುನಾಡಿನ ಇತಿಹಾಸದಲ್ಲೇ ಹಿಂದೆಂದೂ ಬಂದಿರಲಿಲ್ಲ. ಸೋದರ ಎಂ.ಕೆ.ಸ್ಟಾಲಿನ್ ಅವರೇ, ಜನರ ತೀರ್ಪನ್ನು ಗೌರವಿಸಿ ಜವಾಬ್ದಾರಿಯುತ ಪ್ರತಿಪಕ್ಷವಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ಹೇಳಿದ್ದಾರೆ. ಅವರ ರಾಜಕೀಯ ಮುತ್ಸದ್ದಿತನವನ್ನೂ ಗೌರವಿಸುವೆ ಎಂದೂ ಕಮಲಹಾಸನ್ ಸಂದೇಶದಲ್ಲಿ ಬರೆದಿದ್ದಾರೆ.

ಸಾಂವಿಧಾನಿಕ ಹುದ್ದೆಯಲ್ಲಿರುವವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಬೇಕಿದೆ. ಈಗ ಆಯ್ಕೆಯಾಗಿರುವ 233 ಸದಸ್ಯರು ಪ್ರಮಾಣವಚನ ಸ್ವೀಕರಿಸಲು ಈವರೆಗೂ ಸಾಧ್ಯವಾಗದೇ ಇರುವುದು ರಾಜ್ಯಕ್ಕೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆಗುತ್ತಿರುವ ದೊಡ್ಡ ಹಾನಿ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.

ಬಹುಮತ ವಿಧಾನಸಭೆ ಒಳಗೆ ಸಾಬೀತಾಗಬೇಕೇ ಹೊರತು, ರಾಜ್ ಭವನದಲ್ಲಲ್ಲ ಎಂಬುದನ್ನು ಎಸ್.ಆರ್.ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ನಾನು ಒಬ್ಬ ಭಾರತೀಯ ಪ್ರಜೆಯಾಗಿ ಸಾಂವಿಧಾನಿಕ ಆಶಯಕ್ಕೆ ಧ್ವನಿಯಾಗಿರುವೆ. ತಮಿಳುನಾಡು ಜನರ ತೀರ್ಪಿಗೆ ಸರಿಯಾದ ಗೌರವ ಸಿಗಲೇಬೇಕು ಎಂದು ಕಮಲಹಾಸನ್ ಆಗ್ರಹಿಸಿದ್ದಾರೆ.

ಟಿವಿಕೆ ವಿಜಯ್‌ಗೆ ನೀಡಿದ್ದ ಭದ್ರತಾ ಸೌಲಭ್ಯ ವಾಪಸ್

ಚೆನ್ನೈ: ತಮಿಳುನಾಡು ಚುನಾವಣೆಯಲ್ಲಿ 108 ಸ್ಥಾನ ಗೆದ್ದಿರುವ ಟಿವಿಕೆ ಪಕ್ಷ ಸರಕಾರ ರಚನೆಗೆ ರಾಜ್ಯಪಾಲರ ಬಳಿ ಹಕ್ಕು ಮಂಡಿಸಿರುವಾಗಲೇ ಪಕ್ಷದ ನಾಯಕ ವಿಜಯ್ ಅವರಿಗೆ ಈ ಮೊದಲು ನೀಡಲಾಗಿದ್ದ ಭದ್ರತೆಯನ್ನು ರಾತ್ರಿ ವಾಪಸ್ ಪಡೆಯಲಾಗಿದೆ.

ವಿಜಯ್ ಅವರ ಭದ್ರತೆಗೆ 4 ಬೆಂಗಾವಲು ವಾಹನ ಸಮೇತ 50 ಪೊಲೀಸರ ರಕ್ಷಣಾ ವ್ಯವಸ್ಥೆಯನ್ನು ಒದಗಿಸಲಾಗಿತ್ತು. ಆ ಎಲ್ಲಾ ಭದ್ರತಾ ಸೌಲಭ್ಯವನ್ನೂ ಈಗ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ. ನೀಲಂಕರೈ ಪ್ರದೇಶದಲ್ಲಿರುವ ವಿಜಯ್ ಅವರ ಮನೆಗೆ ಒದಗಿಸಲಾಗಿದ್ದ ಹೆಚ್ಚುವರಿ ಪೊಲೀಸ್ ಭದ್ರತೆಯನ್ನು ಹಿಂಪಡೆಯಲಾಗಿದೆ ಎಂದು ವರದಿಯಾಗಿದೆ.

ಸರಕಾರ ಭದ್ರತಾ ವ್ಯವಸ್ಥೆಯನ್ನು ಹಿಂಪಡೆದ ನಂತರ ವಿಜಯ್ ಅವರೇ ಸ್ವಯಂ ಪ್ರೇರಣೆಯಿಂದ ಬೆಂಗಾವಲು ವಾಹನಗಳನ್ನು ಹಿಂದಕ್ಕೆ ಕಳುಹಿಸಿದ್ದಾರೆ ಎಂಬ ಮಾತು ಸಹ ಕೇಳಿಬರುತ್ತಿವೆ. ಇನ್ನೊಂದೆಡೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಡಿಎಂಕೆ ಪಕ್ಷದ ನಾಯಕ ಎಂ.ಕೆ.ಸ್ಟಾಲಿನ್ ಅವರಿಗೆ ಒದಗಿಸಲಾಗಿದ್ದ ಭದ್ರತೆಯನ್ನೂ ಹಿಂಪಡೆಯಲಾಗಿದೆ.

ಬಿಜೆಪಿ ಶಾಸಕಿ ಮನೆ ಬಳಿ ಬಾಂಬ್ ದಾಳಿ: 5 ಕಾರ್ಯಕರ್ತರಿಗೆ ಗಾಯ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ತೀವ್ರವಾಗಿದ್ದು, ಉತ್ತರ 24 ಪರಗಣ ಜಿಲ್ಲೆಯ ಪಾಣಿಹಟಿಯಲ್ಲಿ ಸೇಂಟ್ ಕ್ಸೇವಿಯರ್ ಸಂಸ್ಥೆ ಬಳಿ ಇರುವ ನೂತನ ಬಿಜೆಪಿ ಶಾಸಕಿ ರತ್ನಾ ದೇಬನಾಥ್ ಮನೆ ಬಳಿ ಬುಧವಾರ ತಡರಾತ್ರಿ ಬಾಂಬ್ ದಾಳಿಯಾಗಿದ್ದು, ಸ್ಫೋಟದಲ್ಲಿ 5 ಬಿಜೆಪಿ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಕೋಲ್ಕತ್ತದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ದಾಖಲಿಸಲಾಗಿದೆ. ಸುವೇಂದು ಅಧಿಕಾರಿ ಆಪ್ತ ಸಹಾಯಕ ಚಂದ್ರನಾಥ್ ರಥ್‌ರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದ ಕೆಲ ಗಂಟೆಗಳ ನಂತರ ಘಟನೆ ನಡೆದಿದ್ದು, ಟಿಎಂಸಿ ಗೂಂಡಾಗಳು ಹಿಂಸಾಚಾರ ನಡೆಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ಬಿಜೆಪಿ ಕಾರ್ಯಕರ್ತರು ರಸ್ತೆಯಲ್ಲಿ ನಿವಾಸಿಗಳೊಂದಿಗೆ ಮಾತನಾಡುತ್ತಿದ್ದಾಗ ಮೋಟಾರ್ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳ ತಂಡ ಕಚ್ಚಾ ಬಾಂಬ್ ಎಸೆದು ಪರಾರಿಯಾಯಿತು. ಸುತ್ತಲಿನ ಪ್ರದೇಶಗಳ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದ್ದು, ದಾಳಿಕೋರರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಮತಾ ಬ್ಯಾನರ್ಜಿಗೆ ಬಾಂಗ್ಲಾದೇಶದ ನೂರುಲ್ ಸಲಹೆ

ಪಶ್ಚಿಮ ಬಂಗಾಳ ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿ

ಕೋಲ್ಕತ್ತ: ಬಾಂಗ್ಲಾದೇಶದ ರಾಜಕೀಯ ನಾಯಕ ನೂರುಲ್ ಹುಡಾ, ಪಶ್ಚಿಮ ಬಂಗಾಳ ರಾಜ್ಯವನ್ನು ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿ, 17 ಕೋಟಿ ಬಾಂಗ್ಲಾದೇಶಿ ಮುಸ್ಲಿಮರ ಬೆಂಬಲ ನಿಮಗಿರಲಿದೆ ಎಂದು ಮಮತಾ ಬ್ಯಾನರ್ಜಿ ಅವರನ್ನು ಪ್ರಚೋದಿಸಿದ್ದಾನೆ. ಗಡಿಯಾಚೆಯಿಂದ ಬಂದಿರುವ ಈ ಸಂಚಿನ ಕರೆಯ ಬಗ್ಗೆ ಭಾರತದ ಗುಪ್ತಚರ ಸಂಸ್ಥೆಗಳು ತನಿಖೆ ನಡೆಸಲಾರಂಭಿಸಿವೆ.

ಮುಹಮ್ಮದ್ ನೂರುಲ್ ಹುಡಾ ಎಂಬಾತ ಗುರುವಾರ ವಿಡಿಯೊವೊಂದನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಉದ್ದೇಶಿಸಿ ಮಾತನಾಡಿದ್ದಾನೆ. ಪಶ್ಚಿಮ ಬಂಗಾಳವನ್ನು ಭಾರತದಿಂದ ಪ್ರತ್ಯೇಕಿಸಿ ಸ್ವತಂತ್ರ ದೇಶ ಎಂದು ಘೋಷಿಸಿ. ದೆಹಲಿ ಸರಕಾರದ ವಿರುದ್ಧ ಯುದ್ಧ ಸಾರಿ ಎಂದೂ ಪ್ರಚೋದನೆ ನೀಡಿದ್ದಾನೆ.

ಮಮತಾ ಬ್ಯಾನರ್ಜಿ ಅವರೇ ನೀವು ಯಾವುದೇ ಕಾರಣಕ್ಕೂ ಸೋಲೊಪ್ಪಬಾರದು. ಪಶ್ಚಿಮ ಬಂಗಾಳವನ್ನು ಸ್ವತಂತ್ರ ದೇಶವೆಂದು ಘೋಷಿಸಿರಿ. ಭಾರತ ಸರಕಾರದ ವಿರುದ್ಧ ಯುದ್ಧ ಆರಂಭಿಸಿ. ನಿಮ್ಮ ಬೆನ್ನಿಗೆ 17 ಕೋಟಿ ಬಾಂಗ್ಲಾದೇಶಿ ಮುಸ್ಲಿಮರು ನಿಲ್ಲುತ್ತಾರೆ ಎಂದಿದ್ದಾನೆ.

ವಿಡಿಯೋದಲ್ಲಿ ಮಾತನಾಡಿರುವ ವ್ಯಕ್ತಿ ತನ್ನನ್ನು ಬಾಂಗ್ಲಾದೇಶದ ನಾಯಕ ಎಂದು ಹೇಳಿಕೊಂಡಿದ್ದರೂ, ಆತನ ನಿಜವಾದ ಗುರುತಿನ ಬಗ್ಗೆ ಸ್ಪಷ್ಟ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ನಡೆದ ಹಿಂದೂಗಳ ವಿರುದ್ಧದ ಪ್ರತಿಭಟನೆಗಳಲ್ಲಿ ಸುದ್ದಿಯಲ್ಲಿದ್ದ. ಈತ ಉಗ್ರಗಾಮಿಯೇ ಎಂಬುದು ದೃಢಪಟ್ಟಿಲ್ಲ. ಜಮಾತ್ ಎ ಇಸ್ಲಾಮಿ ಅಥವಾ ಇತರ ಉಗ್ರಗಾಮಿ ಸಂಘಟನೆಗಳ ಜತೆ ಸಂಬಂಧವಿರುವ ಸಾಧ್ಯತೆ ಇದೆ ಎಂದಷ್ಟೇ ಅಂದಾಜು ಮಾಡಲಾಗಿದೆ.

ಭಾರತದ ಆಂತರಿಕ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಲು ಮತ್ತು ಕೋಮು ಸಂಘರ್ಷಕ್ಕೆ ಪ್ರಚೋದನೆ ನೀಡಲು ಬಾಂಗ್ಲಾದೇಶದ ಕೆಲವು ಶಕ್ತಿಗಳು ಪ್ರಯತ್ನಿಸುತ್ತಿವೆ ಎಂಬುದು ಈ ವಿಡಿಯೋದಿಂದ ಸ್ಪಷ್ಟವಾಗಿದೆ. ಕೇಂದ್ರ ಗೃಹ ಸಚಿವಾಲಯ ಮತ್ತು ಗುಪ್ತಚರ ಇಲಾಖೆ ವಿಡಿಯೊದ ಮೂಲ ಮತ್ತು ಅದರ ಹಿಂದಿರುವ ಶಕ್ತಿಗಳ ಬಗ್ಗೆ ತನಿಖೆ ಆರಂಭಿಸಿದೆ. ದೇಶದ್ರೋಹಿಗಳ ಕರೆಗೆ ಕಿವಿಗೊಡುವುದು ಭದ್ರತೆಗೆ ಮಾರಕ ಎಂದು ತಜ್ಞರು ಎಚ್ಚರಿಸಿದ್ದಾರೆ.

ದೆಹಲಿ ನಕಲಿ ಔಷಧ ಜಾಲದ ನಾಲ್ವರ ಸೆರೆ

10 ಕೋಟಿ ರು. ಮೌಲ್ಯದ ಪ್ಯಾಕೇಜಿಂಗ್ ಯತ್ರ, ನಕಲಿ ಔಷಧ ವಶ

ದೆಹಲಿ: ಕ್ಯಾನ್ಸರ್, ಲಿವರ್ ಡಿಸೀಸ್ ಮತ್ತಿತರ ಮಾರಣಾಂತಿಕ ಕಾಯಿಲೆಗಳಿಗೆ ವೈದ್ಯರು ಶಿಫಾರಸು ಮಾಡುವ ಔಷಧಗಳ ಹೆಸರಿನಲ್ಲೇ ನಕಲಿ ಔಷಧಗಳನ್ನು ತಯಾರಿಸಿ ದೇಶಾದ್ಯಂತ ಮಾರಾಟ ಮಾಡುತ್ತಿದ್ದ ದುಷ್ಟರ ಜಾಲವನ್ನು ದೆಹಲಿ ಪೊಲೀಸರು ಗುರುವಾರ ಬಯಲಿಗೆಳೆದಿದ್ದು, ನಾಲ್ವರನ್ನು ಬಂಧಿಸಿದ್ದಾರೆ.

ಬಂಧಿತ ನಾಲ್ವರು ನಕಲಿ ಔಷಧ ತಯಾರಿಸುತ್ತಿದ್ದ ಘಟಕದ ಮೇಲೆ ದಾಳಿ ನಡೆಸಿದ ದೆಹಲಿ ಪೊಲೀಸರ ವಿಶೇಷ ತಂಡ, 10 ಕೋಟಿ ರು. ಮೌಲ್ಯದ ಯಂತ್ರೋಪಕರಣ, ನಕಲಿ ಔಷಧಗಳು, ಪ್ಯಾಕೇಜಿಂಗ್ ಸಾಮಗ್ರಿಗಳನ್ನು ಪತ್ತೆ ಮಾಡಿ ವಶಪಡಿಸಿಕೊಂಡಿದೆ. ಈ ನಕಲಿ ಔಷಧಗಳನ್ನು ಸೇವಿಸಿದ ಕ್ಯಾನ್ಸರ್ ಮತ್ತು ಲಿವರ್ ಸಮಸ್ಯೆ ರೋಗಿಗಳು ಮತ್ತಷ್ಟು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದರು ಎನ್ನಲಾಗಿದೆ.

ನಕಲಿ ಔಷಧ ತಯಾರಿಕೆ ಮತ್ತು ಮಾರಾಟ ಜಾಲದ ಪ್ರಮುಖ ಆರೋಪಿಯನ್ನು ಮಣಿಪುರ ರಾಜ್ಯದ ಮನೋಜ್ ಕುಮಾರ್ ಮಿಶ್ರ ಎಂದು ಗುರುತಿಸಲಾಗಿದೆ. ಕರೋನಾ ಆರೋಗ್ಯ ಸಮಸ್ಯೆ ವ್ಯಾಪಕವಾಗಿದ್ದ ಕಾಲದಲ್ಲಿ ಸರ್ಜಿಕಲ್ ಕೈಗವಸು ಮತ್ತು ಮಾಸ್ಕ್(ಮುಖ ಕವಚ) ತಯಾರಿಕೆ ಘಟಕ ನಡೆಸುತ್ತಿದ್ದ ಮನೋಜ್ ಕುಮಾರ್ ಮಿಶ್ರ ಭಾರೀ ನಷ್ಟಕ್ಕೆ ಒಳಗಾಗಿದ್ದ. ಆ ಬಳಿಕ 2022ರಲ್ಲಿ 'ಯುನಿಟೆಲ್ ಫಾರ್ಮಾ' ಹೆಸರಿನಲ್ಲಿ ನಕಲಿ ಔಷಧಗಳ ತಯಾರಿಕಾ ಘಟಕ ಆರಂಭಿಸಿದ.

ರಾಜು ಮಿಶ್ರ, ವಿಕ್ರಂ ಸಿಂಗ್ ಮತ್ತು ವತನ್ ಸೈನಿ ಎಂಬವರು ಮನೋಜ್ ಕುಮಾರ್ ಮಿಶ್ರಾ ಜತೆಗೂಡಿ ನಕಲಿ ಔಷಧ ತಯಾರಿಕೆಯಲ್ಲಿ ತೊಡಗಿದ್ದರು. ಈಗ ಪೊಲೀಸರಿಂದ ಬಂಧನಕ್ಕೊಳಗಾಗಿದ್ದಾರೆ. ಒಟ್ಟು 10 ಕೋಟಿ ರು. ಮೌಲ್ಯದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ಯಾಕೇಜಿಂಗ್ ಅಸಲಿ: ಒಳಗೆ ಗುಳಿಗೆ ನಕಲಿ

ಮನೋಜ್ ಕುಮಾರ್ ಮಿಶ್ರಾನ ನಕಲಿ ಔಷಧ ತಯಾರಿಕಾ ಜಾಲ, ಹೆಸರಾಂತ ಔಷಧ ಕಂಪನಿಗಳ ಕ್ಯಾನ್ಸರ್, ಲಿವರ್ ಡಿಸೀಸ್ ಔಷಧಗಳ ಕವರ್, ಲೇಬಲ್ ಮತ್ತು ಪ್ಯಾಕೆಟ್‌ಗಳನ್ನು ನಕಲಿಯಾಗಿ ಮುದ್ರಿಸಿ ಯಾವುದೇ ಔಷಧವಲ್ಲದ ನಕಲಿ ಗುಳಿಗೆಗಳನ್ನು ಪ್ಯಾಕ್ ಮಾಡುತ್ತಿತ್ತು. ಹೆಸರಾಂತ ಕಂಪನಿಗಳ ಬ್ರಾಂಡ್ ಹೆಸರಿನಲ್ಲೇ ನಕಲಿ ಔಷಧ ಮಾರಾಟ ಜಾಲಕ್ಕೆ ಸರಬರಾಜು ಮಾಡುತ್ತಿತ್ತು ಎಂಬುದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಬಿಹಾರ: ನಿಶಾಂತ್ ಸೇರಿ 32 ಸಚಿವರಿಂದ ಪ್ರಮಾಣವಚನ

ಬಿಜೆಪಿ-15, ಜೆಡಿಯು-13, ಎಲ್‌ಜೆಪಿ-2, ಎಚ್‌ಎಎಂ-1, ಆರ್‌ಎಲ್‌ಎಂ-1 | ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ರಾಜನಾಥ್, ನಿತೀಶ್ ಕುಮಾರ್, ನಿತಿನ್ ನವೀನ್ ಹಾಜರಿ

ಬಿಹಾರದಲ್ಲಿನ ಎನ್‌ಡಿಎ ಸರಕಾರದ ಸಚಿವ ಸಂಪುಟ ವಿಸ್ತರಣೆಯಾಗಿದ್ದು, ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಎನ್‌ಡಿಎಯ 5 ಮಿತ್ರಪಕ್ಷಗಳ 32 ಶಾಸಕರು ಸಚಿವರಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ಪಟನಾ: ಬಿಹಾರ ರಾಜ್ಯದಲ್ಲಿನ ಬಿಜೆಪಿ ಮತ್ತು ಜೆಡಿಯು ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರಕಾರದ ಸಚಿವ ಸಂಪುಟ ಗುರುವಾರ ವಿಸ್ತರಣೆಯಾಗಿದೆ. ಮುಖ್ಯಮಂತ್ರಿ, ಬಿಜೆಪಿಯ ಸಾಮ್ರಾಟ್ ಚೌಧರಿ ಅವರ ಸಚಿವ ಸಂಪುಟಕ್ಕೆ 2ನೇ ಹಂತದಲ್ಲಿ ಒಟ್ಟು 32 ಸಚಿವರ ಸೇರ್ಪಡೆಯಾಗಿದೆ.

ಮುಖ್ಯಮಂತ್ರಿ, ಇಬ್ಬರು ಉಪ ಮುಖ್ಯಮಂತ್ರಿಗಳು ಸೇರಿದಂತೆ ಕೇವಲ ಮೂವರು ಮಾತ್ರವೇ ಇದ್ದ ಸಚಿವ ಸಂಪುಟದ ಸದಸ್ಯರ ಸಂಖ್ಯೆ ಗುರುವಾರ 35ಕ್ಕೆ ಏರಿಕೆಯಾಗಿದೆ.

ಗುರುವಾರ ಬೆಳಗ್ಗೆ ಪಟನಾ ನಗರದ ಗಾಂಧಿ ಮೈದಾನದಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಸೇರಿದಂತೆ ಬಿಜೆಪಿ(15) ಮತ್ತು ಜೆಡಿಯು(13) ಹಾಗೂ ಎನ್‌ಡಿಎ ಮೈತ್ರಿಕೂಟದ ಐದು ಪಕ್ಷಗಳ ಒಟ್ಟು 32 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಲೆಫ್ಟಿನೆಂಟ್ ಜನರಲ್(ನಿವೃತ್ತ) ಸಯ್ಯದ್ ಅಟಾ ಹಸ್ನೇನ್ ನೂತನ ಸಚಿವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಮಾಜಿ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ, ಹಿರಿಯ ನಾಯಕರಾದ ಶ್ರವಣ್ ಕುಮಾರ್, ಅಶೋಕ್ ಚೌಧರಿ ಸಂಪುಟ ಸೇರಿದವರಲ್ಲಿ ಪ್ರಮುಖರು. ಚಿರಾಗ್ ಪಾಸ್ವಾನ್ ಅವರ ನೇತೃತ್ವದ ಲೋಕ ಜನಶಕ್ತಿ (ರಾಮ್ ವಿಲಾಸ್ ಪಾಸ್ವಾನ್) ಪಕ್ಷದ ಇಬ್ಬರು, ಜಿತಿನ್ ರಾಮ್ ಮಾಂಝಿ ನೇತೃತ್ವದ ಎಚ್‌ಎಎಂ ಮತ್ತು ಉಪೇಂದ್ರ ಕುಶ್ವಾಹ ನೇತೃತ್ವದ ಆರ್‌ಎಲ್‌ಎಂ ಪಕ್ಷಗಳ ತಲಾ ಒಬ್ಬರು ಶಾಸಕರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ಆ ಮೂಲಕ ಎನ್‌ಡಿಎ ಮೈತ್ರಿಕೂಟದ ಎಲ್ಲಾ ಪಾಲುದಾರ ಪಕ್ಷಗಳಿಗೂ ಪ್ರಾತಿನಿಧ್ಯ ನೀಡಿದಂತಾಗಿದೆ.

ಈ ಸಂದರ್ಭ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ನೂತನ ರಾಜ್ಯಸಭಾ ಸದಸ್ಯ, ಜೆಡಿಯು ಪಕ್ಷದ ಮುಖ್ಯಸ್ಥ ನಿತೀಶ್ ಕುಮಾರ್ ಮತ್ತಿತರ ಗಣ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಇಂದು ರೈತ ಜನ ಜಾಗೃತಿ ಬೃಹತ್ ಸಮಾವೇಶ

ಮುದ್ದೇಬಿಹಾಳ : ವಿಜಯಪುರ ನಗರದಲ್ಲಿ ಮೇ 8 ವಿಜಯಪುರದಲ್ಲಿ ಶುಕ್ರವಾರ ನಡೆಯುವ ರೈತ ಜನ ಜಾಗೃತಿ ಬೃಹತ್ ಸಮಾವೇಶ ಯಶಸ್ವಿಗೊಳಿಸಬೇಕೆಂದು ರಾಜ್ಯ ರೈತ ಸಂಘದ ಮುದ್ದೇಬಿಹಾಳ ತಾಲೂಕ ಅಧ್ಯಕ್ಷರಾಗಿರುವ ಮಹಾಂತಗೌಡ ಬಿರಾದಾರ್ ರವರು ರೈತರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಮುದ್ದೇಬಿಹಾಳ ತಾಲೂಕಿನಿಂದ ಹಲವಾರು ಜನ ರೈತ ಸಂಘದ ಮುಖಂಡರು ಈ ಸಮಾವೇಶ ಯಶಸ್ವಿಗೊಳಿಸಲು ರೈತ ಸಮುದಾಯವನ್ನು ಭೇಟಿ ಮಾಡುವುದರೊಂದಿಗೆ ವಿಜಯಪುರ ಚಲೋ ಕರೆ ರೈತರಿಗೆ ನೀಡಿದ್ದು ಅತಿ ಹೆಚ್ಚು ಸಂಖ್ಯೆಯಲ್ಲಿ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆಂದು ಹೇಳಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ನಡೆಯುತ್ತಿರುವ ರೈತ ಜನಜಾಗೃತಿ ಬೃಹತ್ ಸಮಾವೇಶ ಯಶಸ್ವಿಗೊಳಿಸಲು ರೈತ ಮುಖಂಡರು ಪಾಲ್ಗೊಳ್ಳಬೇಕೆಂದು ರೈತ ಸಂಘದ ಅಧ್ಯಕ್ಷರಾದ ಮಹಾಂತಗೌಡ ಬಿರಾದರ್ ಇವರು ಕರೆ ನೀಡಿದ್ದಾರೆ.

ಮೇ 11ರಿಂದ ಉಚಿತ ತಪಾಸಣೆ ಶಿಬಿರ

ವಿಜಯಪುರ: ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಅಲರ್ಜಿ,ಅಸ್ತಮಾ, ಕೆಮ್ಮು, ದಮ್ಮು ಹಾಗೂ ದೀರ್ಘಕಾಲದ ಉಸಿರಾಟ ಇಂತಹ ಸಮಸ್ಯೆ ಕುರಿತು ಉಚಿತ ತಪಾಸಣೆ ಶಿಬಿರ ಮೇ 11 ರಿಂದ ಮೇ 14ರ ವರೆಗೆ ನಡೆಯಲಿದೆ. ಸೋಮವಾರದಿಂದ ಗುರವಾರದ ವರೆಗೆ ನಾಲ್ಕು ದಿನ ನಡೆಯಲಿರುವ ಈ ಶಿಬಿರವನ್ನು ಸಮಸ್ಯೆ ಎದುರಿಸುತ್ತಿರುವ ಸಾರ್ವಜನಿಕರು ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಬಿ.ಎಲ್.ಡಿ.ಇ ಆಯುರ್ವೇದ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ- 9513397413 ಸಂಪರ್ಕಿಸಬಹುದಾಗಿದೆ.

ಮೇ, ಜೂನ್ ತಿಂಗಳ ಪಡಿತರ ಅಕ್ಕಿ ಬಿಡುಗಡೆ

ವಿಜಯಪುರ: ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆ ಯಡಿ 2026ನೇ ಮೇ ಹಾಗೂ ಜೂನ್ ತಿಂಗಳಿಗೆ ಸಂಬಂಧಿಸಿದ ಪಡಿತರ ಅಕ್ಕಿಯನ್ನು ಮೇ ತಿಂಗಳಿನಲ್ಲಿಯೇ ವಿತರಿಸಲು ಜಿಲ್ಲೆಯ ಎಲ್ಲ ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ತಿಳಿಸಿದ್ದಾರೆ. ಅಂತ್ಯೋದಯ ಅನ್ನಯೋಜನೆ ಪ್ರತಿ ಪಡಿತರ ಚೀಟಿಗೆ ಎರಡೂ ತಿಂಗಳ ಪಡಿತರ ಅಕ್ಕಿ ಒಟ್ಟು 70 ಕೆಜಿ ಹಾಗೂ ಆಧ್ಯತಾ (ಬಿಪಿಎಲ್) ಪಡಿತರ ಚೀಟಿಗೆ ಪ್ರತಿ ತಿಂಗಳು ಪ್ರತಿ ಸದಸ್ಯರಿಗೆ 5 ಕೆಜಿಯಂತೆ ಒಟ್ಟು 10 ಕೆಜಿ ಅಕ್ಕಿಯನ್ನು ಕಡ್ಡಾಯವಾಗಿ ಎರಡು ಪ್ರತ್ಯೇಕ ಬಯೋಮೆಟ್ರಿಕ್ ನೀಡುವ ಮೂಲಕ ಪಡಿತರ ಚೀಟಿದಾರರು ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಮೇ 10ಕ್ಕೆ ಹೇಮರಡ್ಡಿ ಮಲ್ಲಮ ಜಯಂತಿ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ ಜಯಂತಿ ಆಚರಣೆಯನ್ನು ಮೇ10 ರಂದು ಬೆಳಗ್ಗೆ 10:00 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಅವರು ಉದ್ಘಾಟಿಸುವರು. ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ, ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ರವಿಕುಮಾರ ಎನ್, ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ೨ ಹಾಗೂ ಶಾಸಕ ಪ್ರಕಾಶ ಬಿ. ಹುಕ್ಕೇರಿ ಭಾಗವಹಿಸಲಿದ್ದಾರೆ. ಡಾ. ಶಾಂತಾ ಅಸ್ಟಿಗೆ ವಿಶೇಷ ಉಪನ್ಯಾಸ ನೀಡಲಿದ್ದು, ಸುನಂದಾ ಬತ್ತಾಸಿ ಹಾಗೂ ತಂಡದವರು ನೃತ್ಯ ರೂಪಕ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಅಧಿಕಾರಿ, ಸಿಬ್ಬಂದಿ ಸಾರ್ವಜನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮತ್ತು ಗಣ್ಯರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ವಿವಿಧ ಸಮುದಾಯದ ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆ: ಸಚಿವ ಎಂ.ಬಿ. ಪಾಟೀಲ ಅಭಿಮತ

ಕಾಂಗ್ರೆಸ್ ಪಕ್ಷವೇ ಒಂದು ಅನುಭವ ಮಂಟಪ

ವಿಶ್ವವಾಣಿ ಸುದ್ದಿಮನೆ ವಿಜಯಪುರ

ಕಾಂಗ್ರೆಸ್ ಪಕ್ಷವೆಂಬುದು ಅನುಭವ ಮಂಟಪ. ಈ ಅನುಭವ ಮಂಟಪದಲ್ಲಿ ಎಲ್ಲ ಜಾತಿ-ಜನಾಂಗಗಳಿಗೆ ಸಮಸ್ಥಾನ. ಆ ಸಾಮಾಜಿಕ ಹಿನ್ನಲೆಯನ್ನು ಅನುಸರಿಸಿ ಬಹಳಷ್ಟು ಹಿಂದುಳಿದ ಸಮಾಜಗಳು ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿದ್ದಾರೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ನಗರದ ಗೃಹ ಕಚೇರಿಯಲ್ಲಿ ಗುರುವಾರ ತಿಕೋಟಾ ಪಟ್ಟಣದ ತಳವಾರ ಸಮುದಾಯದ ಮುಖಂಡರನ್ನು ಕಾಂಗ್ರೆಸ್ಸಿಗೆ ಬರಮಾಡಿಕೊಂಡು ಮಾತನಾಡಿದರು. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯವನ್ನು ಮೆಚ್ಚಿ ಹಲವು ದಿನಗಳಿಂದ ಸ್ವಯಂ ಪ್ರೇರಿತವಾಗಿ ಜನರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ ಈ ಕಾರ್ಯ ಹೀಗೆ ಮುಂದುವರೆದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜಗಳು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬರಲಿವೆ ಎಂದರು.

ವಿಜಯಪುರ ನಗರದಲ್ಲಿಯ ನಡೆದ ಕಾರ್ಯಕ್ರಮದಲ್ಲಿ ತಿಕೋಟಾ ಪಟ್ಟಣದ ತಳವಾರ ಸಮಾಜದ ಮುಖಂಡರನ್ನು ಸಚಿವ ಎಂ. ಬಿ. ಪಾಟೀಲ ಕಾಂಗ್ರೆಸ್ಸಿಗೆ ಬರಮಾಡಿಕೊಂಡರು.

ಮತಕ್ಷೇತ್ರದಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಗಳು ಸಕಲ ಸಮುದಾಯಗಳ ಮೆಚ್ಚುಗೆಗೆ ಪಾತ್ರವಾಗಿದ್ದು, ತಿಕೋಟಾ ತಳವಾರ ಸಮುದಾಯದ ಪ್ರಮುಖ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬಬಲೇಶ್ವರ ಮತಕ್ಷೇತ್ರದಲ್ಲಿ ಇಂದು ರಾಜಕೀಯ ಚಿತ್ರಣವೇ ಬದಲಾಗಿದೆ. ನುಡಿದಂತೆ ನಡೆಯುವ ನಮ್ಮ ಗ್ಯಾರಂಟಿ ಸರಕಾರದ ಜನಪರ ಆಡಳಿತಕ್ಕೆ ಮನಸೋತು, ಬಿಜೆಪಿಯ ಪ್ರಮುಖರು, ಕಾರ್ಯಕರ್ತರು ತಮ್ಮ ಪಕ್ಷಕ್ಕೆ ಗುಡ್ ಬೈ ಹೇಳಿ ಕಾಂಗ್ರೆಸ್ ಗೆ ಜೈ ಎಂದಿದ್ದಾರೆ.

> ನಮ್ಮ ಅಭಿವೃದ್ಧಿಯ ಹಾದಿ ಮತ್ತು ಗಟ್ಟಿಯಾದ ಸಿದ್ಧಾಂತವನ್ನು ನಂಬಿ ಬಂದ ಈ ಎಲ್ಲ ನಾಯಕರನ್ನು ಆತ್ಮೀಯವಾಗಿ ಸ್ವಾಗತಿಸುತ್ತೇನೆ. ಅವರ ಸೇರ್ಪಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ. ಮುಂಬರುವ ದಿನಗಳಲ್ಲಿ ಅವರ ಬೇಡಿಕೆಗಳಿಗೆ ಸ್ಪಂದಿಸಲಾಗುವುದು. ರಾಜ್ಯದಲ್ಲಿ ಪಂಚಗ್ಯಾರಂಟಿಗಳ ಮೂಲಕ ಪ್ರತಿಯೊಬ್ಬರ ಅಚ್ಚುಮೆಚ್ಚಿನ ಪಕ್ಷ ಕಾಂಗ್ರೆಸ್ ಪಕ್ಷವಾಗಿದೆ.
> -ಎಂ. ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

ಕೊಟ್ಟ ಭರವಸೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವ ಮೂಲಕ ನಮ್ಮ ಸರಕಾರ ನುಡಿದಂತೆ ನಡೆದಿದೆ ರಾಜ್ಯದ ನೊಂದವರ ಬಡವರ ಕಣ್ಣೀರು ಒರೆಸುವ ಸರಕಾರವಾಗಿ ಹೊರಹೊಮ್ಮಿದೆ ಮುಂಭರುವ ಚುನಾವಣೆಯಲ್ಲಿಯೂ ನಮ್ಮ ಪಕಷ ಅಧಿಕಾರಕ್ಕೆ ಬರಲಿದೆ ಎಂದರು. ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡ ಸುರೇಶ ತೊರವಿ, ಎಚ್. ಎಲ್. ತಳವಾರ, ಪರಶುರಾಮ ಕೋಳಿ, ಗಣಪತಿ ತೋರವಿ, ಅಪ್ಪಸಾಹೇಬ ಡ್ಯಾಬೇರಿ, ದಯಾನಂದ ಶಿರಹಟ್ಟಿ ಪ್ರಕಾಶ ಹಾಲಳ್ಳಿ, ಭೀಮು ಹಾಲಳ್ಳಿ, ರಮೇಶ ಗುಡದಿನ್ನಿ, ವಿಲಾಸ ಮಾಳಿ, ನಾಗಪ್ಪ ಮಾಳಿ, ಶಾಂತಾಭಾಯಿ ತಳವಾರ, ಗೀತಾ ತೋರವ, ಪುಷ್ಪಾ ತೋರವಿ, ಮಂಗಲಾ ತಳವಾರ, ಮನಿಷಾ ತಳವಾರ, ಕವಿತಾ ಹಾಲಳ್ಳಿ ಸೇರಿದಂತೆ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಈ ವೇಳೆ ಮುಖಂಡತಾದ ಬಿ. ಜಿ. ವಿಭೂತಿ, ಜೆ. ಎಂ. ಪಾಟೀಲ, ಮಮ್ಮು ಮುಜಾವರ, ಬಾಪು ಚೌಧರಿ, ರಾಜೂಗೌಡ ಪಾಟೀಲ, ಬಿ. ಎಲ್. ನಾಟೀಕಾರ ಇದ್ದರು.

ಕನ್ನಡದ ವಾತಾವರಣ ಬೆಳೆಸಿದ ಕಸಾಪ

ವಿಜಯಪುರ: ಕನ್ನಡ ಸಾಹಿತ್ಯ ಪರಿಷತ್ತು ನಾಡು-ನುಡಿ.ನೆಲ-ಜಲ ಹಾಗೂ ಸಂಸ್ಕೃತಿ-ಪರಂಪರೆ ಉಳಿಸುವ ಬೆಳೆಸುವ ಪ್ರಾತಿನಿಧಿಕ ಸಂಸ್ಥೆಯಾಗಿ. 112 ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ ಆಚರಿಸುತ್ತಿರುವದು ನಮಗೆಲ್ಲ ಹೆಮ್ಮೆಯ ವಿಷಯ ಎಂದು ನಗರ ಘಟಕ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಅಧ್ಯಕ್ಷೆ ಜಯಶ್ರೀ ಹಿರೇಮಠ ಅಭಿಪ್ರಾಯ ವ್ಯಕ್ತಪಡಿಸಿದರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ 112 ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಕನ್ನಡ ಭಾಷೆ ಎರಡು ಸಾವಿರ ವರ್ಷದ ಇತಿಹಾಸ ಹೊಂದಿದೆ. ಕನ್ನಡ ಅನ್ನದ ಭಾಷೆಯಾಗಿದ್ದರಿಂದ ನಾವೆಲ್ಲರೂ ಕನ್ನಡ ಕಡ್ಡಾಯವಾಗಿ ಅಧ್ಯಯನ ಅತ್ಯವಶ್ಯ ಎಂದರು. ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಅಧೀಕ್ಷಕಿ ಶಶಿಕಲಾ ನಾಯ್ಕೊಡಿ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ವಾತಾವರಣ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದೆ. ಸರಕಾರ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಕನ್ನಡ ಭಾಷೆ ಬೆಳೆಸುವತ್ತ ಗಮನ ಹರಿಸೋಣ ಎಂದರು. ಸಾಹಿತಿ ವೈ ಎಚ್ ಲಂಬು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಮಲ್ಲಿಕಾರ್ಜುನ ಕೆಳಗಡೆ, ಅರ್ಜುನ ಶಿರೂರ, ರಾಜೇಶ್ವರಿ ಹಿಟ್ಟಿನಹಳ್ಳಿ, ಮಹೆತಾಬ ಕಾಗವಾಡ, ವೇದಿಕೆಯಲ್ಲಿದ್ದರು, ರೂಪಾ ರಜಪೂತ, ಆಶಾ ಬಿರಾದಾರ, ಭಾಗೀರಥಿ ಸಿಂದೆ ವಿಜಯಲಕ್ಷ್ಮಿ ಹಳಕಟ್ಟಿ, ಲಕ್ಷ್ಮಿ ಬಿರಾದಾರ, ಗಂಗಮ್ಮ ರಡ್ಡಿ, ಮಂಜುಳಾ ಕಾಳಗಿ, ಸುನಂದಾ ಕೋರಿ ಪ್ರಾರ್ಥಿಸಿದರು. ಮಮತಾ ಮುಳಸಾವಳಗಿ ಪ್ರಾಸ್ತಾವಿಕ ಮಾತನಾಡಿದರು. ಯಮನಪ್ಪ ಪವಾರ ನಿರೂಪಿಸಿದರು, ಶೋಭಾ ಬಡಿಗೇರ ವಂದಿಸಿದರು.

ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ 112 ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು.

ಬೌದ್ಧಿಕ ಚಿಂತನೆಗೆ ಸ್ಫೂರ್ತಿ ಠಾಗೋರರ ಜೀವನ ಸಾಧನೆ

ವಿಜಯಪುರ: ಠಾಗೋರರ ಜೀವನ ಬೌದ್ಧಿಕ ಚಿಂತನೆಗೆ ಸ್ಫೂರ್ತಿಯಾಗಿದ್ದು, ಅವರ ''ಜನ ಗಣ ಮನ'' ಗೀತೆ ಭಾರತದ ಏಕತೆ, ಅಖಂಡತೆಯನ್ನು ಇಂದಿಗೂ ಎತ್ತಿಹಿಡಿದಿದೆ. ಅವರ ಅಂತಾರಾಷ್ಟ್ರೀಯ ತಿಳುವಳಿಕೆ ಮತ್ತು ವಿಶ್ವ ಬಂಧುತ್ವವನ್ನು ಇಂದಿನ ಪೀಳಿಗೆಯಲ್ಲಿ ಬೆಳೆಸಬೇಕು ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ರವೀಂದ್ರ ನಾಥ ಠಾಗೋರ್‌ಅವರ ಜಯಂತಿ ಆಚರಣೆ ಉದ್ದೇಶಿಸಿ ಅವರು ಮಾತನಾಡಿದರು. ಮಾನವೀಯತೆಗೆ ಮೊದಲಾದ್ಯತೆ ನೀಡಿದ ಠಾಗೋರರು ಬಾಲ್ಯ ದಲ್ಲಿಯೇ ಕಲೆ, ಸಾಹಿತ್ಯದಲ್ಲಿ ಆಸಕ್ತಿ ಹೊಂದಿ ದ್ದರು. ಬೌದ್ಧಿಕ, ದೈಹಿಕ, ಆಧ್ಯಾತ್ಮಿಕ ವಿಕಸನಕ್ಕೆ ಒತ್ತು ನೀಡಿದ ಅವರ ಶೈಕ್ಷಣಿಕ ದೃಷ್ಟಿಕೋನ ಇಂದಿನ ಹೊಸ ಶಿಕ್ಷಣ ನೀತಿಯ ಮೂಲ ತತ್ವವಾ ಗಿದೆ. ಅವರ ಮಾನವತಾವಾದ ಭಾರತದ ಸಾಮಾಜಿಕ ಸಾಮರಸ್ಯಕ್ಕೆ ಅಡಿಪಾಯವಾಗಿದೆ ಎಂದು ಹೇಳಿದರು. ಸಂಸ್ಥೆಯ ಕಾರ್ಯದರ್ಶಿ ಸುನಂದಾ ಹುಣಶ್ಯಾಳ ಮಾತನಾಡಿ, ರೈತರಿಗೆ ಹೊಸ ಕೃಷಿ ಪದ್ಧತಿ ಪರಿಚಯಿಸಿ, ಸ್ವಾವಲಂಬಿ ಬದುಕಿಗೆ ಆದ್ಯತೆ ನೀಡಿ, ಗ್ರಾಮೀಣ ಆರ್ಥಿಕತೆ ಬಲಪಡಿಸಲು ಶ್ರಮಿಸಿದ ಠಾಗೋರರ ಮಾನವೀಯತೆ, ಸಾಂಸ್ಕೃತಿಕ ಸಮೃದ್ಧಿಯ ಕನಸು ಇಂದಿನ ಭಾರತದ ಪ್ರಗತಿಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಕೃತಿಯ ಮಡಿಲಲ್ಲಿ, ಮುಕ್ತ-ಸೃಜನಶೀಲ ಕಲಿಕೆಗೆ ಒತ್ತು ನೀಡಿದ ಅವರು ಇಂದಿನ 'ಸಮಗ್ರ ಶಿಕ್ಷಣ' ಪರಿಕಲ್ಪನೆಗೆ ಬುನಾದಿ ಹಾಕಿದ್ದಾರೆ. ಇಡೀ ವಿಶ್ವವೇ ಒಂದು ವಸತಿಯಾಗಲಿ ಎಂಬ ಅವರ ಸಂದೇಶ ಇಂದಿಗೂ ಪ್ರಸ್ತುತ ಎನಿಸಿದೆ ಎಂದು ಹೇಳಿದರು. ಶಿಕ್ಷಕರಾದ ರೇಣುಕಾ ಭಜಂತ್ರಿ, ಸಂಗೀತಾ ಅಂಕಲಗಿ, ವೀರೇಶ ಹುಣಶ್ಯಾಳ ಇದ್ದರು.

ವಿಜಯಪುರ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ರವೀಂದ್ರನಾಥ ಠಾಗೋರ್ ಅವರ ಜಯಂತಿ ಆಚರಿಸಲಾಯಿತು.

ಅಭಿಮಾನೋತ್ಸವ ಯಶಸ್ವಿಗೆ ಮನವಿ

ದೇವರಹಿಪ್ಪರಗಿ: ಮಾಜಿ ಮುಖ್ಯಮಂತ್ರಿ, ರೈತನಾಯಕ ಬಿ.ಎಸ್.ಯಡಿಯೂರಪ್ಪನವರ ಅಭಿಮಾನೋತ್ಸವ ಸಮಾರಂಭ ಯಶಸ್ವಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವರಹಿಪ್ಪರಗಿ ಮತ ಕ್ಷೇತ್ರದ ಮಾಜಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ ಮನವಿ ಮಾಡಿದರು.

ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಇಡೀ ತಮ್ಮ ಜೀವನವೇ ರಾಜಕೀಯ, ಸಾಮಾಜಿಕ ಜೀವನಕ್ಕಾಗಿ ಮೀಸಲಿಟ್ಟ ಅಜಾತಶತ್ರು, ದಣಿವರಿಯದ ಜನನಾಯಕ, ಅಭಿವೃದ್ಧಿಪರ ಕಾಳಜಿಯ ಮಾಜಿ ಉಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪನವರ 50 ವರ್ಷದ ರಾಜಕೀಯ ಪಯಣದ ಸಂಭ್ರಮಕ್ಕಾಗಿ ಮೇ 9ರಂದು ಚಿತ್ರದುರ್ಗದಲ್ಲಿ ಅಭಿಮಾನೋತ್ಸವ ಹಮ್ಮಿಕೊಂಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಯಡಿಯೂರಪ್ಪನವರು ಮುಖ್ಯಮಂತ್ರಿಗಳಿದ್ದಾಗ ನಮ್ಮ ದೇವರಹಿಪ್ಪರಗಿ ಮತಕ್ಷೇತ್ರಕ್ಕೆ ಸಾಕಷ್ಟು ಅನುದಾನ ನೀಡಿ ನೀರಾವರಿಯಾಗಲು ಸಹಕರಿಸಿದ್ದಾರೆ. ಕ್ಷೇತ್ರದ ಶಾಸಕನಾಗಿ ನಾನು, 65 ಸಾವಿರ ಎಕರೆ ನೀರಾವರಿಗಾಗಿ ಕ್ಷೇತ್ರಕ್ಕೆ 800 ಕೋಟಿ ರು. ಬೇಡಿಕೆ ಇಟ್ಟ ತಕ್ಷಣವೇ 796 ಕೋಟಿ ರು. ಅನುದಾನ ನೀಡಿ ನೀರಾವರಿಯಾಗಲು ಕಾರಣರಾಗಿದ್ದಾರೆ. ಇಂತಹ ಧೀಮಂತ ನಾಯಕರನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವವಾಗಿದೆ.

ಇವರ ಅಭಿಮಾನೋತ್ಸವಕ್ಕೆ ವಿಶೇಷವಾಗಿ ದೇವರಹಿಪ್ಪರಗಿ ಮತಕ್ಷೇತ್ರದಿಂದ ಸಹಸ್ರಾರು ಸಂಖ್ಯೆಯಲ್ಲಿ ಜನ ಬಿಜೆಪಿ ಪದಾಧಿಕಾರಿಗಳು, ಕಾರ್ಯಕರ್ತರು, ಹಿತೈಸಿಗಳು, ಅಭಿಮಾನಿಗಳು ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಿದ್ದಾರೆ. ಈ ಸಂದರ್ಭದಲ್ಲಿ ದೇವರಹಿಪ್ಪರಗಿ ಬಿಜೆಪಿ ಮಂಡಲ ಅಧ್ಯಕ್ಷ ಅವ್ವಣ್ಣ ಗ್ವಾತಗಿ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪ್ರಭುಗೌಡ ಬಿರಾದಾರ ಅಸ್ಕಿ, ಸಿದ್ದು ಬುಳ್ಳಾ, ರಮೇಶ ಮಸಬಿನಾಳ, ಕಿರಣ ನಾಯಿಕ್ ಸೇರಿದಂತೆ ಮತ್ತೀತರರು ಇದ್ದರು.

ಸಿಂದಗಿ ವೃಕ್ಷೋದ್ಯಾನಕ್ಕೆ ಸಚಿವ ಶಿವಾನಂದ ಪಾಟೀಲ ಭೇಟಿ

ಆರೋಗ್ಯವಂತ ಸಮಾಜಕ್ಕೆ ಗಿಡಮರಗಳ ಬೆಳೆಸೋಣ

ವಿಜಯಪುರ: ನಗರದಲ್ಲಿ ಇಂತಹ ಉದ್ಯಾನಗಳು ಇದ್ದರೆ ಸಾರ್ವಜನಿಕರು ಉತ್ತಮ ಆರೋಗ್ಯವನ್ನು ತಮ್ಮದಾಗಿಸಿಕೊಳ್ಳಬಹುದಾಗಿದೆ ಈ ನಿಟ್ಟನಲ್ಲಿ ಪ್ರತಿಯೊಬ್ಬರು ಮರಗಿಡಗಳನ್ನು ಬೆಳೆಸಬೇಕು ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಜಯಪುರ ಜಿಲ್ಲೆಯ ಸಿಂದಗಿ ಪಟ್ಟಣದ ಹೊನ್ನಪ್ಪಗೌಡ ಲೇಔಟ್‌ನಲ್ಲಿ ಇತ್ತಿಚಗೆ ಉದ್ಘಾಟನೆಗೊಂಡ ಸಿಂದಗಿ ಪ್ರಾದೇಶಿಕ ಅರಣ್ಯ ವಲಯದ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನಕ್ಕೆ ಭೇಟಿ ನೀಡಿ ವೀಕ್ಷಿಸಿ ಬಳಿಕ ಮಾತನಾಡಿದರು. ಸಿಂದಗಿ ನಗರದಲ್ಲಿ ಸಾಲುಮರದ ತಿಮ್ಮಕ್ಕನ ಹೆಸರಿನ ಮೇಲೆ ನಿರ್ಮಾಣಗೊಂಡ ವೃಕ್ಷೋದ್ದಾನ ಬಹಳ ಸುಂದರವಾಗಿ ನಿರ್ಮಾಣಗೊಂಡಿದ್ದು ಸಂತಸ ತಂದಿದೆ ಪ್ರತಿಯೊಬ್ಬರು ಸಾಲುಮರದ ತಿಮ್ಮಕ್ಕನ ಹೆಸರಿನಲ್ಲಿ ಮನೆಗೊಂದು ಸಸಿ ನೆಟ್ಟು ಪರಿಸರ ರಕ್ಷಣೆಗೆ ಮುಂದಾಗಬೇಕು. ಪರಿಸರ ರಕ್ಷಣೆಯಿಂದ ಸುಂದರ ಗಾಳಿ ಸುಂದರ ವಾತಾವರಣ ಪಡೆಯುವುದರೊಂದಿಗೆ ಸಾರ್ವಜನಿಕರು ಉತ್ತಮವಾದ ರ್ಯಗ್ಯವನ್ನು ತಮ್ಮನಾಗಿಸಿಕೊಳ್ಳಬಹುದು ಎಂದರು. ಈ ವೇಳೆ ಕೆಡಿಪಿ ಜಿಲ್ಲಾ ಸದಸ್ಯ ನೂರಹ್ಮದ ಅತ್ತಾರ, ಸಾಮಾಜಿಕ ಅರಣ್ಯ ವಲಯಾಧಿಕಾರಿ ರಾಜೀವ ಬಿರಾದಾರ, ಪಿಎಸ್‌ಐ ಆರೀಫ್ ಮುಷಾಪುರಿ, ಬ್ಲಾಕ್ ಕಾಂಗ್ರೆಸ್ ತಾಲೂಕಾಧ್ಯಕ್ಷ ಸುರೇಶ ಪೂಜಾರಿ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಬಸವರಾಜ ಕಾಂಬಳೆ ಇದ್ದರು.

ವಿಜಯಪುರ ಜಿಲ್ಲೆಯ ಸಿಂದಗಿ ಪಟ್ಟಣದ ಹೊನ್ನಪ್ಪಗೌಡ ಲೇಔಟ್‌ನಲ್ಲಿ ಇತ್ತಿಚಗೆ ಉದ್ಘಾಟನೆಗೊಂಡ ಸಿಂದಗಿ ಪ್ರಾದೇಶಿಕ ಅರಣ್ಯ ವಲಯದ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನಕ್ಕೆ ಸಚಿವ ಶಿವಾನಂದ ಪಾಟೀಲ ಭೇಟಿ ನೀಡಿ ಪರಿಶೀಲನೆ ನಡೆಸಿದರು.

> ವಿಜಯಪುರ ಜಿಲ್ಲೆ ಬಿಸಿಲ ನಾಡು ಎಂಭ ಅಪಖ್ಯಾತಿ ಪಡೆದಿದೆ ಪ್ರತಿಯೊಬ್ಬರು ಸಸಿಗಳನ್ನು ನೆಟ್ಟು ಪಾಲನೆ ಪೋಷಣೆ ಮಾಡುವ ಮೂಲಕ ಪರಿಸರ ರಕ್ಷಣೆಗೆ ಮುಂದಾಗಬೇಕು ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಪರಿಸರ ಹಾಳು ಮಾಡುವದು ಅಕ್ಷಮ್ಯ ಅಪರಾದವಾಗಿದೆ.
> -ಅಶೋಕ ಮನಗೂಳಿ, ಶಾಸಕ

ಮಠಗಳು ಪರಂಪರೆ ಕೇಂದ್ರಗಳು

ಇಂಡಿ: ಮಠಗಳು ಈ ನಾಡಿನ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯ ಕೇಂದ್ರಗಳು ಸಮಾಜವು ಸನ್ಮಾರ್ಗದಲ್ಲಿ ಸಾಗಲು ಮಠಗಳು ದಾರಿದೀಪ ಎಂದು ಅಗರಖೇಡ ವಿರಕ್ತಮಠದ ಪ್ರಭುಲಿಂಗ ಶ್ರೀಗಳು ಹೇಳಿದರು.

ತಾಲೂಕಿನ ಅಗರಖೇಡ ಗ್ರಾಮದಲ್ಲಿ ನಡೆದ ಶ್ರೀ ಶಂಕರಲಿಂಗ ಜಾತ್ರಾಮಹೋತವ ನಿಮಿತ್ಯ ನಡೆದ ಉಡಿ ತುಂಬುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಚಳಕಾಪುರ ಆಳೂರದ ಸಿದ್ದಾರೂಢ ಮಠದ ಶಂಕರಾನಂದ ಶ್ರೀಗಳು ಮಾತನಾಡಿ ಪ್ರತಿಯೊಬ್ಬರಲ್ಲೂ ದೇವರಿದ್ದಾನೆ. ಆ ದೇವರನ್ನು ಕಾಣಲು ನಮ್ಮಲ್ಲಿ ಅರಿವು ಮೂಡಿಸುವ ಮಠಗಳ ಗುರುಗಳು ಅಗತ್ಯ, ಗುರುವೆಂದರೆ ಕೇವಲ ಶಿಕ್ಷಣ ಜ್ಞಾನ ನೀಡುವವರಲ್ಲ, ಬದುಕಿಗೆ ಮಾರ್ಗ ತೋರುವವರು ಅವರು ತೋರುವ ಮಾರ್ಗದಲ್ಲಿ ಸಮಾಜ ಶಾಂತಿ ನೆಮ್ಮದಿ ಯಿಂದ ಬಾಳಬೇಕು ಎಂದರು. ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿ ಭೀಮಣ್ಣ ಕವಲಗಿ, ಮದನಕುಮಾರ ಶಿಂದೆ, ಡಾ. ಸಂಗನಬಸು ಬಿರಾದಾರ, ಸಂಗನಗೌಡ ಬಿರಾದಾರ ಮತ್ತಿತರರು ವೇದಿಕೆಯ ಮೇಲೆ ಇದ್ದರು.

ಇದೇ ವೇಳೆ ಜಾತ್ರಾ ಮಹೋತ್ಸವ ನಿಮಿತ್ಯ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಇಂಡಿ ತಾಲೂಕಿನ ಅಗರಖೇಡ ಗ್ರಾಮದಲ್ಲಿ ನಡೆದ ಶ್ರೀ ಶಂಕರಲಿಅಗ ಜಾತ್ರಾಮಹೋತ್ಸವ ನಿಮಿತ್ಯ ನಡೆದ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪ್ರಭುಲಿಂಗ ಶ್ರೀಗಳು ಮಾತನಾಡಿದರು.

ಬಾಬಾ ಉರುಸುಗಳು ಭಾವೈಕ್ಯತೆಯ ಸಂಕೇತ

ಇಂಡಿ: ಅಹಿರಸಂಗ ಗ್ರಾಮದಲ್ಲಿ ಆಚರಿಸುತ್ತಿರುವ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಗ್ರಾಮದಲ್ಲಿ ಹಿಂದು - ಮುಸ್ಲಿಮ ಬಾಂಧವರು ಸಹೋದರತ್ವ ಭಾವನೆಯಿಂದ ಆಚರಿಸುತ್ತಿದ್ದು ಭಾವೈಕ್ಯತೆ ಸಂಕೇತವಾಗಿದೆ ಎಂದು ಜೈನಾಪುರದ ರೇಣುಕಾ ಶಿವಾಚಾರ್ಯರರು ಹೇಳಿದರು.

ತಾಲೂಕಿನ ಅಹಿರಸಂಗ ಗ್ರಾಮದಲ್ಲಿ ನಡೆದ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಪೀರ ರಾಜೇನೂರ ಶಾ ಶಾಹನೂರಲಿ ಬಾಬಾರವರು ಪವಾಡ ಪುರುಷರಾಗಿದ್ದರು. ಹೀಗಾಗಿ ಅವರ ಮೇಲೆ ಜನರ ಅಪಾರ ಪ್ರೇಮ ಇತ್ತು. ಜನರು ಅವರನ್ನು ಗೌರವ ಮತ್ತು ಶ್ರದ್ದೆಯಿಂದ ಕಾಣುತ್ತಿದ್ದರು. ಅವರಿಂದ ಉದ್ದಾರ ಆದವರು ಅನೇಕರು ಎಂದರು.

ಶ್ರೀ ಮಲ್ಲಿಕಾರ್ಜುನ ಶ್ರೀಗಳು ಅಹಿರಸಂಗ, ವಿಠ್ಠಲಗೌಡ ಯಶವಂತರಾಯಗೌಡ ಪಾಟೀಲರು,ಅಹಿರಸಂಗದ ರೇವಣಸಿದ್ದಯ್ಯ ಶಾಸ್ತ್ರಿಗಳು, ಅಶೋಕ ಬಡಿಗೇರ ದಾದಾ ಶ್ಯಾಮಣ್ಣವರ ಮಾತನಾಡಿದರು. ಗೋಳಸಾರದ ಅಭಿನವ ಪುಂಡಲಿಂಗ ಶ್ರೀಗಳು ಸಾನಿದ್ಯ ವಹಿಸಿದ್ದರು. ರಜಾಕ ಯಡ್ರಾಮಿ, ಶಬಾನಾ ಶೇಖ,ಪ್ರಭುಗೌಡ ಬಿರಾದಾರ, ಮುಜಬಿರ ರಹಮಾನ ಶ್ಯಾಮಣ್ಣನವರ ಮತ್ತಿತರಿದ್ದರು ವೃದಿಕೆಯ ಮೇಲೆ ಇದ್ದರು. ವಾಸುದೇವ ಕುಲಕರ್ಣಿ,ಲಾಲಸಾಬ ಮುಲ್ಲಾ, ಯಶವಂತ ಕಾಡೆಗೋಳ, ನಿಸಾರ ಶ್ಯಾಮಣ್ಣನವರ, ಶಿವಾನಂದ ಬ್ಯಾಗೇಳಿ, ಅಪ್ಪಾಶಾ ಇಂಗಳಗಿ ರಾಜಕುಮಾರ ವಾಲಿಕಾರ ಮತ್ತಿತರಿದ್ದರು.

ಇಂಡಿ ತಾಲೂಕಿನ ಅಹಿರಸಂಗ ಗ್ರಾಮದಲ್ಲಿ ನಡೆದ ಪೀರ ರಾಜೇನೂರ ಶಾ ಶಾಹನೂರಲಿ ಬಾಬಾ ಉರುಸು ಕಾರ್ಯಕ್ರಮದಲ್ಲಿ ಜೈನಾಪುರ ಶ್ರೀಗಳು ಮಾತನಾಡಿದರು.

ನರೇಗಾ ಯೋಜನೆಯಡಿ ಅರ್ಹರಿಗೆ ಉದ್ಯೋಗ ನೀಡಿ

ಖಾತ್ರಿ ಪ್ರಗತಿ ಪರಿಶೀಲನಾ ಸಭೆ | ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಸೂಚನೆ

ವಿಶ್ವವಾಣಿ ಸುದ್ದಿಮನೆ ವಿಜಯಪುರ

ಗ್ರಾಮೀಣ ಬಡಜನರಿಗೆ ಉದ್ಯೋಗ ಭದ್ರತೆ ಒದಗಿಸುವ ಮಹಾತ್ಮಾ ಗಾಂಧಿ ನರೇಗಾ ಮಹತ್ವದ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಗ್ರಾ.ಉ) ತಾಂತ್ರಿಕ ಸಂಯೋಜಕರು, ತಾಲೂಕು ಎಮ್.ಐ.ಎಸ್ ಸಂಯೋಜಕರು, ಐ.ಇ.ಸಿ ಸಂಯೋಜಕರು, ಆಡಳಿತ ಸಹಾಯಕರು ಹಾಗೂ ತಾಂತ್ರಿಕ ಸಹಾಯಕರೊಂದಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿವಿಧ ವಿಷಯಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜಯಪುರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವಿವಿಧ ವಿಷಯಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ ಮಾತನಾಡಿದರು.

> ಜಿಲ್ಲೆಯ ಪ್ರತಿ 211 ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಮುದಾಯ ಕಾಮಗಾರಿಗಳನ್ನು ಆರಂಭಿಸಿ ಕೂಲಿಕಾರರ ಫೇಸ್ ಅಥೆಂಟಿಕೇಷನ್ ಅನ್ನು ಎರಡು ದಿನಗಳಲ್ಲಿ ಕಡ್ಡಾಯವಾಗಿ ಶೇ.100ರಷ್ಟು ಆರಂಭಿಸಬೇಕು. ಉದ್ಯೋಗ ಒದಗಿಸಿರುವ ಎಲ್ಲ ಕೂಲಿಕಾರರಿಗೆ ನಿಗದಿತ ಸಮಯದಲ್ಲಿ ಕೂಲಿ ಪಾವತಿಸಲು ಕ್ರಮ ಕೈಗೊಳ್ಳಬೇಕು.
> -ಪ್ರಕಾಶ ವಡ್ಡರ,
> ಜಿಪಂ ಉಪ ಕಾರ್ಯದರ್ಶಿ

ಕೆಲಸದ ಬೇಡಿಕೆ ಸಲ್ಲಿಸಿದ ಪ್ರತಿಯೊಬ್ಬ ಅರ್ಹ ಕುಟುಂಬಗಳಿಗೆ ಕಾಲಮಿತಿಯೊಳಗೆ ಉದ್ಯೋಗ ಒದಗಿಸಬೇಕು ಹಾಗೂ ಕಾಮಗಾರಿಗಳನ್ನು ನಿಗದಿತ ಸಮಯದೊಳಗಾಗಿ ಪೂರ್ಣಗೊಳಿಸುವತ್ತ ವಿಶೇಷ ಗಮನ ಹರಿಸಬೇಕು ಎಂದು ಸೂಚಿಸಿದರು.

ಉದ್ಯೋಗ ಮಾಡಿದ ಕೂಲಿಕಾರರ ವೇತನ ಪಾವತಿಯಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳಬೇಕು, ಪ್ರತಿ ಹಂತದಲ್ಲೂ ಪಾರದರ್ಶಕತೆ ಕಾಪಾಡಬೇಕು. ಎಂಐಎಸ್ ನಲ್ಲಿ ಸಮಯಕ್ಕೆ ಸರಿಯಾಗಿ ಮಾಹಿತಿ ದಾಖಲಿಸಬೇಕು ಎಂದು ಸೂಚಿಸಿದರು.

ಜೊತೆಗೆ, ನೀರಿನ ಸಂರಕ್ಷಣೆ, ಮಣ್ಣಿನ ಸಂರಕ್ಷಣೆ, ಹಸಿರುಪರಿಸರ ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸೂಚಿಸಿದರು.

ಮನರೇಗಾ ಯೋಜನೆಯಡಿ ತಾಲೂಕುವಾರು ಗುರಿ ನಿಗದಿಪಡಿಸಲಾಗಿದೆ. ನಿಗದಿಪಡಿಸಿರುವ ಮಾನವ ದಿನಗಳ ಸೃಜನೆ ಮಾಡಿ ಗುರಿ ಸಾಧಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಈಗಾಗಲೇ ಅನುಮೋದನೆಗೊಂಡ ಪ್ರಗತಿ ಹಂತದ ಕೂಲಿ ಆಧಾರಿತ ಸಮುದಾಯ ಹಾಗೂ ವೈಯಕ್ತಿಕ ಕಾಮಗಾರಿಗಳಡಿ ಪ್ರತಿ ಗ್ರಾ.ಪಂ.ಗಳಲ್ಲಿ ಎನ್.ಎಮ್. ಆರ್. ಜನರೇಟ್ ಮಾಡಿ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗ ಒದಗಿಸಬೇಕು. ಎಷ್ಟೋ ಗ್ರಾಮೀಣ ಪ್ರದೇಶಗಳಲ್ಲಿ ನರೇಗಾ ಯೋಜನೆಯ ಮೇಲೆ ಅವಲಂಬಿತರಾಗಿದ್ದಾರೆ. ಅಂತಹ ಕುಟುಂಬಗಳಿಗೆ ಉದ್ಯೋಗ ಒದಗಿಸಿ ನಿಗದಿತ ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಾ ಹಂತದಲ್ಲಿ ಪ್ರಕರಣವಾರು ವಸೂಲಾತಿ ಪ್ರಗತಿ ಕುರಿತು ಪರಿಶೀಲಿಸಿ, ಈ ಪ್ರಕರಣಗಳನ್ನು ಸಾಬೀತುಪಡಿಸಲು ಕ್ರಮ ಕೈಗೊಳ್ಳಬೇಕು. ಪ್ರತಿ ವಾರ ಅಡಹಾಕ್ ಸಮಿತಿ ಸಭೆಗಳನ್ನು ಏರ್ಪಡಿಸಿ, ಬಾಕಿ ಉಳಿದಿರುವ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು. ಏ.ಟಿ.ಆರ್‌ವರದಿಯನ್ನು ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವುದು. ಈ ವಿಷಯದ ಕುರಿತು ಸಂಬಂಧ ಪಟ್ಟ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಗತಿ ಸಾಧಿಸಲು ಇದೇ ವೇಳೆ ಸೂಕ್ತ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಎಲ್ಲ ನರೇಗಾ ಸಿಬ್ಬಂದಿ ಉಪಸ್ಥಿತರಿದ್ದರು.

{ ಸಿದ್ದರಾಮಯ್ಯ } ಮುಖ್ಯಮಂತ್ರಿ
ಸಮಾಜದಲ್ಲಿ ವೈಜ್ಞಾನಿಕತೆ ಹಾಗೂ ವೈಚಾರಿಕತೆ ಬೆಳೆದು ವರ್ಗ ವ್ಯವಸ್ಥೆಗಳು ನಿರ್ಮೂಲನವಾಗಬೇಕು ಎಂಬುದು ಅವರ ಗುರಿ. ಆದರೂ ಸಹ, ಇಂದಿಗೂ ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದಾಗಿದೆ. ಅವಕಾಶವಂಚಿತರಾದ ಎಲ್ಲಾ ಜನಾಂಗದವರಿಗೂ ಸಮಾನ ಅವಕಾಶಗಳು ಸಿಗಬೇಕು ಎಂಬುದು ನಮ್ಮ ಸಂಕಲ್ಪ.

ಸಮಾಚಾರ ಸಣ್ಣದಲ್ಲ

ಮೇ 10ರಂದು ಗಾನ ವೈಭವ

ಬೆಳಗಾವಿ: ಕನ್ನಡ ಚಲನಚಿತ್ರರಂಗದ ಅಮರ ಗಾನಗಂಧರ್ವ,ನಟಸಾರ್ವಭೌಮ ಡಾ. ರಾಜ್ ಕುಮಾರ್‌ಅವರ ಸ್ಮರಣಾರ್ಥ ಸುಮಧುರ ಕನ್ನಡ ಹಾಡುಗಳ ಕರೋಕೆ ಕಾರ್ಯಕ್ರಮ ''ಗಾನ ವೈಭವ''ವನ್ನು ಎಸ್. ಬಿ. ಕರೋಕೆ ತಂಡ ಆಯೋಜಿಸಿದೆ. ಈ ಸಂಗೀತ ವೈಭವ ಕಾರ್ಯಕ್ರಮವು ಮೇ 10, 2026ರಂದು ಸಂಜೆ 5 ಗಂಟೆಗೆ ನಗರದ ಲೋಕಮಾನ್ಯ ರಂಗಮಂದಿರ (ಹಳೆ ರೀಝ್ ಥಿಯೇಟರ್), ಕೊನವಾಳ ಗಲ್ಲಿಯಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ವೇಣುನಾದ ತಂಡದ ಪ್ರತಿಭಾವಂತ ಹಾಡುಗಾರರು ಮತ್ತು ಹಾಡುಗಾರ್ತಿಯರು ಡಾ. ರಾಜ್ ಕುಮಾರ್‌ಅವರ ಅಮರ ಗೀತೆಗಳನ್ನು ಕರೋಕೆ ಮೂಲಕ ಪ್ರಸ್ತುತಪಡಿಸಲಿದ್ದಾರೆ. ಕನ್ನಡ ಸಂಗೀತಾಭಿಮಾನಿಗಳಿಗೆ ಇದು ಅಪರೂಪದ ರಸದೌತಣವಾಗಲಿದೆ. ಪ್ರವೇಶ ಉಚಿತವಾಗಿದ್ದು, ಎಲ್ಲ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

ಸಾವಯವ ಕೃಷಿಗೆ ಒತ್ತು ನೀಡಿ

ಯರಗಟ್ಟಿ: ಬೀಜೋಪಚಾರ ಆಂದೋಲನ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಮತ್ತು ಭೂಮಿತಾಯಿ ರಕ್ಷಣಾ ಕಣ್ಗಾವಲು ಸಭೆಯನ್ನು ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಉದ್ದೇಶಿಸಿ ಸಹಾಯಕ ಕೃಷಿ ನಿರ್ದೇಶಕ ಶಿವಪ್ರಕಾಶ ಪಾಟೀಲ ಮಾತಾನಾಡಿ ರೈತರು ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿ ತನ್ನ ಫಲವತ್ತತೆ ಕಳೆದುಕೊಳ್ಳುತ್ತಿದ್ದು ಆದಷ್ಟು ರೈತರು ಸಾವಯವ ಪದ್ಧತಿ ಕೃಷಿ ಅಳವಡಿಸಿ ಭೂಮಿ ತಾಯಿಯನ್ನು ರಕ್ಷಿಸಬೇಕು, ರೈತ ಬಾಂಧವರು ಕೇವಲ ಬೆಳೆಯ ಇಳುವರಿಯನ್ನು ಮಾತ್ರ ಹೆಚ್ಚಿಸದೇ ಬೆಳೆ ಬೆಳೆಯುವಾಗ ತಗಲುವ ಖರ್ಚನ್ನು ಕೂಡ ಕಡಿಮೆ ಮಾಡುವುದರಿಂದ ಕೃಷಿಯನ್ನು ಲಾಭದಾಯಕವಾಗಿಸಬಹುದು ಎಂದರು. ಕೆವಿಕೆ ಮತ್ತಿಕೊಪ್ಪದ ಬೇಸಾಯ ಶಾಸ್ತ್ರ ವಿಭಾಗದ ವಿಜ್ಞಾನಿ ಜಿ. ಬಿ. ವಿಶ್ವನಾಥ ಅವರು ಮಾತನಾಡಿದರು. ಕೃಷಿ ಅಧಿಕಾರಿಗಳಾದ ಎಸ್. ಎಲ್. ದೇಸಾಯಿ, ಎಂ. ಜಿ. ಕಳಸಪ್ಪನವರ, ಆತ್ಮ ಸಿಬ್ಬಂದಿ ಉಮೇಶ್ ಯರಗಟ್ಟಿ, ಕೃಷಿ ಸಂಜೀವಿನಿ ಸಿಬ್ಬಂದಿ ಶ್ರವಣ ಶಿವಪೂಜಿ, ಮಂಜುನಾಥ ಮುಂಡೇಶಿ, ಮಹಾಂತೇಶ ಮಾಗುಂಡನವರ, ಪ್ರಗತಿ ಪರ ರೈತರು, ರೈತ ಮಹಿಳೆಯರು ಹಾಗೂ ಕೃಷಿ ಸಖಿಯರು ಹಾಜರಿದ್ದರು.

ಕ್ರಿಕೆಟ್ ಪಂದ್ಯಾವಳಿಗೆ ತಹಸೀಲ್ದಾರ್‌ಚಾಲನೆ

ಗೋಕಾಕ: ರಾಹುಲ್ ಟ್ರೋಫಿ - ಸೀಜನ್ 3 ಜಿಲ್ಲಾ ಮತ್ತು ರಾಷ್ಟ್ರ ಮಟ್ಟದ ಹೊನಲು-ಬೆಳಕಿನ ಕ್ರಿಕೆಟ್ ಪಂದ್ಯಾವಳಿಗಳಿಗೆ ನಗರದ ಮಹರ್ಷಿ ಶ್ರೀ ವಾಲ್ಮೀಕಿ ಕ್ರೀಡಾಂಗಣದಲ್ಲಿ ತಹಸೀಲ್ದಾರ ಡಾ.ಮೋಹನ ಭಸ್ಮೆ ಅವರು ಚಾಲನೆ ನೀಡಿದರು. ದಿನಾಂಕ 6 ರಿಂದ 9ರವರೆಗೆ ಜಿಲ್ಲಾ ಮಟ್ಟದ ಮಟ್ಟದ ಪಂದ್ಯಾವಳಿಗಳು ನಡೆಯಲಿದ್ದು, ಈ ಪಂದ್ಯಾವಳಿಯಲ್ಲಿ ಒಟ್ಟು 26 ತಂಡಗಳು ಭಾಗವಹಿಸಿದ್ದು, ವಿಜೇತ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 1 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ರೂಪದಲ್ಲಿ 50 ಸಾವಿರ ರೂ ನಗದು ಮತ್ತು ಆಕರ್ಷಕ ಟ್ರೋಫಿ ಪಡೆಯಲಿದ್ದಾರೆ. ದಿನಾಂಕ 10 ರಿಂದ 14ರವರೆಗೆ ರಾಷ್ಟ್ರ ಮಟ್ಟದ ರಾಹುಲ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗಳು ಜರುಗಲಿದ್ದು, ಈ ಪಂದ್ಯಾವಳಿಯಲ್ಲಿ ಗುಜರಾತ್, ಮಹಾರಾಷ್ಟ್ರ, ಗೋವಾ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಿಂದ ಒಟ್ಟು 16 ತಂಡಗಳು ಭಾಗವಹಿಸಲ್ಲಿದ್ದು, ವಿಜೇತ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 3 ಲಕ್ಷ ರೂ ನಗದು ,ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನದ ರೂಪದಲ್ಲಿ 2 ಲಕ್ಷ ರೂ ನಗದು ಮತ್ತು ಆಕರ್ಷಕ ಟ್ರೋಫಿ ಪಡೆಯಲಿದ್ದಾರೆ. ಎರಡು ಪಂದ್ಯಾವಳಿಯಲ್ಲಿ ಪಂದ್ಯ ಪುರುಷ, ಪಂದ್ಯಶ್ರೇಷ್ಠ ಸೇರಿದಂತೆ ಅನೇಕ ವೈಯಕ್ತಿಕ ಬಹುಮಾನಗಳನ್ನು ಕೊಡಲಾಗುವುದು.

ಅಗಲಿದ ಜೀವ

ಹಣಮಂತ ದೇಸಾಯಿ

ಮೂಡಲಗಿ: ಪಟ್ಟಣದ ನಿವಾಸಿ ಮತ್ತು ಶ್ರೀ ಮಹಾಲಕ್ಷ್ಮೀ ಅರ್ಬನ್ ಸೊಸಾಯಿಟಿಯ ಸಹಾಯಕ ವ್ಯವಸ್ಥಾಪಕ ಹಣಮಂತ ಬಂಡು ಮುತಾಲಿಕ ದೇಸಾಯಿ (55) ಮಂಗಳವಾರ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಮೋಹನ್ ಭಾಗವತ್,} ಆರ್‌ಎಸ್‌ಎಸ್ ಸರಸಂಘ ಚಾಲಕ

ಜನರು ಸಾಮಾಜಿಕ ವರ್ತನೆಯಲ್ಲಿ ಜಾತಿಯನ್ನು ಮೀರಿ ನಡೆದುಕೊಳ್ಳಲು ಪ್ರಾರಂಭಿಸಿದರೆ, ರಾಜಕೀಯವೂ ನಿಧಾನವಾಗಿ ಜಾತಿಯ ಆಧಾರದ ವಿಭಜನೆ ಮತ್ತು ಚುನಾವಣಾ ಲಾಭಕ್ಕಾಗಿ ಅದನ್ನು ದುರುಪಯೋಗಪಡಿಸಿಕೊಳ್ಳುವುದನ್ನು ನಿಲ್ಲಿಸುತ್ತದೆ.



ನಾಡಿನ ರೈತರ, ಕೂಲಿಕಾರರ ಪರ ಹೋರಾಡಿದ ನಾಯಕ ಬಿಎಸ್‌ವೈ | ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ

ಅಭಿಮಾನೋತ್ಸವಕ್ಕೆ ಕ್ಷೇತ್ರದ ಸಹಸ್ರಾರು ಜನ

ವಿಶ್ವವಾಣಿ ಸುದ್ದಿಮನೆ ಬೈಲಹೊಂಗಲ

ಮಾಜಿ ಮುಖ್ಯಮಂತ್ರಿ, ರೈತರ ಆಶಾಕಿರಣ ಹಾಗೂ ರಾಜ್ಯ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಬಿ.ಎಸ್ .ಯಡಿಯೂರಪ್ಪ ಅವರ ಸಾರ್ವಜನಿಕ ಜೀವನದ 50 ವರ್ಷಗಳ ಸಾರ್ಥಕ ಸೇವೆಯನ್ನು ಸ್ಮರಿಸುವ ಅಂಗವಾಗಿ ಮೇ 9 ರಂದು ಮಧ್ಯಾ ಹ್ನ 2 ಗಂಟೆಗೆ ಚಿತ್ರದುರ್ಗದಲ್ಲಿ ನಡೆಯಲಿರುವ ''ಜನಸೇವೆಯಲ್ಲಿ ಬಿ.ಎಸ್. ಯಡಿಯೂರಪ್ಪ 50 ಸಾರ್ಥಕ ವರ್ಷ ಅಭಿಮಾನೋತ್ಸವ'' ಕಾರ್ಯಕ್ರಮಕ್ಕೆ ಬೈಲಹೊಂಗಲ ಮತಕ್ಷೇತ್ರದಿಂದ ಸಾವಿರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ತಿಳಿಸಿದರು.

ಗುರುವಾರ ಪಟ್ಟಣದ ಬಿಜೆಪಿ ಗೃಹಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ರೈತರು, ಬಡವರು, ಕಾರ್ಮಿಕರು ಹಾಗೂ ಸಾಮಾನ್ಯ ಜನರ ಪರ ಹೋರಾಟ ನಡೆಸಿ ಜನಮನ ಗೆದ್ದ ನಾಯಕರಾಗಿದ್ದಾರೆ. ಐದು ದಶಕಗಳ ಕಾಲ ನಿಸ್ವಾರ್ಥ ಸೇವೆ ಸಲ್ಲಿಸಿರುವ ಅವರ ರಾಜಕೀಯ ಜೀವನ ಇಂದಿನ ಯುವ ರಾಜಕಾರಣಿಗಳಿಗೆ ಮಾದರಿಯಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಅವರು ಮಾತನಾಡಿದರು.

ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಬಿಜೆಪಿ ಕಾರ್ಯ ಕರ್ತರು, ಅಭಿಮಾನಿಗಳು ಹಾಗೂ ಮುಖಂಡರು ಭಾಗವಹಿಸಲಿದ್ದು, ಬೈಲಹೊಂಗಲ ಮತಕ್ಷೇತ್ರದಿಂದಲೂ ಭಾರೀ ಸಂಖ್ಯೆಯಲ್ಲಿ ಜನರನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿದೆ. ಕಾರ್ಯ ಕ್ರಮಕ್ಕೆ ತೆರಳಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಬಿಜೆಪಿ ಪಕ್ಷವನ್ನು ಗ್ರಾಮೀಣ ಮಟ್ಟದಲ್ಲಿ ಬಲಪಡಿಸುವಲ್ಲಿ ಹಾಗೂ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಯಡಿಯೂರಪ್ಪ ಅವರ ಪಾತ್ರ ಅಪಾರವಾಗಿದೆ. ರೈತರ ಸಾಲಮನ್ನಾ, ನೀರಾವರಿ ಯೋಜನೆಗಳು, ಗ್ರಾಮೀಣಾಭಿವೃದ್ಧಿ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಜನಮಾನಸದಲ್ಲಿ ಅಚ್ಚಳಿಯದ ಗುರುತು ಮೂಡಿಸಿದ್ದಾರೆ ಎಂದು ಅವರು ಶ್ಲಾಘಿಸಿದರು.

ಮೇ 9 ರಂದು ನಡೆಯುವ ಈ ಅಭಿಮಾನೋತ್ಸವ ಕಾರ್ಯಕ್ರಮ ಐತಿಹಾಸಿಕವಾಗಲಿದ್ದು, ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ತುಂಬುವ ಕಾರ್ಯಕ್ರಮವಾಗಲಿದೆ. ಪಕ್ಷದ ಎಲ್ಲ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮುರಗೇಶ ಗುಂಡ್ಲೂರ, ಮಡಿವಾಳಪ್ಪ ಹೋಟಿ, ಆನಂದ ಮೂಗಿ, ಅಶೋಕ ಗುಂಡ್ಲೂರ, ಹಣಮಂತ ಸಾಲಹಳ್ಳಿ, ಚಂದನ ಕೌಜಲಗಿ, ವಿಶಾಲ ಬೊಗುರ, ಬಸವರಾಜ ನೇಸರಗಿ ಹಾಗೂ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

> ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಬಿಜೆಪಿ ಕಾರ್ಯ ಕರ್ತರು, ಅಭಿಮಾನಿಗಳು ಹಾಗೂ ಮುಖಂಡರು ಭಾಗವಹಿಸಲಿದ್ದು, ಬೈಲಹೊಂಗಲ ಮತಕ್ಷೇತ್ರದಿಂದಲೂ ಭಾರೀ ಸಂಖ್ಯೆಯಲ್ಲಿ ಜನರನ್ನು ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿದೆ. ಕಾರ್ಯ ಕ್ರಮಕ್ಕೆ ತೆರಳಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.
> -ಡಾ.ವಿಶ್ವನಾಥ ಪಾಟೀಲ, ಮಾಜಿ ಶಾಸಕ

ಗ್ರಂಥಾಲಯ ಕಟ್ಟಡಕ್ಕೆ ಅನುದಾನ ಕೊಡಿ

ಹುಕ್ಕೇರಿ : ಪಟ್ಟಣದ ಶಾಖಾ ಗ್ರಂಥಾಲಯಕ್ಕೆ 2 ಅಂತಸ್ತಿನ ಸುಸಜ್ಜಿತ ನೂತನ ಕಟ್ಟಡ ನಿರ್ಮಿಸಲು ಶಾಸಕರ ಅನುದಾನದಿಂದ ಹಣ ಬಿಡಗಡೆ ಮಾಡಬೇಕು ಎಂದು ಶಾಖಾ ಗ್ರಂಥಪಾಲಕರಾದ ನಾಗಲಿಂಗ ಟಿ. ಪತ್ತಾರ ಅವರು ಶಾಸಕನಿಖಿಲ್ ಕತ್ತಿಅವರಿಗೆ ಮನವಿ ಸಲ್ಲಿಸಿದರು.

ಅವರು ಪಟ್ಟಣದ ಪುರಸಭೆಯಲ್ಲಿ ಕಾರ್ಯಾಲಯದಲ್ಲಿ ಪೌರ ಕಾರ್ಮಿಕರಿಗೆ ಸುರಕ್ಷತಾ ಕೀಟ ವಿತರಣೆ ಸಮಾರಂಭದಲ್ಲಿ ಆಗಮಿಸಿದ ಸಂಸರ್ಭದಲ್ಲಿ ಶಾಸಕ ನಿಖಿಲ ಕತ್ತಿಅವರಿಗೆ ಮನವಿ ಸಲ್ಲಿಸಿದರು.

ಗ್ರಂಥಪಾಲಕರಾದ ನಾಗಲಿಂಗ ಟಿ. ಪತ್ತಾರ ಅವರು ಮಾತನಾಡಿಪಟ್ಟಣದ ಹೃದಯ ಭಾಗದಲ್ಲಿ ಪುರಸಭೆಯಿಂದ ಗ್ರಂಥಾಲಯ ಕಟ್ಟಡಕ್ಕಾಗಿ ಖಾಲಿ ನಿವೇಶನ ನೀಡಲಾಗಿದೆ. ಹುಕ್ಕೇರಿ ಶಾಖಾ ಗ್ರಂಥಾಲಯದ ಅಭಿವೃದ್ಧಿಗೆ ನೂತನ ಕಟ್ಟಡದ ಅಗತ್ಯವಿದೆ. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಟ್ಟಡಕ್ಕಾಗಿ 50.00 ಲಕ್ಷದಅಂದಾಜುವೆಚ್ಚತಗಲಬಹುದಾಗಿದೆ ಎಂದು ತಿಳಿಸಿದ್ದಾರೆ.

ಪಟ್ಟಣದ ಕಳೆದ14 ವರ್ಷದಿಂದ ಹಳೆ ಪುರಸಭೆಕಟ್ಟಡದಲ್ಲಿಗ್ರಂಥಾಲಯಕಾರ್ಯನಿರ್ವಹಿಸುತ್ತಿದೆ.ಸದ್ಯಇರುವಗ್ರಅಥಾಲಯಈ ಕಟ್ಟಡವು ಹಳೆಯದಾಗಿದ್ದು,ಮೇಲ್ಛಾವಣಿ ಹಂಚುಗಳು ಒಡೆದು ಹೋಗಿವೆ. ಮಳೆಗಾಲದಲ್ಲಿ ಸೂರುತ್ತಿದೆ.

ಹುಕ್ಕೇರಿ ಪುರಸಭೆ ಕಾರ್ಯಾಲಯದಲ್ಲಿ ಗ್ರಂಥಾಲಯ ಹೊಸ ಕಟ್ಟಡ ನಿರ್ಮಿಸಲು ಶಾಖಾ ಗ್ರಂಥಪಾಲಕರು ಶಾಸಕ ನಿಖಿಲ್ ಉಮೇಶ್ ಕತ್ತಿಅವರಿಗೆ ಮನವಿ ಸಲ್ಲಿಸಿದರು.

ಗ್ರಂಥಾಲಯದಲ್ಲಿರುವ ಪುಸ್ತಕ, ದಿನಪತ್ರಿಕೆಗಳು ಮಳೆಯಿಂದ ನಾಶವಾಗುತ್ತಿವೆ. ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ತಾಲೂಕಾ ಕೇಂದ್ರವಾಗಿರುವುದರಿಂದ ಸುತ್ತಮತ್ತ ಗ್ರಾ ಮೀಣ ಪ್ರದೇಶದ ವಿದ್ಯಾರ್ಥಿಗಳು ಹಾ ಗೂ ಓದುಗರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಅವಶ್ಯವಿರುವ ಐಎಎಸ್. ಕೆಎಎಸ್.ಎಫ್ಡಿಎ. ಎಸ್ಡಿಎ. ಸಿಡಿಎಸ್, ನೀಟ್, ಸಿಇಟಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆತ ಯಾರಿಗೆ ಬೇಕಾಗುವ ಪುಸ್ತಕಗಳು ಲಭ್ಯ ಇವೆ. ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆತಯಾರಿಗೋಸ್ಕರ ಅಭ್ಯರ್ಥಿಗಳಿಗೆ ಗ್ರಂಥಾಲಯಕ್ಕೆ ಆಗಮಿಸುತ್ತಾರೆ. ಓದುಗರ ಹಿತದೃಷ್ಟಿಯಿಂದ ಶಾಸಕರು ಮುತುವರ್ಜಿ ವಹಿಸಿ 2 ಅಂತಸ್ತಿನ ಕಟ್ಟಡಕ್ಕೆಅನುಧಾನ ಬಿಡಗಡೆಗೊಳಿಸಿದಲ್ಲಿನ ನೂತನ ಕಟ್ಟದಲ್ಲಿ ಡಿಜಿಟಲ್ ಲೈಬ್ರರಿ, ರೀಡಿಂಗ್ರೂಂ, ಇಂಟರ್ನೆಟ್ ಸೌಲಭ್ಯಕಲ್ಪಿಸುವ ಕಲ್ಪಿಸಿಬಹುದಾಗಿದೆ ಎಂದು ವಿನಂತಿಸಿದರು.

ಶಾಸಕ ನಿಖಿಲ ಕತ್ತಿಅವರು ಮಾತನಾಡಿ ಗ್ರಂಥಾಲಯ ಕಟ್ಟಡಕ್ಕೆ ಶೀಘ್ರದಲ್ಲಿ ಅನುಧಾನ ಬಿಡಗಡೆಗೊಳಿಸಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಪರೀಕ್ಷೆ ಅನುಕೂಲ ಮಾಡಿಕೂಡಲಾಗುವುದು ಎಂದು ಹೇಳಿದರು. ಪುರಸಭೆ ಮುಖ್ಯಾಧಿಕಾರಿ ಈರಣ್ಣಾ ಸಿದ್ನಾಳ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ .ಗ್ರಂಥಾಲಯ ಸಿಬ್ಬಂದಿ ಗೀರಮಲಯ್ಯಾ ಮಠಪತಿ, ಮುಖಂಡರಾದ ಇಮ್ರಾನ ಮೋಮಿನ, ರಾಜು ಮನ್ನೋಳಿ. ಎ.ಕೆ. ಪಾಟೀಲ, ರಾಜು ಚೌಗಲಾ, ಗಜಬರ ಮುಲ್ಲಾ, ಪುರಸಭೆ ಅಧಿಕಾರಿಗಳು ಉಪಸ್ಥಿತರಿದ್ದರು.

ಶಿರಡಿ ಸಾಯಿಬಾಬಾ ಮಂದಿರದ ಲೋಕಾರ್ಪಣೆ

ಬೆಳಗಾವಿ: ಬೆಳಗಾವಿಯ ಬಸವನ ಕುಡಚಿಯ ಸಾಯಿ ಕಾಲೋನಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಲೋಕಾರ್ಪಣೆ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭ ಭಕ್ತಿ ಹಾಗೂ ಧಾರ್ಮಿಕ ಸಂಭ್ರಮದ ವಾತಾವರಣದಲ್ಲಿ ಅದ್ದೂರಿಯಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಭಾಗವಹಿಸಿ, ದೇವಸ್ಥಾನವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಧಾರ್ಮಿಕ ಕೇಂದ್ರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಹೇಳಿದರು. ಶಿರಡಿ ಸಾಯಿಬಾಬಾ ಅವರು ಮಾನವಕುಲಕ್ಕೆ ಅಮೂಲ್ಯ ಸಂದೇಶವನ್ನು ನೀಡಿದ್ದು, ಅವರ ಆದರ್ಶಗಳು ಇಂದಿನ ಸಮಾಜಕ್ಕೂ ದಾರಿದೀಪವಾಗಿವೆ. ಇಂತಹ ಮಂದಿರಗಳು ಕೇವಲ ಪೂಜಾ ಸ್ಥಳಗಳಾಗದೇ, ಸಮಾಜವನ್ನು ಒಗ್ಗೂಡಿಸುವ ಆಧ್ಯಾತ್ಮಿಕ ಕೇಂದ್ರಗಳಾಗಬೇಕು ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ದೇವಸ್ಥಾನದ ಸಂಸ್ಥಾಪಕರು ಹಾಗೂ ನವಜೀವನ್ ಫೌಂಡೇಷನ್ನ ಮುಖ್ಯಸ್ಥರಾದ ಡಾ. ಸತೀಶ್ ಆರ್. ಚೌಲಿಗೇರ್‌ಅವರನ್ನು ಅಭಿನಂದಿಸಿದ ಚನ್ನರಾಜ ಹಟ್ಟಿಹೊಳಿ, ಸಮಾಜಮುಖಿ ಕಾರ್ಯಗಳೊಂದಿಗೆ ಧಾರ್ಮಿಕ ಸೇವೆಯನ್ನೂ ಕೈಗೊಂಡಿರುವುದು ಶ್ಲಾಘನೀಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿಶೇಷ ಪೂಜೆ, ಹೋಮ-ಹವನ, ವಿಗ್ರಹ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ವಿಧಿವಿಧಾನಗಳು ಭಕ್ತಿಭಾವದಿಂದ ನೆರವೇರಿದವು.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಾಯಿಬಾಬಾರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಗುರು-ಹಿರಿಯರು, ಸ್ಥಳೀಯ ನಿವಾಸಿಗಳು, ಮಾಜಿ ಸೈನಿಕರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.



ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಶಿರಡಿ ಸಾಯಿಬಾಬಾರ ದೇವಸ್ಥಾನವನ್ನು ಲೋಕಾರ್ಪಣೆಗೊಳಿಸಿದರು.

ಜಾನುವಾರುಗಳ ಆರೋಗ್ಯ ರಕ್ಷಣೆಗೆ ಲಸಿಕೆ ಹಾಕಿಸಿ

ರಾಯಬಾಗ: ತಾಲೂಕಿನ ಹಾರೂಗೇರಿ ಪಶು ಆಸ್ಪತ್ರೆ ವ್ಯಾಪ್ತಿಗೆ ಬರುವ ಜಾನುವಾರುಗಳಿಗೆ ಲಸಿಕೆ ಹಾಕಲಾಯಿತು. ಕಾಲುಬಾಯಿ ರೋಗ ಎತ್ತು, ಹೋರಿ, ಹಸು, ಎಮ್ಮೆ ಮತ್ತು ಹಂದಿಗಳಲ್ಲಿ ಕಂಡುಬರುವ ಮಾರಕ ಖಾಯಿಲೆಯಾಗಿದೆ ಇದರಿಂದ ರಕ್ಷಿಸುವ ಸಲುವಾಗಿ ಮೂರು ತಿಂಗಳ ಮೇಲ್ಪಟ್ಟ ಜಾನುವಾರುಗಳಿಗೆ ಲಸಿಕೆ ಹಾಕುವದು ಅಗತ್ಯವಾಗಿದೆ. ರೈತರ ದುಬಾರಿ ಬೇಲೆಯ ಜಾನುವಾರುಗಳ ಹಿತದೃಷ್ಟಿಯಿಂದ ಕಾಲುಬಾಯಿ ರೋಗ ಮುಕ್ತ ಮಡುವ ಉದ್ದೇಶ ಹೊಂದಿದೆ ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಪಶು ಆಸ್ಪತ್ರೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ ಮನೋಹರ ಪತ್ತಾರ ತಿಳಿಸಿದ್ದಾರೆ.

ಇದೆ ಸಂದರ್ಭದಲ್ಲಿ ಲಸಿಕೆದಾರರಾದ ಜಯಶ್ರೀ ತೇರದಾಳ,ಅಮೋಘ ಕಂಕಣವಾಡಿ, ಜೀವನಕುಮಾರ ಬನಹಟ್ಟಿ, ಶಿವಾನಂದ ಜಂಬಗಿ, ಪರಶುರಾಮ ಗೊಂಡಿ ಸೇರಿ ಇದ್ದರು.

ಹಾರೂಗೇರಿ ಪಶು ಆಸ್ಪತ್ರೆ ವ್ಯಾಪ್ತಿಗೆ ಬರುವ ಜಾನುವಾರುಗಳಿಗೆ ಲಸಿಕೆ ಹಾಕಲಾಯಿತು.

ಯರಗಟ್ಟಿ ಪಟ್ಟಣದ ಪರಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯ ಪಾಲಕರಾದ ಶ್ರೀಮತಿ ಆಶಾ ಪರೀಟ ಇವರಿಗೆ ಉತ್ತಮ ಸೇವೆ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಇತ್ತಿಚಿಗೆ ಬೆಳಗಾವಿಯ ಕುಮಾರ ಗಂಧರ್ವ ಕಲಾಮಂದಿರದಲ್ಲಿ ಕರ್ನಾಟಕ ಕರ್ನಾಟಕ ರಾಜ್ಯ ಸರಕಾರಿ ಮಹಿಳೆಯರ ನೌಕರ ಸಂಘ ಬೆಂಗಳೂರು ಘಟಕದ ವತಿಯಿಂದ ನಡೆದ ಜಿಲ್ಲಾ ಮತ್ತು ತಾಲೂಕು ಘಟಕ ಉದ್ಘಾಟನೆ ಮತ್ತು ಪ್ರದಗ್ರಹಣ ಸಂದರ್ಭದಲ್ಲಿ ವಸತಿ ನಿಲಯ ಪಾಲಕರಾದ ಶ್ರೀಮತಿ ಆಶಾ ಪರೀಟ ಇವರಿಗೆ 2025-26ನೇ ಸಾಲಿನ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ, ಗೌರವಿಸಲಾಗಿದ್ದು, ಅವರನ್ನು ಸವದತ್ತಿ-ಯರಗಟ್ಟಿ ತಾಲೂಕಾ ನೌಕರ ಸಂಘ, ವಸತಿ ನಿಲಯ ಪಾಲಕರು ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಕಾಮಗಾರಿ ಶೀಘ್ರ ಪೂರ್ಣ: ಶಾಸಕ

ರಾಮದುರ್ಗ: ಬಹು ದಿನಗಳ ನಿರೀಕ್ಷಿತ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಈಗಾಗಲೇ ಕರೆದ ಟೆಂಡರ್‌ರದ್ದುಗೊಳಿಸಿ, ಹೊಸ ಟೆಂಡರ್‌ಕರೆದು ಮುಂಬರುವ ಮೇ ತಿಂಗಳ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ವಿಧಾನಸಭೆ ಮುಖ್ಯ ಸಚೇತಕ ಹಾಗೂ ಶಾಸಕ ಅಶೋಕ ಪಟ್ಟಣ ಹೇಳಿದರು. ತಾಲೂಕಿನ ಹಾಲೊಳ್ಳಿ ಗ್ರಾಮದಲ್ಲಿ ರೂ. 50 ಲಕ್ಷ ವೆಚ್ಚ ಹಾಗೂ ಸಿದ್ನಾಳ ಗ್ರಾಮದಲ್ಲಿ ರೂ. 30 ಲಕ್ಷ ವೆಚ್ಚದ ಸಿಸಿ ರಸ್ತೆ ಕಾಮಗಾರೊಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿ, ಈ ಹಿಂದಿನ ಅವಧಿಯಲ್ಲಿ ಆರಂಭಗೊಂಡ ವೀರಭದ್ರೇಶ್ವರ ಏತ ನೀರಾವರಿ ಕಾಮಗಾರಿ ಕಾರಣಾಂತರದಿಂದ ನೆನೆಗುದಿಗೆ ಬಿದ್ದಿದೆ. ಪುನಃ ಕ್ರಿಯಾಯೋಜನೆ ರೂಪಿಸಿ, ತಾಲೂಕಿನ ಅಂದಾಜು 60 ಗ್ರಾಮಗಳಿಗೆ ನೀರಾವರಿ ಭಾಗ್ಯ ದೊರೆಯಲಿದೆ ಎಂದು ಹೇಳಿದರು. ಸಾಲಾಪೂರ ಏತ ನೀರಾವರಿ ಕಾಮಗಾರಿ ಭರದಿಂದ ಸಾಗಿದ್ದು, ಅಗತ್ಯ ಅನುದಾನಗಳನ್ನು ಸರಕಾರದಿಂದ ಬಿಡುಗಡೆಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ. ಪ್ರಸಕ್ತ ಸಾಲಿನಲ್ಲಿ ಬಸವೇಶ್ವರ ಏತ ನೀರಾವರಿ ಕಾಮಗಾರಿ ಎಲ್ಲಾ ಕೆಲಸಗಳನ್ನು ಡಿಸೆಂಬರ್‌ತಿಂಗಳಲ್ಲಿ ಪೂರ್ಣಗೊಳಿಸಿ, ಯೋಜನೆಯಿಂದ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಶ್ರಮಿಸುತ್ತೇನೆ. ರೈತರು ಆತಂಕಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು. ಪ್ರಾರಂಭಿಸುತ್ತಿರುವ ಕಾಮಗಾರಿ ಮುಕ್ತಾಯ ಹಂತ ತಲುಪುವ ವೇಳೆಗೆ ಬಾಕಿ ಉಳಿದ ಕಾಮಗಾರಿಗೆ ಅನುದಾನ ಬಿಡುಗಡೆಗೊಳಿಸಿ, ಕೆಲಸ ಪ್ರಾರಂಭಿಸುತ್ತೇನೆ ಎಂದು ಹೇಳಿದರು.

ಗ್ರಾಮದ ಹಿರಿಯ ಮುಖಂಡ ಸಂಗನಗೌಡ ಪಾಟೀಲ, ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ದ್ಯಾಮನಗೌಡ ಬಸನಗೌಡ್ರ ಗ್ರಾಮದ ಬೇಡಿಕೆಗಳ ಕುರಿತು ಹಾಗೂ ಶಾಸಕರಿಗೆ ಸಚಿವ ಸ್ಥಾನ ದೊರೆತು ಮತ್ತಷ್ಟು ಕ್ಷೇತ್ರದ ಅಭಿವೃದ್ಧಿ ಮಾಡಲಿ ಎಂದರು. ಗ್ರಾಮಸ್ಥರಾದ ಯಲ್ಲನಗೌಡ ಪಾಟೀಲ, ಈರಪ್ಪ ಕೊಡ್ಲಿವಾಡ, ಮಲ್ಲಿಕಾರ್ಜುನ ಸಿಂಗಾರಗೊಪ್ಪ, ಬಸಪ್ಪ ಗವನ್ನವರ, ಉಮೇಶ ಕೂಡ್ಲಗೇರಿ, ಜಿ.ಪಂ ಎಇಇ ಮಹ್ಮದ ಇಜಾನ, ನಾಗರಾಜ ಇದ್ದರು.

ಗ್ರಾಮೀಣರ ಆಟ ಕಬಡ್ಡಿಗೆ ಬೆಳಗಾವಿಯೇ ತವರು

ಮೂಡಲಗಿ: ಅಪ್ಪಟ ಗ್ರಾಮೀಣ ಆಟವಾದ ಕಬಡ್ಡಿ ಬೆಳಗಾವಿ ಜಿಲ್ಲೆಯ ಹಳ್ಳಿಗಾಡಿನ ಯುವಕರ ಏಕಮೇವ ನೆಚ್ಚಿನ ಆಟವಾಗಿ ಬೆಳೆದು ಬಂದಿದ್ದು ಇಲ್ಲಿಯ ಆಟಗಾರರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕಬಡ್ಡಿಯನ್ನು ಕೊಂಡೊಯ್ದಿದ್ದು ಹೀಗಾಗಿ ಕಬಡ್ಡಿಗೆ ಬೆಳಗಾವಿಯೇ ತವರಾಗಿದೆ ಎಂದು ಬೆಳಗಾವಿ ಜಿಲ್ಲಾ ಅಮೆಚೂರು ಕಬಡ್ಡಿ ಅಸೋಷಿಯೇಷನ್ ಪ್ರಧಾನ ಕಾರ್ಯದರ್ಶಿ ಹಾಲಪ್ಪ ಹುಕ್ಕೇರಿ ಅಭಿಪ್ರಾಯಪಟ್ಟರು

ಅವರು ಬುಧವಾರದಂದು ಪಟ್ಟಣದ ಮೂಡಲಗಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ಮಹಾವಿದ್ಯಾಲಯ ಹಾಗೂ ಕಲಾ ವಾಣಿಜ್ಯ ಹಾಗೂ ಬಿಸಿ ಎ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಜರುಗುತ್ತಿರುವ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸನ್ 2025.26 ನೇ ಸಾಲಿನ ವಲಯ ಹಾಗೂ ಅಂತರ ವಲಯ ಪುರುಷರ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೆಳಗಾವಿ ಜಿಲ್ಲೆಯ ಕಬಡ್ಡಿ ಆಟಗಾರರ ಪ್ರೇಕ್ಷಕರ ಅಭಿಮಾನಿಗಳ ಸಂಘ ಸಂಸ್ಥೆಗಳ ಸಹಕಾರ ಮತ್ತು ಆಶೀರ್ವಾದ ಒಂದಿದ್ದರೆ ಬೆಳಗಾವಿ ಜಿಲ್ಲೆಯಲ್ಲಿ ಪ್ರೋ ಕಬಡ್ಡಿ ಸಂಘಟಿ ಸುವದಾಗಿ ಹಾಲಪ್ಪ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯವರು ಸದಾ ಕ್ರೀಡೆಗಳಿಗೆ ಪ್ರೋತ್ಸಾಹಿಸಿ ಆಟಗಳನ್ನು ಸಂಘಟಿಸುತ್ತಿರುವದು ಮೆಚ್ಚುವಂತದ್ದಾಗಿದೆ ಎಂದರು

ಅಧ್ಯಕ್ಷತೆಯನ್ನು ವಹಿಸಿದ್ದ ಮೂಡಲಗಿ ಶಿಕ್ಷಣ ಸಂಸ್ಥೆಯ ಚೇರಮನ್ ವೆಂಕಟೇಶ ಸೋನವಾಲ್ಕರ ಮಾತನಾಡಿ ಕ್ರೀಡೆಗಳಲ್ಲಿ ನಿರ್ಣಾಯಕರ ನಿರ್ಣಾಯಕ್ಕೆ ಬದ್ಧರಾಗಿರುವುದು ಬಹಳ ಮಹತ್ವದಾಗಿರುತ್ತದೆ ಕ್ರೀಡಾಪಟುಗಳು ಕ್ರೀಡಾ ಮನೋ ಭಾವದಿಂದ ಆಟ ಆಡಬೇಕು ಯಾವುದೇ ವಾದವಿವಾದಗಳಿಗೆ ಆಸ್ಪದ ಮಾಡಿ ಕೊಡಬಾರದೆಂದು

ಪುರುಷರ ಕಬಡ್ಡಿ ಪಂದ್ಯಾವಳಿಯನ್ನು ಹಾಲಪ್ಪ ಹುಕ್ಕೇರಿ, ವೆಂಕಟೇಶ ಸೋನವಾಲಕರ, ರವೀಂದ್ರ ಸೋನವಾಲಕರ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಅಮೆಚೂರು ಕಬಡ್ಡಿ ಅಸೋಷಿಯೇಶನ್ ಪ್ರಧಾನ ಕಾರ್ಯದರ್ಶಿ ಹಾಲಪ್ಪ ಹುಕ್ಕೇರಿ ಹಾಗೂ ಕ್ರೀಡಾಪಟುಗಳಿಗೆ ಸಮವಸ್ತ್ರ ಕೊಡುಗೆ ನೀಡಿದ ಮಂಜುನಾಥ ಸೈನಿಕ ತರಬೇತಿ ಸಂಸ್ಥೆಯ ಅಧ್ಯಕ್ಷ ಲಕ್ಷ್ಮಣ ಅಡಿಹುಡಿ ಅವರನ್ನು ಮೂಡಲಗಿ ಶಿಕ್ಷಣ ಸಂಸ್ಥೆಯ ಪರವಾಗಿ ಶಾಲು ಹೊದಸಿ ಫಲಪುಷ್ಪಗಳನ್ನು ನೀಡಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮೂಡಲಗಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಆರ್. ಪಿ. ಸೋನವಾಲ್ಕರ, ನಿರ್ದೇಶಕ ಎ ವ್ಹಿ. ಹೊಸಕೋಟಿ, ಲಕ್ಷ್ಮಣ ಅಡಿಹುಡಿ ಆಡಳಿತಾಧಿಕಾರಿ ಡಾ. ಎಸ್. ಎಲ್ ಚಿತ್ರಗಾರ ಪ್ರಾಚಾಯ9 ಡಾ. ಎಮ್ . ಕೆ. ಕಂಕಣವಾಡಿ ಕ್ರೀಡಾ ವಿಭಾಗದ ಅಧ್ಯಕ್ಷರುಗಳಾದ ಪ್ರೊ ಎಲ್. ಬಿ . ಮಣ್ಣಾಪುರೆ ಪ್ರೊ ಪಿ ಬಿ ಚೌಡಕಿ ಸಂಘಟನಾ ಕಾರ್ಯದರ್ಶಿಗಳಾದ ಪ್ರೊ ಭೀಮಶಿ ಬಡಗಣ್ಣವರ ಪ್ರೊ ಬಿ ಎಸ್ ಕಂಬಾರ ಪ್ರೊ ಯಲ್ಲಪ್ಪ ಭರಮಣ್ಣವರ ಮಲ್ಲು ಮಳಲಿ ಪೂಜಾ ಗಲಗಲಿ ಗಿರೆಪ್ಪ ಮುಂತಾದವರು ಉಪಸ್ಥಿತರಿದ್ದರು ಪ್ರೊ ಭೀಮಶಿ ಬಡಗಣ್ಣವರ ಸ್ವಾಗತಿಸಿದರು, ಪ್ರೊ ಸಂತೋಷ ಮುಗಳಿ ನಿರೂಪಿಸಿದರು,. ಪ್ರೊ ವೇದಾ ದೇಶಪಾಂಡೆ ವಂದಿಸಿದರು.

ಯರಗಟ್ಟಿಯಲ್ಲಿ ನೀರಿನ ಬವಣೆ ಅಕ್ರಮ ನಲ್ಲಿಗಳ ತೆರವು

ಯರಗಟ್ಟಿ : ಬಿಸಿಲಿನ ತಾಪಮಾನಕ್ಕೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುಂಜಾಗ್ರತವಾಗಿ ಗ್ರಾಮದಲ್ಲಿ 19 ಅನಧಿಕೃತ ನೀರಿನ ನಳಗಳ ಪಟ್ಟಿ ಮಾಡಲಾಗಿದೆ ಇವುಗಳನ್ನು ತೆರವುಗೊಳಿಸಲಾಗುತ್ತಿದೆ.

ಇತ್ತಿಚಿಗೆ ಬೆಳಗಾವಿಯಲ್ಲಿ ನಡೆದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಳಗಾವಿ ಹಾಗೂ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ಕುಡಿಯುವ ನೀರಿನ ಪರಿಸ್ಥಿತಿ ಹಾಗೂ ಆಡಳಿತಾತ್ಮಕ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ಮೇಲಾಧಿಕಾರಿಗಳ ಆದೇಶದ ಮೇರೆಗೆ ಅಧಿಕೃತ ನೀರಿನ ನಳಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯ ಬಗ್ಗೆ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲ. ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ ಅಧಿಕೃತ ನೀರಿನ ನಳಗಳ ಪಟ್ಟಿ ಮಾಡಿ ತೆರವು ಕಾರ್ಯಾಚರಣೆ ಆರಂಭವಾಗಿದೆ ಎಂದು ಎಇಇ ಪ್ರೇಮ ರಾಠೋಡ ತಿಳಿಸಿದ್ದಾರೆ.

ಭಾವುಕತೆ

ಶವ ಸಂಸ್ಕಾರದ ವೇಳೆಯೂ ನಗು

ಜಪಾನ್‌ನಲ್ಲಿ ಲಾಫಿಂಗ್ ಬುದ್ಧ ಎಂಬ ಜೆನ್ ಗುರು ಇದ್ದ. ಒಂದು ಜೋಳಿಗೆ ತುಂಬಿಕೊಂಡು ಹೋದಲ್ಲಿ ಬಂದಲ್ಲಿ ಮಕ್ಕಳಿಗೆ ಮಿಠಾಯಿ ಹಂಚುತ್ತಿದ್ದ. ಅವನು ಹೋದಲ್ಲೆಲ್ಲ ನಗೆ ಬುಗ್ಗೆ ಸಿಡಿಸುತ್ತಿದ್ದ. ಜಗತ್ತಿನ ಯಾವುದೇ ವಿಚಾರವಿರಲಿ, ಅವನ ನಗೆಗೆ ಕಾರಣ ಆಗುತ್ತಿತ್ತು. ಯಾವತ್ತೂ ಸಂತೋಷವಾಗಿರಬೇಕು ಎನ್ನುವುದು ಅವನ ತತ್ವ. ಅದಕ್ಕೇ ಅವನನ್ನು ಲಾಫಿಂಗ್ ಬುದ್ಧ ಎನ್ನುತ್ತಿದ್ದರು. ಒಂದು ದಿನ ಅವನು ಸತ್ತುಹೋದ. ಅವನನ್ನು ಅವನ ಜೋಳಿಗೆಯ ಸಮೇತ ಸುಡಲಾಯಿತು. ಅವನ ದೇಹಕ್ಕೆ ಅಗ್ನಿಸ್ಪರ್ಶ ಆಗುತ್ತಿರುವಂತೆ, ಇದ್ದಕ್ಕಿದ್ದಂತೆ ಅವನ ಜೋಳಿಗೆಯೊಳಗಿಂದ ನೂರಾರು ಪಟಾಕಿಗಳು ಸಿಡಿಯುತ್ತಾ ಚಿನಕುರುಳಿ ಸೃಷ್ಟಿಸುತ್ತಾ ಸುತ್ತಲಿದ್ದವರ ಕಣ್ಣಿಗೆ ಹಬ್ಬ ಸೃಷ್ಟಿಸಿದವು. ನಗುವ ಬುದ್ಧ ತನ್ನ ಶವಸಂಸ್ಕಾರದಲ್ಲೂ ನಗೆಯನ್ನೇ ಅಲ್ಲಿದ್ದವರಿಗೆ ಕೊಟ್ಟಿದ್ದ.

ಸುತ್ತ ಮುತ್ತ

ಭಾರತೀಯರೇ ಬೇಕು, ಯಾಕೆ?

ಮೊಹಮ್ಮದ್ ಅಲಬ್ಬಾರ್ ಅವರು ದುಬೈನ ಬುರ್ಜ್ ಖಲೀಫಾ ಕಟ್ಟಡದ ಹಿಂದೆ ಇರುವ ಪ್ರಮುಖ ವ್ಯಕ್ತಿ ಮತ್ತು ಎಮ್ಮಾರ್ ಪ್ರಾಪರ್ಟೀಸ್ ಸಂಸ್ಥಾಪಕ. ಅವರು ಉದ್ಯೋಗಕ್ಕೆ ಭಾರತೀಯರನ್ನೇ ತಗೊಳ್ಳೋದಕ್ಕೆ ಬಯಸುತ್ತಾರಂತೆ. ಅದ್ಯಾಕೆ? ಕಾರಣ ಅವರದೇ ಮಾತುಗಳಲ್ಲಿ ಹೀಗಿದೆ- ಭಾರತೀಯರನ್ನು ಕೆಲಸಕ್ಕೆ ತೆಗೆದುಕೊಳ್ಳಲು ನನಗೆ ಇಷ್ಟ. ಏಕೆಂದರೆ ಅವರು ರಾತ್ರಿ ಒಂದು ಗಂಟೆಯಾದರೂ ಫೋನ್ ಮಾಡಿದಾಗ ಎತ್ತುತ್ತಾರೆ. ಭಾರತೀಯರ ನಿಯಮಿತ ಕೆಲಸದ ಶೈಲಿ, ಶ್ರಮಪಟ್ಟು ಕೆಲಸ ಮಾಡುವ ಗುಣ ಮತ್ತು ರಾತ್ರಿ ತಡವಾದರೂ ಕೆಲಸಕ್ಕೆ ಸಿದ್ಧರಾಗಿರುವ ಮನೋಭಾವ ಇಷ್ಟ. ಕೆಲಸದ ನಿಷ್ಠೆ ಬಹಳ ಮುಖ್ಯ. ನನ್ನ ಬುದ್ಧಿಮತ್ತೆ ಸಾಮಾನ್ಯವಾಗಿರಬಹುದು, ಆದರೆ ನನ್ನ ದೊಡ್ಡ ಶಕ್ತಿ ಕಠಿಣ ಪರಿಶ್ರಮ. ಸಹಜ ಪ್ರತಿಭೆಗಿಂತ ನಿರಂತರ ಪರಿಶ್ರಮ ಮತ್ತು ಸಮರ್ಪಣೆ ಹೆಚ್ಚು ಮಹತ್ವದ್ದು, ಅವರ ಪ್ರಕಾರ, ಕೇವಲ ಹೆಚ್ಚು ಸಮಯ ಕೆಲಸ ಮಾಡುವುದೇ ಪರಿಶ್ರಮ ಅಲ್ಲ, ಅವಕಾಶಗಳನ್ನು ಸರಿಯಾಗಿ ಅಳೆಯುವುದು, ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ್ತು ಶಿಸ್ತಿನ ತಂಡವನ್ನು ನಿರ್ಮಿಸುವುದೂ ಪರಿಶ್ರಮದ ಭಾಗವೇ ಅಂತೆ.

ಹನಿಮಳೆ

ವಿಪರ್ಯಾಸ

ಬಸ್ಸಲ್ಲಿ ಕಂಡಕ್ಟರು ತಗೋಳ್ರೋ
ಅಂತ ಬಡಕೊಂಡರೂ ಹಲವರು
ಟಿಕೆಟ್ಟು ತಗೋಳೋಲ್ಲ
ಇನ್ನು ಕೆಲವರು ಪಕ್ಷದ ಕಚೇರಿ ಮುಂದೆ
ಹೊಡೆದಾಟ ಮಾಡ್ತಾರೆ
ಆದರೆ ಟಿಕೆಟ್ ಸಿಕ್ಕೊಲ್ಲ
• ನಾರಾಯಣ ಪೊಸ್ಥಿತ್ತುಲ್ಲ

ಸೂಜಿ ಚುಚ್ಚಿದರೆ ನೋವು ಮಾಯ!

• ಅಜಯ್ ಅಂಚೆಪಾಳ್ಯ

ನಮಗೆಲ್ಲಾ ನೋವು ಬರುವುದೇಕೆ? ನೋವು ತಿನ್ನಲು ಎಂಬ ಮಾತಿದೆ. ಹಾಗೆ ನೋಡಿದರೆ, ನೋವು ಬರುವುದು ನಮಗೆ ಅನುಕೂಲ ಮಾಡಲು! ಉದಾಹರಣೆಗೆ, ಕೈಗೆ ವಸ್ತುವೊಂದು ತಗುಲಿ ದೌರ್ಬಲ್ಯ ಉಂಟಾದಾಗ, ಆ ಕೈಯನ್ನು ಇನ್ನಷ್ಟು ಬಳಸಿದರೆ, ಕೈ ಇನ್ನಷ್ಟು ದುರ್ಬಲವಾದೀತು. ಆದ್ದರಿಂದ, ನೋವು ಬಂದು, ಕೈ ಜಾಸ್ತಿ ಬಳಸದಂತಾಗುತ್ತದೆ. ದೇಹವು ಆ ದೌರ್ಬಲ್ಯವನ್ನು ತನ್ನಷ್ಟಕ್ಕೆ ತಾನು ಗುಣಪಡಿಸಿಕೊಂಡ ನಂತರ, ಕೈಯನ್ನು ಉಪಯೋಗಿಸಬಹುದು. ಇದು ನೋವಿನಿಂದಾಗುವ ಲಾಭ.

ಆದರೆ, ನೋವು ಬಂದಾಗ, ಅದರ 'ಬ್ಯಾನಿ'ಯನ್ನು ಅನುಭವಿಸಿದಾಗಲೇ ಗೊತ್ತು, ನೋವಿಗಿರುವ ಶಕ್ತಿ. ಕೆಲವು ನೋವುಗಳು ಬದುಕನ್ನೇ ಬೇಸರಗೊಳಿಸಬಲ್ಲವು. ನೋವು ನಿವಾರಕವಾಗಿ ಮನುಷ್ಯನು ಅನಾದಿ ಕಾಲದಿಂದ ಹಲವು ವಿಧಾನಗಳನ್ನು ಉಪಯೋಗಿಸುತ್ತಿದ್ದಾನೆ. ಆಧುನಿಕ ಯುಗ ನೋವು ನಿವಾರಕಗಳು ಬರುವ ಮುಂಚೆ, ಬಿಸಿನೀರಿನ ಶಾಖ, ಮಂತ್ರ ಹಾಕುವುದು, ಮೆಣಸಿನ ಕಾಳಿನ ಪಟ್ಟಿ – ಹೀಗೆ ಹಲವು ಪುರಾತನ ಪದ್ಧತಿಗಳು ನೋವನ್ನು ಗುಣಪಡಿಸಲು ಪ್ರಯತ್ನಿಸುತ್ತಿದ್ದವು. ಅವುಗಳಲ್ಲಿ ಅಕ್ಯುಪಂಕ್ಚರ್ ಒಂದು; ಮತ್ತು ಈ ವಿಧಾನದ ಹಿಂದೆ ವೈಜ್ಞಾನಿಕ ಚಿಂತನೆಯೂ ಅಡಗಿದೆ ಎಂದು ಇತ್ತೀಚೆಗೆ ವಿಜ್ಞಾನಿಗಳು ಗುರುತಿಸತೊಡಗಿದ್ದಾರೆ.

ಅಕ್ಯುಪಂಕ್ಚರ್ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಚೀನಾದ ಪರಂಪರೆಯ ಚಿಕಿತ್ಸಾ ವಿಧಾನ. ದೇಹದ ನಿರ್ದಿಷ್ಟ ಬಿಂದುಗಳಲ್ಲಿ ಸೂಕ್ಷ್ಮವಾದ ಸೂಜಿಗಳನ್ನು ಇರಿಸುವ ಮೂಲಕ ದೇಹದ ನೋವು, ಒತ್ತಡ ಮತ್ತು ಇತರ ಆರೋಗ್ಯ ಸಮಸ್ಯೆಗಳನ್ನು ಕಡಿಮೆ ಮಾಡುವ ವಿಧಾನ ಇದಾಗಿದೆ.



ಇತ್ತೀಚಿನ ವರ್ಷಗಳಲ್ಲಿ ಅಕ್ಯುಪಂಕ್ಚರ್‌ಗೆ ಹೆಚ್ಚು ಮಾನ್ಯತೆ ದೊರಕುತ್ತಿದೆ; ಇದು ಹೇಗೆ ಕೆಲಸ ಮಾಡುತ್ತದೆ ಮತ್ತು ನೋವನ್ನು ಹೇಗೆ ಕಡಿಮೆ ಮಾಡುತ್ತಿದೆ ಎಂಬುದರ ಕುರಿತು ಸಂಶೋಧನೆಗಳು ನಡೆದಿವೆ.

ಮೆರಿಡಿಯನ್

ಮಾನವ ದೇಹದಲ್ಲಿ 'ಮೆರಿಡಿಯನ್' ಎಂದು ಕರೆಯಲ್ಪಡುವ ಶಕ್ತಿಪಥಗಳು ಇವೆ ಎಂಬುದು ಪರಂಪರೆಯ ಚೀನೀ ವೈದ್ಯಕೀಯದ ನಂಬಿಕೆ. ಈ ಶಕ್ತಿಯನ್ನು 'ಚಿ' ಎಂದು ಕರೆಯುತ್ತಾರೆ. ದೇಹದಲ್ಲಿ ಈ ಶಕ್ತಿಯ ಹರಿವು ಅಸಮತೋಲನಗೊಂಡಾಗ ನೋವು ಮತ್ತು ಕೆಲವು ಕಾಯಿಲೆಗಳು ಉಂಟಾಗುತ್ತವೆ ಎಂದು ಅದು ಹೇಳುತ್ತದೆ. ಅಕ್ಯುಪಂಕ್ಚರ್‌ನಲ್ಲಿ ಸೂಕ್ಷ್ಮ ಸೂಜಿಗಳನ್ನು ದೇಹದ ಕೆಲವು ಬಿಂದುಗಳಲ್ಲಿ ಚುಚ್ಚುವ ಮೂಲಕ, ಈ ಶಕ್ತಿಯ ಹರಿವನ್ನು ಸಮತೋಲನಗೊಳಿಸಲಾಗುತ್ತದೆ. ಅಕ್ಯುಪಂಕ್ಚರ್‌ನಿಂದ ಹಲವರು ನೋವುಗಳನ್ನು ಕಡಿಮೆ ಮಾಡಿ ಕೊಂಡಿದ್ದಾರೆ. ಅದರ ಹಿಂದಿನ ರಹಸ್ಯವೇನು?

ಯಾವ ನೋವಿಗೆ ಉಪಯುಕ್ತ?

ಅಕ್ಯುಪಂಕ್ಚರ್ ಹಲವು ವಿಧದ ದೀರ್ಘಕಾಲೀನ ಮತ್ತು ತಾತ್ಕಾಲಿಕ ನೋವಿಗೆ ಉಪಯುಕ್ತವಾಗಿದೆ.

- ಬೆನ್ನು ನೋವು
- ಕುತ್ತಿಗೆ ನೋವು
- ಮೈಗ್ರೇನ್ ಮತ್ತು ತಲೆನೋವು
- ಸಂಧಿವಾತದ ನೋವು
- ಮೊಣಕಾಲು ನೋವು
- ಸ್ನಾಯು ನೋವು ಇತ್ಯಾದಿ

ಅಕ್ಯುಪಂಕ್ಚರ್ ನೋವನ್ನು ಕಡಿಮೆ ಮಾಡುವುದಕ್ಕೆ ಹಲವು ವೈಜ್ಞಾನಿಕ ಕಾರಣಗಳನ್ನು ಸೂಚಿಸಲಾಗಿದೆ.

- **ನರಮಂಡಲವನ್ನು ಉತ್ತೇಜಿಸುತ್ತದೆ:** ಸೂಜಿಗಳನ್ನು ಚರ್ಮದೊಳಗೆ ಇರಿಸಿದಾಗ ನರಮಂಡಲ ಸಕ್ರಿಯಗೊಳ್ಳುತ್ತದೆ. ಇದರಿಂದ ಮೆದುಳು 'ಎಂಡೋರ್ಫಿನ್ಸ್' ಎಂಬ ನೈಸರ್ಗಿಕ ಪೇನ್ ಕಿಲ್ಲರ್ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಇವು ದೇಹದ ನೋವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಎಂಡೋರ್ಫಿನ್ ಎಂಬುದು ನಮ್ಮಲ್ಲೇ ಇರುವ ನೋವು ನಿವಾರಕ!
- **ರಕ್ತಸಂಚಾರ ಹೆಚ್ಚಿಸುತ್ತದೆ:** ಅಕ್ಯುಪಂಕ್ಚರ್ ಮಾಡಿದ ಪ್ರದೇಶದಲ್ಲಿ ರಕ್ತಪ್ರವಾಹ ಹೆಚ್ಚುತ್ತದೆ. ಇದರಿಂದ ಉರಿಯೂತ ಕಡಿಮೆಯಾಗುತ್ತದೆ ಮತ್ತು ಗಾಯಗೊಂಡ ಸ್ನಾಯುಗಳು ಅಥವಾ ಕಣಗಳು ಬೇಗ ಚೇತರಿಸಿಕೊಳ್ಳಲು ಸಹಾಯವಾಗುತ್ತದೆ. ಬಿಸಿನೀರಿನ ಶಾಖದಿಂದಲೂ ರಕ್ತಸಂಚಾರ ಹೆಚ್ಚಿ, ನೋವು ಕಡಿಮೆಯಾಗುವುದು ಹಲವರ ಗಮನಕ್ಕೆ ಬಂದಿದೆ.
- **ಸ್ನಾಯುಗಳ ಒತ್ತಡವನ್ನು ಕಡಿಮೆ ಮಾಡುತ್ತದೆ:** ಬಹಳ ಜನರಿಗೆ ಕುತ್ತಿಗೆ ನೋವು, ಬೆನ್ನು ನೋವು ಮತ್ತು ಭುಜ ನೋವು ಸ್ನಾಯುಗಳ ಗಟ್ಟಿತನದಿಂದ ಉಂಟಾಗುತ್ತದೆ. ಅಕ್ಯುಪಂಕ್ಚರ್ ಸ್ನಾಯುಗಳನ್ನು ಶಾಂತಗೊಳಿಸಿ ದೇಹದ ಒತ್ತಡವನ್ನು ಕಡಿಮೆ ಮಾಡುತ್ತದೆ. ಕೆಲವು ಅಧ್ಯಯನಗಳ ಪ್ರಕಾರ, ಸೂಜಿ ಚುಚ್ಚಿದಾಗ, ಮೆದುಳಿನಲ್ಲಿ ನೋವನ್ನು ಗ್ರಹಿಸುವ ವಿಧಾನವನ್ನು ಬದಲಾಯಿಸಬಹುದು. ಇದರಿಂದ ವ್ಯಕ್ತಿಗೆ ನೋವು ಕಡಿಮೆಯಾಗಿ ಅನುಭವವಾಗುತ್ತದೆ.

ಅಕ್ಯುಪಂಕ್ಚರ್ ಸುರಕ್ಷಿತವೇ?

ಅನುಭವಿ ತಜ್ಞರಿಂದ ಮಾಡಿಸಿಕೊಳ್ಳುವ ಅಕ್ಯುಪಂಕ್ಚರ್ ಸಾಮಾನ್ಯವಾಗಿ ಸುರಕ್ಷಿತವಾಗಿದೆ. ಬಳಸುವ ಸೂಜಿಗಳು ಬಹಳ ಸಣ್ಣವಾಗಿದ್ದು ಹೆಚ್ಚಿನ ನೋವು ಉಂಟುಮಾಡುವುದಿಲ್ಲ. ಕೆಲವರಿಗೆ ಗಾಯದ ಜಾಗ ಕೆಂಪಾಗುವುದು ಅಥವಾ ಸ್ವಲ್ಪ ಸುಸ್ತು ಕಾಣಿಸಬಹುದು.

ಇಂದು ಅನೇಕ ಆಸ್ಪತ್ರೆಗಳು ಮತ್ತು ಪೇನ್ ಕ್ಲಿನಿಕ್‌ಗಳಲ್ಲಿ ಅಕ್ಯುಪಂಕ್ಚರ್ ಅನ್ನು ಪೂರಕ ಚಿಕಿತ್ಸೆಯಾಗಿ ಬಳಸಲಾಗುತ್ತಿದೆ. ವಿಶೇಷವಾಗಿ ದೀರ್ಘಕಾಲದ ನೋವು ಇರುವವರಿಗೆ ಔಷಧಿಗಳ ಬಳಕೆಯನ್ನು ಕಡಿಮೆ ಮಾಡಲು ಇದು ಸಹಾಯಕವಾಗಬಹುದು.

ಅಕ್ಯುಪಂಕ್ಚರ್ ಒಂದು ಪ್ರಾಚೀನ ಚಿಕಿತ್ಸಾ ವಿಧಾನ: ದೇಹದ ಸ್ವಾಭಾವಿಕ ಚಿಕಿತ್ಸಾ ಶಕ್ತಿಯನ್ನು ಉತ್ತೇಜಿಸುವ ಮೂಲಕ ಇದು ನೋವನ್ನು ಕಡಿಮೆ ಮಾಡಲು ನೆರವಾಗುತ್ತದೆ. **(ಈ ಬರಹವು ಸ್ವಯಂವೈದ್ಯವನ್ನು ಪ್ರೋತ್ಸಾಹಿಸುವುದಿಲ್ಲ. ಚಿಕಿತ್ಸೆಯನ್ನು ಆರಂಭಿಸುವ ಮೊದಲು ತಜ್ಞರ ಸಲಹೆ ಪಡೆಯುವುದು ಅಗತ್ಯ.)**

ಹಂಟಾ ವೈರಸ್ ಎಂದರೇನು?

ಈ ವೈರಸ್ ಹೆಸರನ್ನೇ ಜನ ಸಾಮಾನ್ಯರು ಕೇಳಿರಲಿಕ್ಕಿಲ್ಲ. ಕಳೆದ ವಾರ, ಅರ್ಜೆಂಟೈನಾದ ಒಂದು ಕ್ರೂಸ್ ಪ್ರವಾಸದಲ್ಲಿರುವವರಿಗೆ ಈ ವೈರಸ್ ಸೋಂಕು ತಗುಲಿ, ಮೂವರು ಮೃತರಾದ ನಂತರ, ಈ ವೈರಸ್ ಸುದ್ದಿಯಲ್ಲಿದೆ.

ಆದರೆ, ಈ ವೈರಸ್ ಕುರಿತು ಮನುಷ್ಯರು ಹೆಚ್ಚು ಭಯಪಡಬೇಕಿಲ್ಲ! ಏಕೆಂದರೆ, ಇದು ಮುಖ್ಯವಾಗಿ ಮೂಷಿಕಗಳನ್ನು ಕಾಡುವ ವೈರಸ್. ಅತಿ ಅಪರೂಪದ ಸಂದರ್ಭದಲ್ಲಿ ಈ ವೈರಸ್ ಸೋಂಕಿಗೆ ಮನುಷ್ಯರು ಗುರಿಯಾಗ ಬಹುದು: ಹಾಗಾದಾಗ, ಅತಿಯಾದ ಜ್ವರ ಬಂದು, ಶ್ವಾಸಕೋಶದಲ್ಲಿ ತೊಂದರೆಯಾದೀತು ಮತ್ತು ಪ್ರಾಣಕ್ಕೆ ಅಪಾಯವಾಗಬಲ್ಲದು.

ಡಬ್ಲ್ಯುಎಚ್‌ಒ ಸಂಸ್ಥೆಯು ಈ ಕುರಿತು ಹೇಳಿಕೆ ನೀಡಿದ್ದು, ಜನ ಸಾಮಾನ್ಯರು ಈ ಕುರಿತು ಗಾಬರಿ ಪಡಬೇಕಿಲ್ಲ ಮತ್ತು ಮನುಷ್ಯರಿಂದ ಮನುಷ್ಯರಿಗೆ ಇದು ಹರಡುವ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಿದೆ.

ಅರ್ಜೆಂಟೀನಾ ಸರಹದ್ದಿನಲ್ಲಿ ಪ್ರವಾಸಕ್ಕೆ ಹೋಗಿದ್ದ ಕ್ರೂಸ್ ಸದಸ್ಯರು, ಅಲ್ಲಿನ ಒಂದು ದ್ವೀಪಕ್ಕೆ ಪಕ್ಷಿವೀಕ್ಷಣೆಗೆ ಹೋಗಿದ್ದರು; ಆ ಸಂದರ್ಭದಲ್ಲಿ, ಈ ಅಪರೂಪದ ವೈರಸ್ ಸೋಂಕಿಗೆ ಗುರಿಯಾಗಿರಬಹುದು ಎಂದು ತಜ್ಞರು ಊಹಿಸಿದ್ದಾರೆ. ಆ ಸೋಂಕಿಗೆ ಗುರಿಯಾದ ಮೂಷಕಗಳ ಮೂತ್ರ ಅಥವಾ ಎಂಜಲಿನ ಸಂಪರ್ಕಕ್ಕೆ ಮನುಷ್ಯರು ಬಂದರೆ, ಅದರಲ್ಲೂ ಅದನ್ನು ಉಸಿರಿನಲ್ಲಿ ಸೇವಿಸಿದರೆ ಮಾತ್ರ ಈ ಸೋಂಕು ತಗಲಬಹುದು. ಆ ಕ್ರೂಸ್ ಪ್ರವಾಸದಲ್ಲಿದ್ದ ಮೂವರು ಮೃತಪಟ್ಟದ್ದರಿಂದಾಗಿ, ಹಂಟಾ ವೈರಸ್ ಈಗ ಸುದ್ದಿಯಲ್ಲಿದೆ. ಆದರೆ, ಅದು ಮನುಷ್ಯನಿಂದ ಮನುಷ್ಯನಿಗೆ ಹರಡುವ ಪ್ರಮಾಣ ತೀರಾ ಕಡಿಮೆಯಾಗಿದ್ದರಿಂದ, ಹೆಚ್ಚು ಗಾಬರಿ ಪಡಬೇಕಿಲ್ಲ ಎಂದು ಡಬ್ಲ್ಯು ಎಚ್‌ಒ ಹೇಳಿದೆ.

ರಾಮಚರಿತ ಮಾನಸ: ರಾಮರಾಜ್ಯದ ಸೌರಭ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಪಟ್ಟಾಭಿಷೇಕದ ನಂತರ ಅಯೋಧ್ಯೆಯು ಕೇವಲ ಸುಖದ ತಾಣವಾಗಿರಲಿಲ್ಲ, ಅದು ಮೌಲ್ಯಗಳ ಪಾಠಶಾಲೆಯಾಗಿತ್ತು. ರಾಮನ ದೈನಂದಿನ ಕಾಯಕವೆಂದರೆ ಜನರ ಅಂತರಂಗದ ಅಂಧಕಾರವನ್ನು ದೂರ ಮಾಡುವುದು. ಒಂದು ಮುಂಜಾನೆ, ರಾಮನು, ಹನುಮಂತ ಮತ್ತು ಲಕ್ಷ್ಮಣನೊಂದಿಗೆ ನಗರದ ಹೊರವಲಯದಲ್ಲಿ ಸಂಚರಿಸುತ್ತಿದ್ದಾಗ, ಗಂಗೆಯ ತೀರದಲ್ಲಿ ಒಬ್ಬ ಬಡವನು ಅಳುತ್ತಿರುವುದನ್ನು ಕಂಡನು. ಅವನು ಒಬ್ಬ ಸಾಮಾನ್ಯ ಮರಕಡಿಯುವವನಾಗಿದ್ದ. ಅವನ ಅಳುವನ್ನು ಕಂಡು ರಾಮನು ತಾನೇ ಅವನ ಬಳಿ ನಡೆದು ಹೋದನು.

ಲಕ್ಷ್ಮಣನು ಆಶ್ಚರ್ಯಚಕಿತನಾಗಿ ಕೇಳಿದನು. ಅಣ್ಣಾ, ಒಬ್ಬ ಸಾಮಾನ್ಯ ಪ್ರಜೆಗಾಗಿ ನೀನು ಇಷ್ಟು ಶ್ರಮ ವಹಿಸಬೇಕೇ? ಅದಕ್ಕೆ ರಾಮನು ಮುಗುಳ್ನಗುತ್ತಾ ಹೇಳಿದನು, ಲಕ್ಷ್ಮಣ, ರಾಜನಾದವನು ಪ್ರಜೆಯ ಕಣ್ಣೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಾಣಬೇಕು. ಆ ಕಣ್ಣೀರು ಬತ್ತದ ಹೊರತು ರಾಜ್ಯಕ್ಕೆ ಶಾಂತಿಯಿಲ್ಲ.

ರಾಮನು ಆ ಬಡವನ ಹೆಗಲ ಮೇಲೆ ಕೈಯಿಟ್ಟಾಗ, ಅವನು ಬೆಚ್ಚಿಬಿದ್ದನು. ತನ್ನ ಎದುರಿಗೆ ಅಯೋಧ್ಯಾಪತಿ ನಿಂತಿರುವುದನ್ನು ಕಂಡು ಧನ್ಯನಾದನು. ಅವನು ಹೇಳಿದನು, ಪ್ರಭು, ನನ್ನ ಅಣ್ಣನು ಆಸ್ತಿಯ ಆಸೆಯಿಂದ ನನ್ನನ್ನು ಮನೆಯಿಂದ ಹೊರಹಾಕಿದ್ದಾನೆ. ಧರ್ಮದ ದಾರಿಯಲ್ಲಿ ನಡೆಯುವ ನನಗೆ ಈಗ ಹಸಿವು ಮತ್ತು ಅವಮಾನವೇ ಗತಿಯಾಗಿದೆ.

ರಾಮನು ಅವನನ್ನು ಅರಮನೆಗೆ ಕರೆತಂದನು. ಆದರೆ, ಅವನ ಅಣ್ಣನನ್ನು ಶಿಕ್ಷಿಸುವ ಬದಲು, ಇಬ್ಬರನ್ನೂ ಕರೆಸಿ ಸಮಾಧಾನದಿಂದ ಮಾತನಾಡಿದನು. ಸಂಪತ್ತಿಗಿಂತ ಸಂಬಂಧ ದೊಡ್ಡದೆಂದು ವಿವರಿಸಿದನು. ರಾಮನ ಆ ಕರುಣಾಮಯಿ ಮಾತುಗಳು ಕಲ್ಲಿನಂತಹ ಅಣ್ಣನ ಹೃದಯವನ್ನು ಕರಗಿಸಿದವು. ತುಳಸೀದಾಸರು ಈ ಕ್ಷಮಾಗುಣ ಮತ್ತು ರಾಮನ ಸಮದೃಷ್ಟಿಯನ್ನು ಈ ಚೌಪದಿಯಲ್ಲಿ ಹೀಗೆ ವರ್ಣಿಸುತ್ತಾರೆ,

''ಜೇ ನ ಮಿತ್ರ ದುಖ ಹೋಹಿಂ ದುಖಾರೀ ।
ತಿನ್ಹಹಿ ಬಿಲೋಕತ ಪಾತಕ ಭಾರೀ ॥
ನಿಜ ದುಖ ಗಿರಿ ಸಮ ರಜ ಕರಿ ಜಾನಾ । ಮಿತ್ರಕ ದುಖ ರಜ ಮೇರು ಸಮಾನಾ ॥''

ಭಾವಾರ್ಥ: ಯಾರು ಮಿತ್ರನ ದುಃಖವನ್ನು ಕಂಡು ದುಃಖಿತರಾಗುವುದಿಲ್ಲವೋ, ಅವರನ್ನು ನೋಡುವುದೇ ಪಾಪ. ತನಗಿರುವ ಬೆಟ್ಟದಂತಹ ದುಃಖವನ್ನು ಸಣ್ಣ ಧೂಳಿನಂತೆ ಭಾವಿಸಿ, ಇತರರ ಸಣ್ಣ ಕಷ್ಟವನ್ನು ಮಹಾಮೇರು ಪರ್ವತದಂತೆ ತಿಳಿದು ಪರಿಹರಿಸುವವನೇ ನೈಜ ರಾಮ.

ರಾಮರಾಜ್ಯದಲ್ಲಿ ಕೇವಲ ಮನುಷ್ಯರಷ್ಟೇ ಅಲ್ಲ, ಪ್ರಕೃತಿಯ ಪ್ರತಿಯೊಂದು ಅಣುವೂ ರಾಮ ನಾಮದಲ್ಲಿ ಲೀನವಾಗಿತ್ತು. ರಾಮನು ಪ್ರತಿ ಶನಿವಾರ ಜನಸಾಮಾನ್ಯರೊಂದಿಗೆ ಕುಳಿತು ಊಟ ಮಾಡುತ್ತಿದ್ದನು. ಅಲ್ಲಿ ಜಾತಿ, ಮತ, ಕುಲದ ಭೇದವಿರಲಿಲ್ಲ. ಶಬರಿಯು ನೀಡಿದ ಎಂಜಲು ಹಣ್ಣನ್ನು ಸವಿದ ರಾಮನಿಗೆ, ಅರಮನೆಯ ಪಂಚಭಕ್ಷ್ಯ ಪರಮಾನ್ನಕ್ಕಿಂತ ಜನರ ಪ್ರೇಮವೇ ಶ್ರೇಷ್ಠವಾಗಿತ್ತು.



ಒಮ್ಮೆ ಭರತನು ಕೇಳಿದನು, ಅಣ್ಣಾ, ಈ ರಾಜ್ಯದಲ್ಲಿ ಕಳ್ಳತನವಿಲ್ಲ, ರೋಗವಿಲ್ಲ, ಅಕಾಲ ಮರಣವಿಲ್ಲ. ಇದಕ್ಕೆ ಕಾರಣವೇನು? ರಾಮನು ಉತ್ತರಿಸಿದನು, ಭರತಾ, ಎಲ್ಲಿ ರಾಜನು ಪ್ರಜೆಯನ್ನು ತನ್ನ ಪ್ರಾಣವೆಂದು ಭಾವಿಸುತ್ತಾನೋ ಮತ್ತು ಪ್ರಜೆಯು ರಾಜನನ್ನು ತನ್ನ ಆತ್ಮವೆಂದು ನಂಬುತ್ತಾನೋ, ಅಲ್ಲಿ ಕಾಲಪುರುಷನೂ ಕೂಡ ಧರ್ಮಕ್ಕೆ ತಲೆಬಾಗುತ್ತಾನೆ. ಅಹಂಕಾರವನ್ನು ಬಿಟ್ಟು 'ನಾನು' ಎಂಬುದನ್ನು 'ನಾವು' ಎಂದು ಬದಲಿಸಿದರೆ ಅದೇ ರಾಮರಾಜ್ಯ. ಅಯೋಧ್ಯೆಯ ಆಕಾಶದಲ್ಲಿ ಪಕ್ಷಿಗಳು ಹಾಡು ವಾಗಲೂ ರಾಮನ ಗುಣಗಾನ ಮಾಡುತ್ತಿದ್ದವು. ಸಿಂಹ ಮತ್ತು ಜಿಂಕೆ ಒಂದೇ ಘಟ್ಟದಲ್ಲಿ ನೀರು ಕುಡಿಯುತ್ತಿದ್ದವು. ಇದು ಕೇವಲ ಕಲ್ಪನೆಯಲ್ಲ, ಇದು ರಾಮನ 'ಅಹಿಂಸಾ ಪರಮೋ ಧರ್ಮ' ಎಂಬ ತತ್ವದ ಪ್ರಭಾವವಾಗಿತ್ತು.

ಕೈಕೇಯಿ ಮಾತೆ ಈಗ ಅಯೋಧ್ಯೆಯ ಅತ್ಯಂತ ಗೌರವಾನ್ವಿತ ಮಾತೆಯಾಗಿದ್ದಳು. ರಾಮನು ಪ್ರತಿ ದಿನ ಮೊದಲು ಅವಳ ಆಶೀರ್ವಾದ ಪಡೆಯುತ್ತಿದ್ದನು. 'ಕ್ಷಮೆಯೇ ಶಕ್ತಿ' ಎಂಬುದನ್ನು ರಾಮನು ಜಗತ್ತಿಗೆ ಸಾರಿ ಹೇಳಿದ್ದನು. ಅಯೋಧ್ಯೆಯ ಹಾದಿಯಲ್ಲಿ ನಡೆಯುವಾಗ ಪ್ರತಿಯೊಬ್ಬ ವ್ಯಕ್ತಿಯೂ ಮತ್ತೊಬ್ಬರನ್ನು 'ರಾಮ್ ರಾಮ್' ಎಂದು ಗೌರವದಿಂದ ಮಾತನಾಡಿಸುತ್ತಿದ್ದರು.

ನಮ್ಮ ಹೃದಯದ ಸಿಂಹಾಸನದ ಮೇಲೆ ರಾಮನನ್ನು, ಅವನ ತತ್ವಗಳನ್ನು ಹೃದಯದಲ್ಲಿ ಅಳವಡಿಸಿಕೊಂಡರೆ ನಮ್ಮ ಬದುಕು ಕೂಡ ಒಂದು ಪುಟ್ಟ ಅಯೋಧ್ಯೆಯಾಗುತ್ತದೆ. ಅಲ್ಲಿ ಹತಾಶೆಗೆ ಜಾಗವಿಲ್ಲ, ಕೇವಲ ಭರವಸೆಯ ಬೆಳಕಿರುತ್ತದೆ. ಇಂದಿಗೆ ರಾಮಚರಿತ ಮಾನಸದ ಈ ಕಥಾ ಸರಣಿ ಮುಕ್ತಾಯವಾಗುತ್ತದೆ. ಜೈ ಶ್ರೀ ರಾಮ್.

ಮಾನವೀಯತೆಯ ಮಹಾನದಿ ರೆಡ್‌ಕ್ರಾಸ್

ಇಂದು ರೆಡ್‌ಕ್ರಾಸ್ ದಿನ

• ಮಲ್ಲಪ್ಪ ಸಿ. ಖೊದ್ನಾಪೂರ

ಶ್ರೇಷ್ಠ ಹೋರಾಟಗಾರ ಮಾರ್ಟಿನ್ ಲೂಥರ್ ಕಿಂಗ್ ಅವರು, 'Life's most persistent and urgent question is, "What are you doing for others?' ಅದನ್ನೇ ಪುರಂದರ ದಾಸರು 'ಮಾನವ ಜನ್ಮ ದೊಡ್ಡದು, ಅದ ಹಾನಿ ಮಾಡಲು ಬೇಡ' ಎಂದಿರುವುದು. ಪ್ರವಾಹ, ಅಪಘಾತ ಮತ್ತು ಇನ್ನಿತರ ನೈಸರ್ಗಿಕ ವಿಕೋಪದಂತಹ ಸಂದರ್ಭದಲ್ಲಿ ಜೀವನ್ಮರಣದ ಮಧ್ಯೆ ಹೋರಾಟ ಮಾಡುತ್ತಿರುವ ಜೀವಿಗಳನ್ನು ರಕ್ಷಿಸಲು ಮತ್ತು ಅಗತ್ಯವಾದಲ್ಲಿ ರಕ್ತದಾನ ಮಾಡುವದರ ಮೂಲಕ ಅವರನ್ನು ಪ್ರಾಣಾಪಾಯದಿಂದ ಸಂರಕ್ಷಿಸುವುದು ರೆಡ್ ಕ್ರಾಸ್ ಘಟಕದ ಸ್ವಯಂ ಸೇವಕರ ಆದ್ಯ ಕರ್ತವ್ಯವಾಗಿದೆ.

ಆಚರಣೆಯ ಧ್ಯೇಯೋದ್ದೇಶ: ಪ್ರತಿವರ್ಷ ಮೇ 8ರಂದು ಜಾಗತಿಕವಾಗಿ ರೆಡ್ ಕ್ರಾಸ್ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಯುದ್ಧ, ವಿಪತ್ತು ಮತ್ತು ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಮತ್ತು ಮಾನವೀಯ ಸೇವೆಗಳನ್ನು ಸಲ್ಲಿಸುವ ಸ್ವಯಂ ಸೇವಕರನ್ನು ಗೌರವಿಸುವ ದಿನ. ಜನರಿಗೆ ಅವಶ್ಯಕ ಮಾನವೀಯ ಸೇವೆ ನೀಡುವ ಬಗ್ಗೆ ಜಾಗೃತಿ ಮೂಡಿಸುವುದೇ ಈ ದಿನದ ಆಚರಣೆಯ ಪ್ರಮುಖ ಧ್ಯೇಯೋದ್ದೇಶ.

ಹಿನ್ನೆಲೆ: 1859ರಲ್ಲಿ ಹೆನ್ರಿ ಡ್ಯೂನಾಂಟ್ ಅವರು ಸೋಲ್ಫರಿನೋ ಎಂಬಲ್ಲಿ ನಡೆದ ಯುದ್ಧದ ಭೀಕರತೆಯನ್ನು ಕಣ್ಣಾರೆ ಕಂಡು, ಗಾಯಗೊಂಡ ಯೋಧರಿಗೆ ಮತ್ತು ಸೈನಿಕರಿಗೆ ಸೇವೆ ಸಲ್ಲಿಸಲು ಈ ರೆಡ್ ಕ್ರಾಸ್ ಸಂಸ್ಥೆಯನ್ನು ಸ್ಥಾಪಿಸಿದರು. ಇದೇ 1984ರಲ್ಲಿ ಮೊದಲ ವಿಶ್ವ ರೆಡ್ ಕ್ರಾಸ್ ದಿನವಾಗಿ ಆಚರಿಸಲ್ಪಟ್ಟಿತು. ರೆಡ್ ಕ್ರಾಸ್ ಸಂಸ್ಥೆಯಡಿಯಲ್ಲಿ ರಕ್ತದಾನ, ಪ್ರಥಮ ಚಿಕಿತ್ಸೆ, ತುರ್ತು ನೆರವು ಮತ್ತು ಮಾನವೀಯ ಸೇವೆಗಳನ್ನು ನೀಡುತ್ತಿರುವ ಡ್ಯೂನಾಂಟ್ ಅವರಿಗೆ 1901ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. ಡ್ಯೂನಾಂಟ್ ಅವರ ಜನ್ಮದಿನ ಮೇ 8ರಂದು ರೆಡ್ ಕ್ರಾಸ್ ದಿನ ಆಚರಿಸಲಾಗುತ್ತಿದೆ.

ರೆಡ್ ಕ್ರಾಸ್ ದಿನದ ಮಹತ್ವ: ರಾಷ್ಟ್ರದ ಆರೋಗ್ಯ, ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ರೆಡ್ ಕ್ರಾಸ್‌ನ ಪಾತ್ರ ಅನನ್ಯವಾಗಿದೆ. ನೈಸರ್ಗಿಕ ವಿಕೋಪಗಳಂತಹ ಸಂದರ್ಭಗಳಲ್ಲಿ ರೆಡ್ ಕ್ರಾಸ್ ಸ್ವಯಂ ಸೇವಕರು ಜನ, ಜಾನುವಾರು, ಸಾರ್ವಜನಿರ ಆಸ್ತಿ-ಪಾಸ್ತಿ ಸಂರಕ್ಷಿಸುವಲ್ಲಿ ಪಾತ್ರ ವಹಿಸಬೇಕಾಗಿರುವುದು ಇಂದಿನ ಅಗತ್ಯ. ಯುವಕರು ಸಮಾಜದಲ್ಲಿ ಸದೃಢ ಭಾರತಕ್ಕಾಗಿ ಸದೃಢ ಯುವಕರು ಎಂಬಂತೆ ಆರೋಗ್ಯದ ಜಾಗೃತಿ ಮೂಡಿಸಬೇಕು. ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಚಳುವಳಿಯ ಮೂಲಭೂತ ತತ್ವಗಳನ್ನು ಕಾರ್ಯರೂಪಕ್ಕೆ ತರಬೇಕು.

ವಿದ್ಯಾರ್ಥಿಗಳು ರೆಡ್ ಕ್ರಾಸ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರಾಷ್ಟ್ರೀಯ ಸೇವಾ ಮನೋಭಾವದ ಗುಣವನ್ನು ಬೆಳೆಸಿಕೊಳ್ಳಬೇಕು. ರಕ್ತದಾನ, ಪ್ರಥಮ ಚಿಕಿತ್ಸೆ, ತುರ್ತು ನೆರವು, ಆಹಾರ ಪೂರೈಕೆಯಂತಹ ಮಾನವೀಯ ಮತ್ತು ನಿಸ್ವಾರ್ಥ ಸೇವೆಗಳನ್ನು ಮಾಡುತ್ತಾ, ರಾಷ್ಟ್ರಕ್ಕಾಗಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಬೇಕು. ಈ ಸಮಾಜ ನನಗೇನು ಕೊಟ್ಟಿದೆ ಎನ್ನುವದಕ್ಕಿಂತಲೂ ನನಗೆ ಏನೆಲ್ಲವನ್ನು ನೀಡಿದ ಈ ಸಮಾಜಕ್ಕೆ ನಾನೇನು ಕೊಡುಗೆ ನೀಡಬಲ್ಲೆನೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

2026ನೆಯ ವರ್ಷದ ಘೋಷವಾಕ್ಯ: 'ಮಾನವೀಯತೆಯನ್ನು ಜೀವಂತವಾಗಿರಿಸಿ (Make Humanity to be alive)' ಎಂಬ ಸಂದೇಶದೊಂದಿಗೆ ಆಚರಿಸಲಾಗುತ್ತಿರುವ ಈ ರೆಡ್ ಕ್ರಾಸ್ ದಿನದ ಅಂಗವಾಗಿ ನಾವು ವಿಜ್ಞಾನ-ತಂತ್ರಜ್ಞಾನದಲ್ಲಿ ಅದೆಷ್ಟೋ ಮುಂದುವರೆದರೂ ಮಾನವೀಯತೆಯನ್ನು ಬಿಡಬಾರದು. ರೆಡ್ ಕ್ರಾಸ್ ಸ್ವಯಂ ಸೇವಕರಿಗೆ ಗೌರವ ನಮನಗಳನ್ನು ಸಲ್ಲಿಸೋಣ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1			2	■	3	■	4	5
	■	■	6			7	■	
	■	8		■	■	9	10	
11			■	12	■	■		■
■	■	13				14	■	■
■	15	■	■		■	16		17
18		19	■	■	20		■	
	■	21	22			■	■	
23		■		■	24			

ಎಡದಿಂದ ಬಲಕ್ಕೆ

1. ಜೈನ ಪದ್ಧತಿಯಲ್ಲಿ ಸಾಯುವವರೆಗೆ ಉಪವಾಸ ಕೈಗೊಳ್ಳುವ ವ್ರತ (4)
4. ಎರಡಕ್ಷರದ ಉಷ್ಣತೆ (2)
6. ಮರ ಕತ್ತರಿಸುವ ಸಾಧನ (4)
8. ಸತ್ವ ಅಥವಾ ತಿರುಳು (2)
9. ಹಿಮದ ಅಂಶವಿದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಚಂದ್ರನಿಗೆ ಈ ಹೆಸರಿದೆ (3)
11. ರಾಶಿ ಅಥವಾ ಗುಂಪು (3)
13. ಪತಿಯ ಸಾವಿನ ನಂತರ ಜತೆಗೇ ಪತ್ನಿಯು ಕೂಡ ಚಿತೆಯೇರುವ ಅನಿಷ್ಟ ಪದ್ಧತಿ (5)
16. ಹಾಡುಗಾರನ ಮತ್ತೊಂದು ಹೆಸರು (3)
18. ಸಂತೋಷ ಅಥವಾ ಹಾಸ್ಯವೂ ಆದೀತು (3)
20. ಎರಡಕ್ಷರದ ಶತ್ರು (2)
21. ದಿಕ್ಕುತಪ್ಪಿಸಿ ಬಂದಿರುವ ಧೈರ್ಯ ಅಥವಾ ಸಾಹಸ (4)
23. ಚರ್ಮದ ಊದುಚೀಲ (2)
24. ಪುರಸ್ಕಾರವಲ್ಲ, ಕಡೆಗಣಿಸುವಿಕೆ (4)

ಮೇಲಿಂದ ಕೆಳಕ್ಕೆ

1. ಜತೆಯಲ್ಲಿಯೇ ವಾಸಿಸುವುದು (4)
2. ಗರ ಬಡಿದಂತಿರುವ ದೊಡ್ಡ ಪಟ್ಟಣ (3)
3. ಬಾಗಿಲು, ಪೆಟ್ಟಿಗೆ ಇತ್ಯಾದಿಗಳನ್ನು ಭದ್ರಪಡಿಸಲು ಹಾಕುವ ಸಾಧನ (2)
5. ಪರರ ಕೈಯಲ್ಲಿದೆ ಕೊಡಲಿ (3)
7. ಕಾಗದ ಪತ್ರಗಳಲ್ಲಿ ಹಾಕುವ ರುಜು (2)
8. ಶಕ್ತಿ ಮೀರಿ ಮಾಡುವ ಕೆಲಸ (3)
10. ಚರ್ಮ ಮತ್ತು ಮೂಳೆಗಳ ಮಧ್ಯೆ ಇರುವ ಮೃದುವಾದ ಪದಾರ್ಥ (2)
12. ರಾತ್ರಿ ಕಳೆದ ನಂತರ ಬರುವುದು (3)
14. ನರಿಯ ನಡುವೆ ಸಿಲುಕಿದ ಚರ್ಮದ ವಾದ್ಯ (3)
15. ತಲೆಕೆಳಗಾದ ಬೇನೆ (2)
17. ಮತ್ತೊಂದು ಕೈಯನ್ನು ಕಟ್ಟಿಕೊಂಡಿರುವ ಮರುಕ (4)
18. ಅಂತಿಮವಾಗಿ ಮಾಡಿದ ಬಿನ್ನಹ (3)
19. ಹಸುವಿನ ಮತ್ತೊಂದು ಹೆಸರು (2)
20. ದೇವತೆಗಳ ತಾಯಿ (3)
22. ಕತ್ತಲೆ ಅಥವಾ ಅಜ್ಞಾನ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಸಲ್ಲೇಖನ 4.ತಾಪ 6.ಗರಗಸ 8.ಸಾರ 9.ಹಿಮಾಂಶು 11.ಸಮೂಹ 13.ಸಹಗಮನ 16.ಗಾಯಕ 18.ವಿನೋದ 20.ಅರಿ 21ನತಟ್ಟದಿ 23.ತಿದಿ 24.ತಿರಸ್ಕಾರ

ಮೇಲಿಂದ ಕೆಳಕ್ಕೆ
1.ಸಹವಾಸ 2.ನಗರ 3.ಬೀಗ 5.ಪರಶು 7.ಸಹಿ 8.ಸಾಹಸ 10.ಮಾಂಸ 12. ಹಗಲು 14.ನಗಾರಿ 15.ವುನೋ 17.ಕನಿಕರ 18.ವಿನಂತಿ 19.ದನ 20.ಅದಿತಿ 22.ತಮ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಹೆನ್ರಿಕ್ ಕ್ಲಾಸೆನ್
ಹೈದರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್
ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಹೈದರಾಬಾದ್	11	7	4	14
ಪಂಜಾಬ್	10	6	3	13
ಬೆಂಗಳೂರು	9	6	3	12
ರಾಜಸ್ಥಾನ್	10	6	4	12
ಗುಜರಾತ್	10	6	4	12
ಚೆನ್ನೈ	10	5	5	10
ಡೆಲ್ಲಿ	10	4	6	8
ಕೋಲ್ಕತಾ	9	3	5	7
ಮುಂಬೈ	10	3	7	6
ಲಖನೌ	9	2	7	4

ಮಿಚೆಲ್ ಮಾರ್ಷ್ ಸ್ಫೋಟಕ ಶತಕ | ಪಂದ್ಯಕ್ಕೆ 2 ಬಾರಿ ಮಳೆ ಅಡ್ಡಿ | ಆಟ 19 ಓವರ್‌ಗೆ ಸೀಮಿತ

ಆರ್‌ಸಿಬಿಗೆ 213 ರನ್‌ಗಳ ಗೆಲುವಿನ ಗುರಿ

ದೆಹಲಿ: ಇಲ್ಲಿ ಗುರುವಾರ ನಡೆದ ಐಪಿಎಲ್ ಟೂರ್ನಿಯ ಆರ್‌ಸಿಬಿ-ಲಖನೌ ತಂಡಕ್ಕೆ ಮಳೆ ಅಡ್ಡಿಯಾಗಿದ್ದು, ಪಂದ್ಯವನ್ನು 19 ಓವರ್‌ಗೆ ಸೀಮಿತಗೊಳಿಸಲಾಯಿತು. ಮೊದಲು ಬ್ಯಾಟ್ ಮಾಡಿದ ಲಖನೌ 3 ವಿಕೆಟ್‌ಗೆ 209 ರನ್ ಗಳಿಸಿದ್ದು, ಆರ್‌ಸಿಬಿಗೆ ಡಕ್‌ವರ್ತ್- ಲೂಯಿಸ್ ನಿಯಮ ಪ್ರಕಾರ 213 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ಆರ್‌ಸಿಬಿ ಬೌಲಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ಆರಂಭಿಸಿದ್ದ ಲಖನೌ ತಂಡದ ಆರಂಭಿಕ ಆಟಗಾರರಾದ ಮಿಚೆಲ್ ಮಾರ್ಷ್ ಮತ್ತು ಅರ್ಷಿನ್ ಕುಲಕರ್ಣಿ ತಂಡಕ್ಕೆ ಉತ್ತಮ ಆರಂಭವನ್ನು ಒದಗಿಸಿದರು. ಆದರೆ 8 ಓವರ್ ಆದಾಗ ಮಳೆ ಸುರಿಯಲಾರಂಭಿಸಿತು. ಆ ಕಾರಣಕ್ಕಾಗಿ ಪಂದ್ಯವನ್ನು ಅರ್ಧ ಗಂಟೆ ಸ್ಥಗಿತಗೊಳಿಸಲಾಯಿತು.

ಮೊದಲ ವಿಕೆಟ್‌ಗೆ ಲಖನೌ ಜೋಡಿ 9 ಓವರ್‌ಗಳಲ್ಲಿ 95 ರನ್ ಕಲೆ ಹಾಕಿತು. ಮಳೆ ನಿಂತ ತಕ್ಷಣ ಮತ್ತೆ ಪಂದ್ಯವನ್ನು ಮುಂದುವರಿಸಲಾಯಿತು. 24 ಬಾಲ್‌ಗಳಲ್ಲಿ 17 ರನ್ ಕಲೆ ಹಾಕಿದ್ದ ಕುಲಕರ್ಣಿ ಅವರು ಕೃಣಾಲ್ ಪಾಂಡ್ಯ ಬೌಲಿಂಗ್‌ನಲ್ಲಿ ರಜತ್ ಪಾಟೀದಾರ್ ಅವರಿಗೆ ಕ್ಯಾಚ್ ಕೊಟ್ಟು ಪೆವಿಲಿಯನ್‌ಗೆ ತೆರಳಿದರು. ಮಾರ್ಷ್ ಜೊತೆ ನಿಕೋಲಸ್ ಪೂರನ್ ಬ್ಯಾಟಿಂಗ್ ಮುಂದುವರಿಸಿದರು. ಆದರೆ ಮತ್ತೆ 2ನೇ ಸಲ ಪಂದ್ಯಕ್ಕೆ ಮಳೆ ಅಡ್ಡಿ ಪಡಿಸಿತು. ಮಳೆ ನಿಂತ ಬಳಿಕ ಪಂದ್ಯ ಪುನರಾರಂಭವಾಯಿತು. 20 ಓವರ್‌ಗಳ ಪಂದ್ಯವನ್ನು 19 ಓವರ್‌ಗೆ ಇಳಿಸಲಾಯಿತು. ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ಮಾಡಿದ ಮಿಚೆಲ್ ಮಾರ್ಷ್ ಕೇವಲ 56 ಬಾಲ್‌ಗಳಲ್ಲಿ 111ರನ್ ಗಳಿಸಿ ಹೇಜಲ್‌ವುಡ್ ಬೌಲಿಂಗ್‌ನಲ್ಲಿವಿಕೆಟ್ ಒಪ್ಪಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 9 ಬೌಂಡರಿ ಮತ್ತು 9 ಸಿಕ್ಸರ್ ಇದ್ದವು. ನಿಕೋಲಸ್ ಪೂರನ್ 23 ಬಾಲ್‌ಗಳಲ್ಲಿ 38 ರನ್ ಗಳಿಸಿದ್ದ ವೇಳೆ ರಸಿಖ್ ಸಲಾಮ್ ಬೌಲಿಂಗ್‌ನಲ್ಲಿ ಔಟ್ ಆದರು.

ಬಳಿಕ ಕ್ರೀಸ್‌ಗೆ ಬಂದ ಲಖನೌ ತಂಡದ ನಾಯಕ ರಿಷಭ್ ಪಂತ್ 10 ಬಾಲ್‌ಗಳಲ್ಲಿ 32 ರನ್ ಗಳಿಸುವಲ್ಲಿ ಯಶಸ್ವಿಯಾಗಿ ಹಾಗೂ ಮಾರ್ಕ್ರಮ್ 1 ರನ್ ಗಳಿಸಿ ಅಜೇಯರಾಗಿ ಉಳಿದರು. ಗುರುವಾರದ ಪಂದ್ಯದಲ್ಲಿ ಆರ್‌ಸಿಬಿಯ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾದರು. ಹೇಜಲ್‌ವುಡ್, ಕೃಣಾಲ್ ಪಾಂಡ್ಯ, ಮತ್ತು ಸಲಾಮ್ ತಲಾ ಒಂದು ವಿಕೆಟ್ ಪಡೆದರು.

ಭುವನೇಶ್ವರ್ ಕುಮಾರ್ ದಾಖಲೆ: ಐಪಿಎಲ್ ಟೂರ್ನಿಯ ಇತಿಹಾಸದಲ್ಲಿಯೇ 200 ಪಂದ್ಯಗಳನ್ನು ಆಡಿದ ಮೊದಲ ವೇಗದ ಬೌಲರ್ ಎಂಬ ದಾಖಲೆಯನ್ನು ಆರ್‌ಸಿಬಿಯ ಭುವನೇಶ್ವರ್ ಕುಮಾರ್ ಬರೆದಿದ್ದಾರೆ. ಒಟ್ಟಾರೆ 200 ಐಪಿಎಲ್ ಪಂದ್ಯಗಳನ್ನು ಆಡಿದ ಆಟಗಾರರ ಪಟ್ಟಿಯಲ್ಲಿ ಅವರು 12ನೇ ಸ್ಥಾನವನ್ನು ಅಲಂಕರಿಸಿದ್ದಾರೆ. ಈ ಸಾಲಿನಲ್ಲಿರುವ ಎಲ್ಲಾ ಆಟಗಾರರು ಭಾರತದ ಆಟಗಾರರಾಗಿದ್ದಾರೆ.

ಐಪಿಎಲ್ ಫೈನಲ್ ಸ್ಥಳಾಂತರ: ಬಿಸಿಸಿಐ ಸ್ಪಷ್ಟನೆ

ದೆಹಲಿ: ಹಾಲಿ ಐಪಿಎಲ್ ಚಾಂಪಿಯನ್ ತಂಡವಾಗಿರುವ ಆರ್‌ಸಿಬಿ ತವರು ಅಂಗಣದಲ್ಲಿ ಈ ಬಾರಿ ಐಪಿಎಲ್ ಫೈನಲ್ ಪಂದ್ಯವನ್ನು ಆಡಿಸಲು ಆರಂಭದಲ್ಲಿ ಬಿಸಿಸಿಐ ಬಯಸಿತ್ತು, ಆದರೆ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಮತ್ತು ಅಧಿಕಾರಿಗಳಿಂದ ಬಿಸಿಸಿಐಯ ರೂಪಿತ ಮಾರ್ಗಸೂಚಿಗಳು ಹಾಗೂ ಪ್ರೋಟೋಕಾಲ್‌ಗಳ ವ್ಯಾಪ್ತಿಗೆ ಮೀರಿದ ಕೆಲವು ಬೇಡಿಕೆಗಳು ಇಟ್ಟಿತ್ತು. ಈ ಕಾರಣದಿಂದ ಫೈನಲ್ ಪಂದ್ಯದ ಸ್ಥಳವನ್ನು ಬದಲಾಯಿಸಲು ತೀರ್ಮಾನಿಸಲಾಯಿತು ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಹೇಳಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

'ಐಪಿಎಲ್ ಪ್ಲೇಆಫ್ ಪಂದ್ಯಗಳನ್ನು ಆಯೋಜಿಸುವುದು ಯಾವಾಗಲೂ ಬಿಸಿಸಿಐನ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಯಾವುದೇ ಪ್ಲೇಆಫ್ ಪಂದ್ಯಗಳನ್ನು ಆತಿಥ್ಯ ವಹಿಸುವ ಹಕ್ಕಿಲ್ಲ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ವಕ್ತಾರ ವಿನಯ್ ಮೃತ್ಯುಂಜಯ ಹೇಳಿದ್ದಾರೆ. ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ಲೇಆಫ್ಸ್ ಪಂದ್ಯಗಳನ್ನು ಏಕೆ ಆಯೋಜಿಸಲಾಗುತ್ತಿಲ್ಲ ಎಂಬುದರ ಕುರಿತು ಯಾವುದೇ ಅಧಿಕೃತ ಮಾಹಿತಿ ನಮಗೆ ಬಂದಿಲ್ಲ. ಆದ್ದರಿಂದ ಪ್ರಸ್ತುತ ನಮಗೆ ಯಾವುದೇ ಅಧಿಕೃತ ವಿವರಗಳಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಅಹಮದಾಬಾದ್‌ನಲ್ಲಿ ದೊಡ್ಡ



ಸ್ಟೇಡಿಯಂ ಇರುವುದರಿಂದ ಹೆಚ್ಚಿನ ಜನರು ಪಂದ್ಯವನ್ನು ವೀಕ್ಷಿಸಬಹುದು ಎಂಬ ಉದ್ದೇಶದಿಂದ ಐಪಿಎಲ್ ಫೈನಲ್ ಅನ್ನು ಸ್ಥಳಾಂತರಿಸಿರಬಹುದು. ಇದಕ್ಕೆ ಶಾಸಕರಿಗೆ ಟಿಕೆಟ್ ಹಂಚಿಕೆ ಅಥವಾ ಫೈನಲ್ ಪಂದ್ಯ ಸ್ಥಳಾಂತರದ ವಿವಾದಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಳೆದ ವರ್ಷ ಜೂನ್ 4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಜನರು ಮೃತಪಟ್ಟಿದ್ದು, 56 ಮಂದಿ ಗಾಯಗೊಂಡಿದ್ದರು. ಘಟನೆಯ ನಂತರ ಸ್ಟೇಡಿಯಂ ಮುಚ್ಚಲ್ಪಟ್ಟಿದ್ದು 2026ರ ಮಾರ್ಚ್ 28ರವರೆಗೂ ಸಾರ್ವಜನಿಕ ಪ್ರವೇಶವಿರಲಿಲ್ಲ. ಆ ಅವಧಿಯಲ್ಲಿ ಈ ಸ್ಟೇಡಿಯಂನಲ್ಲಿ ತಿಮ್ಮಪ್ಪಯ್ಯ ಸ್ಮರಣಾರ್ಥ ಟ್ರೋಫಿ ಟೂರ್ನಿಯ ಪಂದ್ಯಗಳನ್ನು ಮುಚ್ಚಿದ ಬಾಗಿಲುಗಳಿಂದ ನಡೆಸಲಾಗಿತ್ತು. ಅದೇ ಸಮಯದಲ್ಲಿ ಆರ್‌ಸಿಬಿ ಮಹಿಳಾ ತಂಡ, ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿನ ತನ್ನ ತವರು ಪಂದ್ಯಗಳನ್ನು ಮುಂಬೈ ಮತ್ತು ವಡೋದರಾ ಸೇರಿದಂತೆ ಪರ್ಯಾಯ ಮೈದಾನಗಳಲ್ಲಿ ಆಡಿತ್ತು.

ಆದರೆ ಸಾಮಾನ್ಯವಾಗಿ ಯಾವ ತಂಡ ಹಿಂದಿನ ವರ್ಷ ಐಪಿಎಲ್ ಟ್ರೋಫಿ ಗೆಲ್ಲುತ್ತದೆಯೋ, ಆ ತಂಡದ ತವರು ಮೈದಾನದಲ್ಲಿ ಆ ನಂತರದ ವರ್ಷದ ಐಪಿಎಲ್ ಉದ್ಘಾಟನಾ ಪಂದ್ಯ ಮತ್ತು ಫೈನಲ್ ಪಂದ್ಯ ನಡೆಸುವುದು ವಾಡಿಕೆ ಆಗಿತ್ತು. ಆದರೆ ಇದೀಗ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಈ ಸಲದ ಐಪಿಎಲ್ ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳು ಕೈ ತಪ್ಪಿ ಹೋಗಿವೆ.

ವೇಪಿಂಗ್‌ನ ಮತ್ತೊಂದು ವಿಡಿಯೋ ಈಗ ವೈರಲ್



ಜೈಪುರ: ರಾಜಸ್ಥಾನ್ ರಾಯಲ್ಸ್‌ನ ನಾಯಕ ರಿಯಾನ್ ಪರಾಗ್ ಬಳಿಕ ಇದೀಗ ಪಂಜಾಬ್ ಕಿಂಗ್ಸ್ ತಂಡದ ಹಿರಿಯ ಸ್ಪಿನ್ನರ್ ಯುಜ್ವೇಂದ್ರ ಚಾಹಲ್ ಅವರೀಗ ವೇಪಿಂಗ್ ವಿವಾದದಲ್ಲಿ ಸಿಲುಕಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯಕ್ಕಾಗಿ ಮೇ 6ರ, ಬುಧವಾರದಂದು ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದ ವೇಳೆ ವಿಮಾನದಲ್ಲಿ ಚಾಹಲ್ ಇ-ಸಿಗರೇಟ್ ಬಳಸುತ್ತಿದ್ದರು ಎನ್ನಲಾದ ವಿಡಿಯೊವೊಂದು ವೈರಲ್ ಆಗಿದ್ದು ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ವೈರಲ್ ಆಗಿರುವ ವಿಡಿಯೋದಲ್ಲಿ ಲೆಗ್ ಸ್ಪಿನ್ನರ್ ಚಾಹಲ್ ಅವರು, ತಮ್ಮ ಸಹ ಆಟಗಾರರ ಸಮ್ಮುಖದಲ್ಲೇ ಈ ಕೃತ್ಯವನ್ನು ಮರೆಮಾಚಲು ಪ್ರಯತ್ನಿಸುತ್ತಿರುವುದು ಕಂಡುಬಂದಿದೆ, ಆದರೆ ಈ ವಿಡಿಯೋದ ಸತ್ಯಾಸತ್ಯತೆ ಅಥವಾ ಚಾಹಲ್ ನಿಜವಾಗಿಯೂ ವೇಪಿಂಗ್ ಮಾಡುತ್ತಿದ್ದಾರೆಯೇ ಎಂದು ಇನ್ನೂ ಖಚಿತವಾಗಿಲ್ಲ.

ಕಮಿನ್ಸ್‌ಗೆ 113 ಕೋಟಿ ಆಫರ್



ಸಿಡ್ನಿ: ವಿಶ್ವದ ಫ್ರಾಂಚೈಸಿ ಟಿ20 ಲೀಗ್‌ಗಳಲ್ಲಿ ಹೆಚ್ಚಿನ ಬೇಡಿಕೆ ಇರುವ ಆಸ್ಟ್ರೇಲಿಯಾದ ಬಲಿಷ್ಠ ಆಟಗಾರರನ್ನು ರಾಷ್ಟ್ರೀಯ ತಂಡದ ಸೇವೆಯ ಲಭ್ಯತೆಗಳಿಗೆ ಖಾತ್ರಿ ಪಡಿಸಿಕೊಳ್ಳಲು ಕ್ರಿಕೆಟ್ ಆಸ್ಟ್ರೇಲಿಯಾ ಮುಂದಾಗಿದ್ದು, ಅದಕ್ಕಾಗಿ ಉತ್ತಮ ನಿರ್ಧಾರವನ್ನು ತೆಗೆದುಕೊಂಡಿದೆ. ಆಸ್ಟ್ರೇಲಿಯಾ ತಂಡಕ್ಕೆ ಸದಾ ಲಭ್ಯರಿರಬೇಕೆಂಬ ಉದ್ದೇಶದಿಂದ ಮುಂದಿನ ಮೂರು ವರ್ಷಗಳಿಗೆ ಪ್ಯಾಟ್ ಕಮಿನ್ಸ್ ಅವರಿಗೆ ಕ್ರಿಕೆಟ್ ಆಸ್ಟ್ರೇಲಿಯಾ 113 ಕೋಟಿ ರು. ಆಫರ್ ನೀಡಿದೆ ಎಂದು ವರದಿಯಾಗಿದೆ. ಕೇವಲ ಕಮಿನ್ಸ್ ಮಾತ್ರವಲ್ಲ ಮೂರೂ ಸ್ವರೂಪದ ಆಟಗಾರರಾದ ಟ್ರಾವಿಸ್ ಹೆಡ್ ಹಾಗೂ ಜಾಶ ಹೇಜಲ್‌ವುಡ್‌ಗೂ ಕ್ರಿಕೆಟ್ ಆಸ್ಟ್ರೇಲಿಯಾ ಇಂತಹ ದೊಡ್ಡ ಆಫರ್ ನೀಡಿದೆ ಎಂದು ಹೇಳಲಾಗುತ್ತಿದೆ.

ಫೋಗಟ್‌ಗೆ ಅನುಮತಿ ನಿರಾಕರಣೆ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ವಂಚಿತರಾಗಿದ್ದ ವಿನೇಶ್ ಫೋಗಟ್ ಅವರಿಗೆ ಮತ್ತೊಂದು ಆಘಾತವಾಗಿದೆ. ಭಾರತೀಯ ಕುಸ್ತಿ ಒಕ್ಕೂಟ (ಡಬ್ಲ್ಯುಎಫ್ಐ) ಈ ಸಲದ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತಾ ಮಾನದಂಡಗಳನ್ನು ಘೋಷಿಸಿದ್ದು, ಹೊಸ ಮಾನದಂಡಗಳ ಪ್ರಕಾರ ಅವರು ಈ ವರ್ಷದ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಬಯಸಿದ್ದರೂ ಸಹ ಅವರಿಗೆ ಸಾಧ್ಯವಾಗುವುದಿಲ್ಲ.

ಸಮಾಚಾರ ಸಣ್ಣದಲ್ಲ

ಪಂಜಾಬ್ ಮಾಜಿ ಕ್ರಿಕೆಟಿಗ ಅಮನ್‌ಪ್ರೀತ್ ನಿಧನ



ದೆಹಲಿ: ಪಂಜಾಬ್‌ನ ಮಾಜಿ ಕ್ರಿಕೆಟಿಗ ಅಮನ್ ಪ್ರೀತ್ ಸಿಂಗ್ ಗಿಲ್ ಅವರು ಬುಧವಾರ ತಮ್ಮ 36ನೇ ವಯಸ್ಸಿನಲ್ಲಿ ನಿಧನರಾದರು. ವೇಗದ ಬೌಲರ್ ಆಗಿದ್ದ ಅವರು 2009ರಲ್ಲಿ ಐಪಿಎಲ್ ಟೂರ್ನಿಯಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್ ಪರ ಈ ಹಿಂದೆ ಆಡಿದ್ದರು. ವಿರಾಟ್ ಕೊಹ್ಲಿ ನಾಯಕತ್ವದ 2008ರ ಭಾರತ ಅಂಡರ್-19 ತಂಡದ ಆಟಗಾರರಾಗಿದ್ದರು. ಮಾಜಿ ಕ್ರಿಕೆಟಿಗನ ನಿಧನಕ್ಕೆ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಸಂತಾಪ ಸೂಚಿಸಿದೆ. ಆಯ್ಕೆ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಅವರು, ದೇಶಿ ಕ್ರಿಕೆಟ್‌ನಲ್ಲಿ ಪಂಜಾಬ್ ತಂಡವನ್ನು ಪ್ರತಿನಿಧಿಸಿದ್ದರು. ಅಲ್ಲಿನ ಹಿರಿಯ ಆಯ್ಕೆ ಸಮಿತಿಯಲ್ಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು. ಪ್ರೀತ್‌ಸಿಂಗ್ ಗಿಲ್ ಅವರ ಅಗಲಿಕೆಗೆ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಸಂತಾಪ ಸೂಚಿಸಿದೆ.

ಭಾರತ-ಜಿಂಬಾಬ್ವೆ ಮಹಿಳಾ ಕ್ರಿಕೆಟ್ ಸರಣಿ ಪ್ರಕಟ

ದೆಹಲಿ: ಭಾರತ ಮಹಿಳಾ ತಂಡವು ಅಕ್ಟೋಬರ್‌ನಲ್ಲಿ ರಾಯ್‌ಪುರ ಮತ್ತು ಬರೋಡಾದಲ್ಲಿ ನಡೆಯಲಿರುವ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳಿಗೆ ಜಿಂಬಾಬ್ವೆಯನ್ನು ಎದುರಿಸಲಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಪ್ರಕಟಿಸಿದೆ. ಅ.16ರಿಂದ 20ರ ವರೆಗೆ ಮೂರು ಪಂದ್ಯಗಳು ನಡೆಯಲಿದ್ದು, ಅಕ್ಟೋ ಬರ್ 23ರಿಂದ 28ರ ವರೆಗೆ ಮೂರು ಏಕದಿನ ಪಂದ್ಯಗಳಿಗಾಗಿ ಬರೋಡಾಗೆ ತೆರಳಲಿದೆ. ಕಳೆದ ವರ್ಷ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತ ತಂಡವು ತವರಿನಲ್ಲಿ ಆಡುತ್ತಿರುವ ಮೊದಲ ಏಕದಿನ ಸರಣಿ ಇದಾಗಿದೆ. ಇದಕ್ಕೂ ಮುನ್ನ ಭಾರತ ತಂಡವು ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಆಡಲಿದ್ದು, ಅದು ಜೂನ್ 12ರಿಂದ ಆರಂಭವಾಗಲಿದೆ.

ಅಕ್ಷರ್ ಪಟೇಲ್ ಪಡೆಗೆ ಪ್ಲೇಆಫ್‌ಗೆ ಏರುವಾಸೆ | ರಹಾನೆ ತಂಡಕ್ಕೂ ಪ್ರತಿಷ್ಠೆಯ ಪಂದ್ಯ

ಇಂದು ಡೆಲ್ಲಿಗೆ ಕೋಲ್ಕತಾ ಎದುರಾಳಿ

ದೆಹಲಿ: ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಕೋಲ್ಕತಾವನ್ನು ಎದುರಿಸಲಿದೆ.

ಈಗಾಗಲೇ 10 ಪಂದ್ಯಗಳನ್ನಾಡಿರುವ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 4 ಪಂದ್ಯಗಳಲ್ಲಿ ಗೆಲುವು ಸಾಧಿಸಿ, 6 ಪಂದ್ಯಗಳಲ್ಲಿ ಸೋತು 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ. 9 ಪಂದ್ಯಗಳನ್ನು ಆಡಿರುವ ಅಜಿಂಕ್ಯ ರಹಾನೆ ನಾಯಕತ್ವದ ಕೋಲ್ಕತಾ 3 ಪಂದ್ಯಗಳನ್ನು ಮಾತ್ರ ಗೆದ್ದು, 5 ಪಂದ್ಯಗಳಲ್ಲಿ ಗೆದ್ದು 7 ಅಂಕಗಳೊಂದಿಗೆ 8ನೇ ಸ್ಥಾನದಲ್ಲಿದೆ.

ಐಪಿಎಲ್‌ನಲ್ಲಿ ಪ್ಲೇಆಫ್ ಹಂತಕ್ಕೇರಲು ಕನಿಷ್ಟ 8 ಪಂದ್ಯಗಳನ್ನಾದರೂ ಗೆದ್ದು 16 ಅಂಕಗಳನ್ನು ಸಂಪಾದಿಸಬೇಕಾಗುತ್ತದೆ. ಆದರೆ ಡೆಲ್ಲಿ 4 ಪಂದ್ಯಗಳನ್ನಷ್ಟೇ ಗೆದ್ದಿರುವುದರಿಂದ ಇನ್ನು ಉಳಿದಿರುವ 6 ಪಂದ್ಯಗಳ ಪೈಕಿ 4 ಪಂದ್ಯಗಳಲ್ಲಿ ಗೆದ್ದು ಪ್ಲೇಆಫ್‌ನಲ್ಲಿ ತನ್ನ ಸ್ಥಾನವನ್ನು ಖಾತರಿಪಡಿಸುವ ಆತುರದಲ್ಲಿದೆ. ಡೆಲ್ಲಿ ತಂಡದಲ್ಲಿ ರಾಹುಲ್ ಸೇರಿದಂತೆ ಹಲವು ಆಟಗಾರರು ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಆದರೆ 3 ಪಂದ್ಯಗಳನ್ನಷ್ಟೇ ಗೆದ್ದಿರುವ ಕೋಲ್ಕತಾಗೆ ಪ್ಲೇಆಫ್ ಕಣದಲ್ಲಿ ಉಳಿಯಬೇಕಾದರೆ ಇನ್ನು ಕನಿಷ್ಟ 9 ಅಂಕಗಳಾದರೂ ಬೇಕಾಗುತ್ತದೆ. ಹಾಗಾಗಿ 5 ಪಂದ್ಯಗಳನ್ನು ಅದು ಗೆಲ್ಲಬೇಕಾಗುತ್ತದೆ. ಕೋಲ್ಕತಾ ತಂಡದಲ್ಲಿ ನವದೀಪ್ ಸೈನಿ, ರಿಂಕು ಸಿಂಗ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಮುಜರ್‌ಬಾನಿ ಸೇರಿದಂತೆ ಹಲವರು ಮೂರ್‍ನಾಲ್ಕು ಪಂದ್ಯದಲ್ಲಿ ಈಗಾಗಲೇ ಮಿಂಚಿದ್ದಾರೆ.

2 ತಂಡಗಳಿಗೂ ಇಂದಿನ ಪಂದ್ಯ ಪ್ರತಿಷ್ಠೆ ಆಗಿರುವುದರಿಂದ ರೋಚಕ ಹಣಾಹಣಿ ನಡೆಯುವುದಂತೂ ಖಚಿತ ಎನಿಸಿದೆ.

ಮುಖಾಮುಖಿ: ಡೆಲ್ಲಿ ಮತ್ತು ಕೋಲ್ಕತಾ ತಂಡಗಳು ಈ ವರೆಗೆ ಒಟ್ಟು 35 ಸಲ ಮುಖಾಮುಖಿ ಆಗಿವೆ. 19 ಬಾರಿ ಕೋಲ್ಕತಾ ಜಯ ಪಡೆದರೆ, ಡೆಲ್ಲಿ 15 ಸಲ ಗೆಲುವನ್ನು ಪಡೆದಿದೆ.

ಇಂದಿನ ಪಂದ್ಯ

ಡೆಲ್ಲಿ vs ಕೋಲ್ಕತಾ

ಸ್ಥಳ	: ಅರುಣ್ ಜೇಟ್ಲಿ ಕ್ರೀಡಾಂಗಣ ದೆಹಲಿ
ಸಮಯ	: ರಾತ್ರಿ 7.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್‌ಸ್ಟ್ರೀಮಿಂಗ್	: ಜಿಯೋ ಸ್ಪೋರ್ಟ್ಸ್

ಆಸೀಸ್ ಆಟಗಾರರಿಂದ ಪಾಕ್ ಪ್ರವಾಸ ಮೊಟಕು

ದೆಹಲಿ: ಐಪಿಎಲ್ ಟೂರ್ನಿಯಲ್ಲಿ ತಮ್ಮ ಫ್ರಾಂಚೈಸಿಗಳ ಪರ ಆಡುವ ಸಲುವಾಗಿ ಆಸ್ಟ್ರೇಲಿಯಾ ತಂಡದ ಹಿರಿಯ ಆಟಗಾರರು ಮುಂಬರುವ ಪಾಕಿಸ್ತಾನ ಪ್ರವಾಸದಿಂದ ಹಿಂದೆ ಸರಿದಿದ್ದಾರೆಂದು ವರದಿಯಾಗಿದೆ. ಪಾಕಿಸ್ತಾನದಲ್ಲಿ ನಡೆಯುವ ಏಕದಿನ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡವು ಹೇಜಲ್‌ವುಡ್, ಪ್ಯಾಟ್ ಕಮಿನ್ಸ್ ಹಾಗೂ ಮಿಚೆಲ್ ಸ್ಟಾರ್ಕ್ ಅನುಪಸ್ಥಿತಿಯಲ್ಲಿ ಆಡಲಿದೆ. ಹಾಗಾಗಿ ಆಸೀಸ್‌ನ ಪ್ರಮುಖ ಆಟಗಾರರು ತಮ್ಮ ರಾಷ್ಟ್ರೀಯ ತಂಡಕ್ಕೆ ಸೇರ್ಪಡೆಯಾಗುವುದರ ಬದಲು ಐಪಿಎಲ್ ಟೂರ್ನಿಯ ಪ್ಲೇಆಫ್ಸ್ ಅನ್ನು ಆರಿಸಿದ್ದಾರೆ.

ಮೇ 30ರಿಂದ ಜೂನ್ 4ರವರೆಗೆ ನಡೆಯುವ ಮೂರು ಪಂದ್ಯಗಳ ಏಕದಿನ ಸರಣಿಯ ಮೂಲಕ ಆಸ್ಟ್ರೇಲಿಯಾ ತಂಡದ ಪಾಕಿಸ್ತಾನದ ವೈಟ್‌ಬಾಲ್ ಪ್ರವಾಸ ಆರಂಭವಾಗಲಿದೆ. ಅದಾದ ಬಳಿಕ ಏಕದಿನ ಮತ್ತು ಟಿ20 ಸರಣಿಗಾಗಿ ಆಸ್ಟ್ರೇಲಿಯಾ ತಂಡ ಜೂನ್ 9ರಂದು ಬಾಂಗ್ಲಾದೇಶ

ಪ್ರವಾಸವನ್ನು ಹಮ್ಮಿಕೊಂಡಿದೆ. ಹಾಗಾಗಿ ಹಿರಿಯ ಆಟಗಾರರ ಅನುಪಸ್ಥಿತಿಯಲ್ಲಿ ತಂಡವನ್ನು ಆಯ್ಕೆ ಮಾಡುವ ವಿಷಯದಲ್ಲಿ ಆಸ್ಟ್ರೇಲಿಯಾ ಆಯ್ಕೆದಾರರಿಗೆ ತಲೆ ನೋವು ಶುರುವಾಗಿದೆ. ಐಪಿಎಲ್ ಟೂರ್ನಿಯಲ್ಲಿ ಭಾಗವಾಗಿರುವ ಇನ್ನುಳಿದ ಆಸ್ಟ್ರೇಲಿಯಾ ಆಟಗಾರರು ಅವರವರ ತಂಡಗಳು ಲೀಗ್ ಹಂತವನ್ನು ಹೇಗೆ ಮುಗಿಸಲಿವೆ ಎಂಬುದರ ಆಧಾರದ ಮೇಲೆ ಅವರ ಪಾಕಿಸ್ತಾನ ಪ್ರವಾಸ ನಿರ್ಧಾರ ಮಾಡಲಿದ್ದಾರೆ.

ವಿಟಾಕೀಸ್

ಮಾಸ್ ಅವತಾರದಲ್ಲಿ ವಿನಯ್

ಒಂದು ಸರಳ ಪ್ರೇಮ ಕತೆ ಹೇಳಿದ ನಟ ವಿನಯ್ ರಾಜ್‌ಕುಮಾರ್, ಗ್ರಾಮಾಯಣದ ಮೂಲಕ ಮಿಂಚಲು ಸಿದ್ಧವಾಗಿದ್ದಾರೆ. ಇದರ ಜತೆಗೆ ಸಿಟಿಲೈಟ್ಸ್ ಸಿನಿಮಾದ ಮೂಲಕವೂ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಈ ನಡುವೆಯೇ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸುತ್ತಿದ್ದಾರೆ. ವಿನಯ್ ರಾಜ್‌ಕುಮಾರ್ ಹುಟ್ಟುಹಬ್ಬದ ದಿನದಂದೇ ಹೊಸ ಚಿತ್ರ ಘೋಷಣೆಯಾಗಿದೆ. ಮಾಚಿಸ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರಲಿದ್ದು, ಬಿ.ಎಸ್.ಪಿ ವರ್ಮ ಮಾಚಿಸ್' ಚಿತ್ರ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಸುರೇಶ್ ಗೌಡ ಹೆಣ್ಣೂರು ಚಿತ್ರಕ್ಕೆ ಬಂಡವಾಳ ಹೂಡಿದ್ದು, ಸದ್ಯ ಸಿನಿಮಾದ ಪೋಸ್ಟರ್ ರಿಲೀಸ್ ಆಗಿದ್ದು ವಿನಯ್ ರಾಜ್‌ಕುಮಾರ್ ಮಾಸ್ ಲುಕ್‌ನಲ್ಲಿ ಮಿಂಚಿದ್ದಾರೆ. ಇದನ್ನು ಗಮನಿಸಿದರೆ ಮಾಚಿಸ್ ಭೂಗತ ಲೋಕದ ಕಥೆಯನ್ನು ಒಳಗೊಂಡಿದೆ ಎಂಬುದು ತಿಳಿಯುತ್ತದೆ. ಸಿಗರೇಟ್ ಸೇದುತ್ತಾ ರಾ ಲುಕ್‌ನಲ್ಲಿ ಮಿಂಚಿರುವ ವಿನಯ್ ಲುಕ್ ಗಮನಸೆಳೆಯುತ್ತದೆ. ಆದರ್ಶ ಛಾಯಾಗ್ರಹಣ, ಕಿರಣ್ ಸಂಕಲನ, ಗುಣ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ಕೆ.ರವಿ ವರ್ಮಾ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇರಲಿದೆ. ಇದೇ ಜುಲೈನಿಂದ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ.

ಸಂಭ್ರಮದಲ್ಲಿ ಲವ್ ಮಾಕ್ಟೇಲ್

ಡಾರ್ಲಿಂಗ್ ಕೃಷ್ಣ ನಿರ್ದೇಶನ ಮಾಡಿ, ನಾಯಕನಾಗಿ ನಟಿಸಿರುವ ಲವ್ ಮಾಕ್ಟೇಲ್3 ಚಿತ್ರ, ಮತ್ತೊಂದು ಮಹತ್ವದ ಮೈಲಿಗಲ್ಲನ್ನು ದಾಟಿಕೊಂಡಿದೆ. ಯಶಸ್ವಿಯಾಗಿ 50 ದಿನ ಪೂರೈಸಿಕೊಂಡಿರೋ ಸಂಭ್ರಮವೀಗ ಚಿತ್ರತಂಡವನ್ನು ಎದುರುಗೊಂಡಿದೆ. ಈ ಸಲುವಾಗಿ ಇಂಥಾದ್ದೊಂದು ರೋಮಾಂಚಕ ಗೆಲುವು ತಂದುಕೊಟ್ಟ ಪ್ರೇಕ್ಷಕರಿಗೆಲ್ಲ ಡಾರ್ಲಿಂಗ್ ಕೃಷ್ಣ ಧನ್ಯವಾದ ಸಲ್ಲಿಸಿದ್ದಾರೆ.

ಮಾಕ್ಟೇಲ್3 ಚಿತ್ರ, ಈ ವರ್ಷದ ಸೂಪರ್ ಹಿಟ್ ಚಿತ್ರವಾಗಿ ದಾಖಲಾಗಿದೆ. ಐವತ್ತು ದಿನಗಳನ್ನು ದಾಟಿಕೊಳ್ಳುವ ಮೂಲಕ ಈ ಗೆಲುವಿಗೆ ಮತ್ತಷ್ಟು ರಂಗು ಬಂದಂತಾಗಿದೆ. ಬಿಡುಗಡೆಗೆ ಸುಮುಹೂರ್ತ ಒದಗಿ ಬಂದಿದ್ದರೂ ಸಹ, ಈ ಚಿತ್ರಕ್ಕೆ ಧುರಂಧರ್ 2 ನಂಥಾ ಮಹಾ ಸವಾಲು ಎದುರಾಗಿತ್ತು. ಅದೆಲ್ಲವನ್ನೂ ತನ್ನ ಆಂತರ್ಯದ ಕಸುವಿನಿಂದಲೇ ಎದುರಿಸಿದ ಲವ್ ಮಾಕ್ಟೇಲ್3 ಇದೀಗ ನೂರರ ಗಡಿಯತ್ತ ದಾಪುಗಾಲಿಡುತ್ತಿದೆ.

ಕ್ರಿಸ್‌ಮಿ ಬ್ಯಾನರಿನಡಿಯಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್, ಸಂವೃತ, ಅಮೃತಾ ಅಯ್ಯಂಗಾರ್, ದಿಲೀಪ್ ರಾಜ್, ಶ್ವೇತಾ ಪ್ರಸಾದ್, ರಚೆಲ್ ಡೇವಿಡ್, ನಯೇರಾ, ಜಗದೀಶ್, ಅಭಿಲಾಶ್, ಗಿರಿರಾಜ್, ದಳಪತಿ ಮುಂತಾದವರ ತಾರಾಗಣ ಈ ಚಿತ್ರಕ್ಕಿದೆ. ಶ್ರೀ ಕ್ರೇಜಿ ಮೈಂಡ್ಸ್ ಛಾಯಾ ಗ್ರಹಣ ಮತ್ತು ಸಂಕಲನ, ನಕುಲ್ ಅಭಯಂಕರ್ ಸಂಗೀತ, ಅಮರ್ ಮತ್ತು ಜೋನಾ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಜನ ನಾಯಗನ್ ಟೈಟಲ್ ಕಾರ್ಡ್ ಚೇಂಜ್

ವಿಜಯ್ ಅವರ 'ತಮಿಳಗ ವೆಟ್ರಿ ಕಳಗಂ' ಪಕ್ಷವು ಭರ್ಜರಿ ಗೆಲುವು ಕಂಡಿದ್ದು, 'ಜನ ನಾಯಗನ್' ಚಿತ್ರದ ಮೇಲೂ ಅವರ ಅಭಿಮಾನಿಗಳಿಗೂ ಇನ್ನಿಲ್ಲದಂತಹ ಕುತೂಹಲ ಇದೆ, ಏಕೆಂದರೆ, ಇದು ವಿಜಯ್ ಅವರ ಕೊನೆಯ ಸಿನಿಮಾ ಎನ್ನಲಾಗುತ್ತಿದೆ. ಇದೀಗ ವಿಜಯ್ ಚುನಾವಣೆಯಲ್ಲಿ ಗೆದ್ದ ಬಳಿಕ 'ಜನ ನಾಯಗನ್' ಚಿತ್ರದ ಪ್ರೋಮೋ ಟೈಟಲ್ ಕಾರ್ಡ್‌ನಲ್ಲಿ ಭಾರಿ ಬದಲಾವಣೆ ಆಗಿದೆ. ಆ ಕುರಿತ ವಿಡಿಯೋ ವೈರಲ್ ಆಗಿದೆ.

ಚಿತ್ರಮಂದಿರಗಳಲ್ಲಿ ಜನ ನಾಯಗನ್ ಸಿನಿಮಾದ ಪ್ರೋಮೋ ಪ್ರದರ್ಶನವಾಗುತ್ತಿದ್ದು, ಅದರಲ್ಲಿ ತಮಿಳುನಾಡಿನ 'ಮಾನ್ಯ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ನಟಿಸಿರುವ ಜನ ನಾಯಗನ್...' ಎಂದು ಸಂಬೋಧಿಸುವ ವಾಕ್ಯವಿದೆ. ಚಿತ್ರಮಂದಿರವೊಂದರಲ್ಲಿ ಈ ಹೊಸ ಟೈಟಲ್ ಕಾರ್ಡ್ ಪ್ರದರ್ಶನವಾದ ಬೆನ್ನಲ್ಲೇ ಅಭಿಮಾನಿಗಳ ಸಡಗರ ಮುಗಿಲು ಮುಟ್ಟಿದೆ. ಥಿಯೇಟರ್‌ಗಳ ಒಳಗೆ ಅಭಿಮಾನಿಗಳು ಕುಣಿದು ಕುಪ್ಪಳಿಸುತ್ತಿದ್ದಾರೆ. ಈ ಟೈಟಲ್ ಕಾರ್ಡ್‌ನ ವಿಡಿಯೋಗಳು ವೈರಲ್ ಆಗುತ್ತಿದ್ದಂತೆಯೇ, ನೆಟ್ಟಿಗರು ಇದನ್ನು ವಿವಿಧ ರೀತಿಯಲ್ಲಿ ಬಣ್ಣಿಸುತ್ತಿದ್ದಾರೆ. ಭಾರತದ ನಟನೊಬ್ಬನಿಗೆ ಸಿಕ್ಕ ಮೊದಲ 'ಸಿಎಂ' ಟೈಟಲ್ ಕಾರ್ಡ್ ಎಂದು ಕರೆದಿದ್ದಾರೆ. ಜನ ನಾಯಗನ್ ಸಿನಿಮಾ ಯಾವಾಗ ರಿಲೀಸ್ ಆಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ.

ದಕ್ಷಿಣದ ನಟಿಯರಿಗೆ ಗೌರವ ಇಲ್ಲ: ಸಿಮ್ರಾನ್

ಬಾಲಿವುಡ್‌ನಲ್ಲಿ ಕೆಲಸ ಮಾಡುವಾಗ ದಕ್ಷಿಣದ ಅನೇಕ ನಟರು ಎದುರಿಸುವ ಗೌರವದ ಕೊರತೆ, ವ್ಯವಸ್ಥೆಯ ಕೊರತೆಯ ಬಗ್ಗೆ ನಟಿ ಸಿಮ್ರಾನ್ ಟೀಕಿಸಿದ್ದಾರೆ. ಹಿಂದಿ ಚಲನಚಿತ್ರ ಸೆಟ್‌ಗಳಲ್ಲಿ ತಮ್ಮನ್ನು ಕಡೆಗಣಿಸಲಾಗಿದೆ ಮತ್ತು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ಸಿಮ್ರಾನ್ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

ನಟಿ ಈ ಬಗ್ಗೆ ಮಾತನಾಡಿ, 'ಹಿಂದಿ ಚಲನಚಿತ್ರಗಳ ಆಫರ್‌ಗಳನ್ನು ತಿರಸ್ಕರಿಸಲು ಒಂದು ಪ್ರಮುಖ ಕಾರಣವೆಂದರೆ ಜನರೊಂದಿಗೆ ಸಂಪರ್ಕ ಸಾಧಿಸದ ಕಾರಣ ನಾನು ಹಲವು ಬಾರಿ ಹಿಂದಿ ಸಿನಿಮಾ ಮಾಡಲು ನಿರಾಕರಿಸಿದ್ದೇನೆ. ನಾವು ಇಲ್ಲಿಗೆ ಬರುವ ಮೊದಲು ದಕ್ಷಿಣದಲ್ಲಿ ಮಾಡಿದ ಕೆಲಸ ಮತ್ತು ನಟರ ಪರಂಪರೆಯನ್ನು ಅವರು ನೋಡಿಲ್ಲ ಎಂದು ಅನಿಸುತ್ತದೆ. ಇದು ನನ್ನನ್ನು ಕಾಡುತ್ತಿದೆ. ಗೌರವವಿಲ್ಲ. ನನ್ನ ಜೀವನದ ಅರ್ಧಕ್ಕಿಂತ ಹೆಚ್ಚಿನದನ್ನು ನಾನು ಸಿನಿಮಾಗೆ ನೀಡಿದ್ದೇನೆ ಮತ್ತು ಅದರ ಹೊರತಾಗಿಯೂ, ನನಗೆ ಹೋದ ಕಡೆ ಗೌರವ ಕೊರತೆಯಿದ್ದರೆ, ಅದು ನೋವುಂಟು ಮಾಡುತ್ತದೆ. ಅದು ಅರ್ಥಹೀನ' ಎಂದು

ಸಿಮ್ರಾನ್ ಹೇಳಿದರು. ದಕ್ಷಿಣ ಭಾರತದ ನಟರಿಗೆ ವಸತಿ ಮತ್ತು ಪ್ರಯಾಣ ವ್ಯವಸ್ಥೆಗಳನ್ನು ನಿರ್ವಹಿಸುವ ವಿಧಾನವನ್ನು ನಟಿ ವಿವರಿಸುತ್ತಾ, ಅವರನ್ನು ಅಸಮಾಧಾನಗೊಳಿಸಿದ ರೀತಿಯ ಬಗ್ಗೆ ವಿವರಿಸಿದರು ಸೌತ್ ನಟರ ಬಗ್ಗೆ ನಿರ್ಮಾಪಕರು ಕೂಡ ಚೌಕಾಶಿ ಮಾಡುತ್ತಾರೆ. ನನ್ನೊಂದಿಗೆ ಪ್ರಯಾಣಿಸಬಹುದಾದ ಜನರ ಸಂಖ್ಯೆಯನ್ನು ಅವರು ಮಿತಿಗೊಳಿಸುತ್ತಾರೆ. 'ನೀವು ಅಷ್ಟೊಂದು ಸಿಬ್ಬಂದಿಯನ್ನು ಕರೆತರಲು ಸಾಧ್ಯವಿಲ್ಲ' ಎಂದು ಅವರು ಹೇಳಿದ್ದಾರೆ.